ಬೆಲೆ ಎರಡು ಆಣೆ

ಕರ್ಮವೀರ


ಅಖಿಲ ಕರ್ನಾಟಕದಲ್ಲಿ ಅತ್ಯಂತ ಜನಪ್ರಿಯ ವಾರಪತ್ರಿಕೆ

ಸಂಪಾದಕರು:
ಹ. ರಾ. ಪುರೋಹಿತ, ಎಂ. ಎ.


Editor,
H. R. PUROHIT, M. A

— [ಸಂಪುಟ ೧೯] — ಹುಬ್ಬಳ್ಳಿ ಸೋಮವಾರ ತಾರೀಖು ೫—೧—೧೯೪೮ — [ಸಂಚಿಕೆ ೪೮] —

ರಾಷ್ಟ್ರಾಧ್ಯಕ್ಷ ರಾಜೇಂದ್ರಪ್ರಸಾದರು



" ಮಹಾತ್ಮರ ಉಪದೇಶದಂತೆ ವರ್ತಿಸಿದರೆ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಕ್ಷೇತ್ರಗಳಲ್ಲಿರುವ ಸ್ವಾರ್ಥ, ದ್ವೇಷ, ಅಸೂಯೆ ಮೊದಲಾದ ದುಷ್ಟಶಕ್ತಿಗಳನ್ನು ಗೆಲ್ಲಬಹುದೆಂಬುದರಲ್ಲಿ ನನಗೆ ಎಳ್ಳಷ್ಟೂ ಸಂದೇಹವಿಲ್ಲ. "



ಔದಾರ್ಯದ ಉರುಳಲ್ಲಿ

ಬರೆದವರು, ಶ್ರೀ ಶಿವರಾಮ ಕಾರಂತರು. ಪ್ರಕಾಶಕರು ಹರ್ಷ ಮುದ್ರಣ ಪ್ರಕಟನಾಲಯ, ಪುತ್ತೂರು. ಬೆಲೆ ೩ರೂ. ರೆಕ್ಸಿನ್ ೩॥, ಚರ್ಮದ ಬೈಂಡಿಂಗ್ ೭॥ ರೂ.

ಇದೊಂದು ಸಾಮಾಜಿಕ ಕಾದಂಬರಿ. ಇದರಲ್ಲಿಯ ದಯಾನಂದ ರಾಯರ ಪಾತ್ರವೊಂದು ನಿಜವಾದ ವ್ಯಕ್ತಿಯದೆಂದು ಗ್ರಂಥಕರ್ತರೆಂದಿದ್ದಾರೆ. ಉಳಿದ ವ್ಯಕ್ತಿಗಳಾದರೂ ಹೆಚ್ಚು ಕಡಿಮೆ ನಿಜವ್ಯಕ್ತಿಗಳ ಪ್ರತಿಬಿಂಬಗಳೇ ಎಂದು ನಾವು ತಿಳಿದರೆ ತಪ್ಪಾಗದು. ದಕ್ಷಿಣ ಕನ್ನಡದಲ್ಲಿ ಶ್ರೀ ಕಾರ್ನಾಡು ಸದಾಶಿವರಾಯರೆಂಬೊಬ್ಬ ಕಾಂಗ್ರೆಸ್ ಕಾರ್ಯಕರ್ತರು ಈ ಕಥೆಯಲ್ಲಿಯ ಜನಾರ್ದನರಾಯರೆಂದು ತೋರಾಡಿದ್ದು, ಅವರ ಜೀವನದ ಹಲವಂಶಗಳು ಇಲ್ಲಿ ಬಂದಿವೆಯೆಂದು ಕೆಲವರೆನ್ನುತ್ತಾರೆ. ಮುನ್ನುಡಿಯಲ್ಲಿ ಶ್ರೀ ಕಾರಂತರೇ ಅಭಿಪ್ರಾಯಪಟ್ಟಿರುವರಂತೆ ಇದೊಂದು ವಾಸ್ತವ ಚಿತ್ರ: ಉದಾತ್ತ ವ್ಯಕ್ತಿಯೊಬ್ಬನು ದೇಶೋದ್ಧಾರ ಪ್ರಯತ್ನದಲ್ಲಿ ವಿಫಲನಾದ ಕಥೆ. ಅವನ ಸತ್ಪ್ರಯತ್ನ, ನಿಃಸ್ವಾರ್ಥ ಸೇವೆ ಯಾವುದಕ್ಕೂ ಸೋತರು, ಆ ಸೋಲನ್ನು ಸಹಿಸಿಕೊಳ್ಳುವ ಸ್ಥೈರ್ಯವೊಂದೇ ದೈವದತ್ತವಾದ ಪಾರಿತೋಷಕವಲ್ಲದೆ ಸಾಮಾಜಿಕರಿಂದ ಮತ್ತೇನೂ ಸಿಗದಿರುವುದೊಂದು ಕಟುಸತ್ಯ. ಇದು ನಿತ್ಯನೂತನ, ಅನುಭವಿಸಿದ್ದ ಮತ್ತು ನಿರಾಶೆ ನಿರ್ವೇದಗಳ ಮೂಲಕ ಸಾತ್ವಿಕವಾದ ಕೆಚ್ಚನ್ನು ಕೆರಳಿಸುವ, ಉದ್ದೀಪಿಸುವ ದುರ್ನಿವಾರ್ಯವಾದ ಪ್ರಚೋದಕ.

ಕಥಾಸಾರಾಂಶ ಹೀಗಿದೆ:

ರಾಧಾಕೃಷ್ಣನೆಂಬೊಬ್ಬ ಸಾಮಾನ್ಯ ಸಾತ್ವಿಕನು ಪ್ರಾಮಾಣಿಕತೆಯಿಂದ ದೇಶದ ಸ್ವಾತಂತ್ರ್ಯ ಸಮರದಲ್ಲಿ ಭಾಗವಹಿಸಲು ಬದ್ಧಕಂಕಣನಾಗುತ್ತಾನೆ. ಅವನಿಗೆ ಮೊದಲು ಸಹಾರಾಮ ಸದಾನಂದರೆಂಬಿಬ್ಬರು ಗೆಳೆಯರಾಗಿರುವರು. ಅವರೊಡನೆ ಇವನು ಸ್ವಾತಂತ್ರ್ಯ ಸಮರನಿಧಿಗೆ ಹಣ ಎತ್ತಲು ಹೋಗಿ ನಿರಾಶನಾಗುತ್ತಾನೆ. ಗೆಳೆಯರು ತಂತಮ್ಮ ದಾರಿ ಹಿಡಿಯುವರು. ಏಕಾಕಿಯಾಗಿ ಉಳಿದ ರಾಧಾಕೃಷ್ಣನು ನಾನಾ ಎಡೆಗಳಲ್ಲಿ ತಿರುಗಿ, ಹಳ್ಳಿಗಳಲ್ಲಿ ಶಾಲೆ ನಡೆಸ ಹೋಗಿ ಹಳ್ಳಿಗರ ಸಹಕಾರ ಪಡೆಯಲಾರದೆ, ಸಕ್ಕಳ ಸರಳ ವ್ಯವಹಾರ ಮತ್ತು ನೂಲುಗಾರಿಕೆ ಮುಂತಾದವುಗಳಿಗೆ ಮುಗ್ಧನಾಗಿ ಅವಳನ್ನು ಮದುವೆಯಾಗಿ ಮಂಗಳೂರಿಗೆ ಹೋಗಿ ದಲಿತಾಶ್ರಮವೊಂದನ್ನು ತೆರೆದು ಕೆಲಸ ಮಾಡತೊಡಗುವನು. ಅಲ್ಲಾದರೂ ಇವನಿಗೆ ಸರಿಯಾದ ಪ್ರೋತ್ಸಾಹ ಸಿಗಲಿಲ್ಲ. ದಲಿತ ವಿದ್ಯಾರ್ಥಿಗಳಿಗೆ ಕೈಗೆಲಸ ಕಲಿಸುತ್ತಿರುವಲ್ಲಿ ಧನಸಹಾಯ ಸಿಗದೆ, ಅವರ ತಂದೆತಾಯಿಂದಿರ ಮೌಢ್ಯಕ್ಕೆ ತುತ್ತಾಗಿ, ಆಶ್ರಮಕ್ಕೆ ವಿದ್ಯಾರ್ಥಿಗಳು ಬರದೆ ಎಲ್ಲ ನಿಂತು ಹೋಗುವುದು. ಆನಂತರ ಮಲೆನಾಡಿಗೆ ಹೋಗಿ ಪರ ಸರಕಾರದ ದಬ್ಬಾಳಿಕೆಗೆ ತುತ್ತಾದ ಹಳ್ಳಿಗರ ಉದ್ಧಾರಕ್ಕೆ ಸೊಂಟಕಟ್ಟಿ ನಿಂತು, ರಾಧಾಕೃಷ್ಣನು ಕೊನೆಗೆ ಸಫಲ ಪ್ರಯತ್ನನಾಗುವನು; ಮನೆಗೆ ಮರಳಿ ಪ್ರಭುವೆಂಬ ಗೆಳೆಯನ ನೆರವಿಂದ ಮಂಗಳೂರಲ್ಲೊಂದು ಗೋಶಾಲೆ ಮತ್ತು ಕೂಲಿ ಶಾಲೆಗಳನ್ನು ತೆರೆಯುತ್ತಾನೆ. ಕಾಲಕ್ರಮೇಣ ಮೋಸದ ಕೃತ್ಯದಿಂದ ಹಣತಂದು ಶಾಲೆಗಳನ್ನು ಪ್ರಭು ನಡೆಸುತ್ತಿರುವುದು ತಿಳಿದು ಬಂದು, ಅವುಗಳಲ್ಲಿ ಪಿಂಕ್ಕವೆಲ್ಲವನ್ನು ಬಿಟ್ಟು ಇವನು ಗೋಶಾಲೆಯೊಂದನ್ನುಳಿಸಿಕೊಂಡು ನಿಷ್ಪ್ರಭನಾಗಿ ಕಾಲಯಾಪನೆ ಮಾಡುವನು. ಇಲ್ಲಿಗೆ ಕಾದಂಬರಿ ಕೊನೆಗೊಳ್ಳುತ್ತದೆ.

ದಲಿತಾಶ್ರಮದಲ್ಲಿ ರಾಧಾಕೃಷ್ಣನಿಗೆ ನೆರವಾದವರಲ್ಲಿ ಕಡೆಯತನಕ ಉಳಿದವನು ಜಾರಪ್ಪನೊಬ್ಬನೇ. ಅಲ್ಲಿಯ ಶಿಷ್ಯರಲ್ಲಿ ಕಡೆಯತನಕ ಸಾತ್ವಿಕನಾಗಿ, ಗುರುಭಕ್ತಿ ದೇಶಪ್ರೇಮಗಳಿಂದ ಬಾಳಿ ದೇಶಸೇವೆ ಗುರುಸೇವೆ ಮಾಡಿದ ಶ್ಯಾಮನೆಂಬ ಪಾತ್ರವು ಮನೋಹರವಾಗಿ ಚಿತ್ರಿಸಲ್ಪಟ್ಟಿದೆ.

ಕಾಂಗ್ರೆಸ್ ಕೆಲಸಗಾರರೆಂದು ಸ್ವಕೀರ್ತಿಯನ್ನು ಲಾಟರಿ, ಸಾವಕಾರಿಕೆ ಇತ್ಯಾದಿಗಳಿಂದ ಬೆಳೆಸಿಕೊಳ್ಳಹೋದ ಪ್ರಭು ಮತ್ತು ಡಾ. ನಂದರಂಥ ಮನುಷ್ಯರು ಕಾಣಸಿಗುವುದು ಅಪರೂಪವಲ್ಲ. ಔದಾರ್ಯದ ಉರುಳಲ್ಲಿ ತಾವೇ ಸಿಕ್ಕಿ ಹತಪ್ರತಿಭರಾದವರೆಂದರೆ ರಾಧಾಕೃಷ್ಣ ಮತ್ತು ಅವನ ಬೆಂಬಲಿಗರಾದ ದಯಾನಂದರಾಯರು, ಈ ಇಬ್ಬರು ಪರೋಪಕಾರ ಮಾಡಹೋಗಿ ದಿವಾಳಿಯಾದವರಲ್ಲಿ ರಾಧಾಕೃಷ್ಣನಿಗಿಂತಲೂ ದಯಾನಂದರಾಯರೇ ಹೆಚ್ಚೆನಿಸುತ್ತಾರೆ.

ಸಾಹಿತ್ಯವು ಜೀವನದ ಪ್ರತಿಬಿಂಬ, ಕನ್ನಡಿ ಎಂಬುದನ್ನು ಈ ಕಾದಂಬರಿ ಸಾರ್ಥಕ ಪಡಿಸಿದೆ. ಇದರಿಂದ ಕಾಂತಾ ಸಮ್ಮಿತವಾಗಿ ಓದುಗರಿಗೆ ಸತ್ಯಬೋಧವಾಗುವುದೆಂದು ಧಾರಾಳವಾಗಿ ಹೇಳಬಹುದು. ಈ ಕಠೋರ ಸತ್ಯದ ಸಾಕ್ಷಾತ್ಕಾರದಿಂದ ಸಾಮಾಜಿಕರಲ್ಲಿ ನೂರಕ್ಕೆ ಹತ್ತು ಜನರ ಹೃದಯವಾದರೂ ಪರಿವರ್ತನ ಹೊಂದದಿದ್ದರೆ ನಮ್ಮ ನಾಡಿಗೆ ಸದ್ಗತಿ ಸಿಗದೆಂದು ಘಂಟಾಘೋಷವಾಗಿ ಭವಿಷ್ಯ ನುಡಿಯಬಹುದು. ಇದೇ ಒಂದು ನಿಕಷ ನಿಜವಾದ ರಸಿಕತೆಯ ಅಗ್ನಿ ಪರೀಕ್ಷೆ. ರಾಮಾಯಣವನ್ನು ಓದಿದ ಮೇಲೆರಾಮನಂತೆ ನಮ್ಮ ನಡತೆಯನ್ನು ತಿದ್ದಿಕೊಳ್ಳಬೇಕು, ರಾವಣಪ್ರವೃತ್ತಿಯನ್ನು ಬಿಡಬೇಕು ಎಂಬ ಅರಿವು ಓದುಗರಲ್ಲಿ ಮೂಡದಿದ್ದರೆ, ಅಂಥವರ ರಸಿಕತೆ ಅಸಂಪೂರ್ಣವೆಂದು ಹೇಳುವ ಧಾರ್ಷ್ಟ್ಯವನ್ನು ನಾವು ವಹಿಸಬಲ್ಲೆವು. ಇಲ್ಲಿಯೂ ಹಾಗೆಯೇ. ಇದನ್ನೋದಿ ಸಮಾಜದ ಬಗ್ಗೆ ತಾವು ಹೇಗೆ ಭಾವಿಸುವೆವು, ಹೇಗೆ ನಡೆದುಕೊಳ್ಳುವೆವು ಎಂದು ಕ್ಷಣಕಾಲ ಆತ್ಮನಿರೀಕ್ಷಣೆ ಮಾಡಿಕೊಂಡು ಸುಧಾರಣೆ ಮಾಡಿಕೊಳ್ಳುವ ಪ್ರಯತ್ನದಲ್ಲಿ ತೊಡಗಲು ತಮ್ಮಲ್ಲಿ ಪ್ರವೃತ್ತಿಯುಂಟಾಗದಿದ್ದಲ್ಲಿ ವಾಚಕರು ತಾವು ಕೇವಲ ವಾಚಕರಲ್ಲದೆ ಮಾನವತ್ವವನ್ನು, ರಸಿಕತೆಯನ್ನು ನೂರಕ್ಕೆ ನೂರುಪಾಲು ಉಳ್ಳವರಲ್ಲ ಎಂದು ಧಾರಾಳವಾಗಿ ಅರಿತುಕೊಳ್ಳಬಹುದು. ಇಂತಹ ಸತ್ಯ ಸಂದೇಶವನ್ನು ಸಾರುವ ಸುದೀರ್ಘ ಕಾದಂಬರಿಯನ್ನು ಬರೆದ ಶ್ರೀ ಕೋ. ಶಿ. ಕಾರಂತರು ಧನ್ಯರು. ಅವರಿಗೆ ಅದಕ್ಕಾಗಿ ಅನಂತ ಅಭಿನಂದನೆಗಳು.

ಭಾರತೀಯಸಂಸ್ಕೃತಿ

ಬರೆದವರು ಶ್ರೀ ಸಾನೆಗುರೂಜಿ. ಅನುವಾದರು, ಶ್ರೀ ಭಾ. ಗೋ. ಗೋಖಲೆ. ಪ್ರಕಾಶಕರು, ಶ್ರೀ ಬಸವಣ್ಣೆಪ್ಪ ಸಂಕೇಶ್ವರ ಹುಬ್ಬಳ್ಳಿ. ಪುಟಗಳು ೩೭೩, ಬೆಲೆ ರೂ ೫.

ಗ್ರಂಥಕರ್ತರು ತಮ್ಮ ಮುನ್ನುಡಿಯಲ್ಲಿ "ಈ ಪುಸ್ತಕದಲ್ಲಿ ಭಾರತೀಯ ಸಂಸ್ಕೃತಿಯ ಆತ್ಮವನ್ನು ಕಾಣುವಿರಿ, ಅದರ ಒಳದರ್ಶನವನ್ನು ಪಡೆಯುವಿರಿ, ಭಾರತೀಯ ಸಂಸ್ಕೃತಿಯ ಗರ್ಭಗುಡಿಯಲ್ಲಿಯೇ ಪ್ರವೇಶಿಸುವಿರಿ; ಎಂದು ಹೇಳಿದ್ದಾರೆ. ಈ ಮಾತನ್ನು ಗ್ರಂಥದ 'ಅದ್ವೈತದ ತಳಹದಿ'ಯಿಂದ ಹಿಡಿದು 'ಸಾವಿನಸವಿ'ಯವರೆಗಿನ ೨೩ ಅಧ್ಯಾಯಗಳಲ್ಲಿ ಅರ್ಥ ರೂಪದಲ್ಲಿ ಕಾಣಬಹುದು.

ಅದ್ವೈತದ ತಳಹದಿ ಪ್ರೇಮದಲ್ಲಿದೆಯೆಂಬುದನ್ನು ಶಿವ-ಶಕ್ತಿಗಳ ನಿದರ್ಶನದಿಂದ ಹೇಳಹೊರಟದ್ದು ಅರ್ಥಗರ್ಭಿತವಾಗಿದೆ. ವಿವಿಧವೂ ವಿಭಕ್ತವೂ ಆದ ಪ್ರಪಂಚದ ವ್ಯಕ್ತಿಗಳು ಏಕವೂ ಅವಿಭಕ್ತವೂ ಆದ ಸ್ಥಿತಿಯನ್ನು ಹೊಂದಲು ತವಕ ಪಡುವುದು ಸ್ವಾಭಾವಿಕವಾಗಿದೆ. ಆ ತವಕವೇ ಪ್ರೇಮಶಕ್ತಿ ಐಕ್ಯಸಾಧಕ ಶಕ್ತಿ: ಒಂದಿಕೆ ಹೊಂದಿಕೆಗಳೇ ಜೀವನದಲ್ಲಿ ಸುಖಸಾಧಕಗಳು ಎಂಬುದು ಅನುಭವ ಸಿದ್ಧವಾದ ಮಾತು.

'ಅದ್ವೈತದ ಸಾಕ್ಷಾತ್ಕಾರ'ದಲ್ಲಿಯ 'ಭೇದಾಭೇದದ ಆಚೆಗೆ ಹೋಗಿರುವ ಸಜ್ಜನರಲ್ಲಿಯೇ ದೇವರು ವಾಸಿಸುತ್ತಾನೆ, ಎಂಬ ಮಾತು ಏಕಮೇವಾದ್ವಿತೀಯವಾಗಿದೆ, ವಜ್ರಖಚಿತಾಕ್ಷರಗಳಿಂದ ಬರೆದಿಡುವಂಥದಿದೆ. ಬುದ್ಧಿಯ ಹಿರಿಮೆಯಲ್ಲಿ ವೇದಗಳಲ್ಲೆಲ್ಲ ಶ್ರೇಷ್ಠವಾದ ಗಾಯತ್ರೀ ಮಂತ್ರದ ತೇಜಸ್ಸುಳ್ಳ ಪ್ರೇರಣೆಯನ್ನೀಯುವ ಸೂರ್ಯನ ಪರಮಶ್ರೇಷ್ಠ ತೇಜಸ್ಸಿನ ಉಪಾಸನೆಯನ್ನೇ ನಾವು ಮಾಡುತ್ತೇವೆ ಆ ಸೂರ್ಯನು ನಮ್ಮ ಬುದ್ಧಿಗೆ ಚಾಲನೆಯನ್ನು ಕೊಡಲಿ, ಎಂಬ ಅರ್ಥವನ್ನು ಎತ್ತಿ ಒತ್ತಿ ಹೇಳಿದ್ದು ಶ್ರೀ ಗುರೂಜಿಯ ಪ್ರಾತಿಭ ಚಕ್ಷುಸ್ಸಿನ ಹಿರಿಮೆಯನ್ನು ಸಾರುತ್ತಿದೆ.

ಪ್ರಯೋಗಗಳನ್ನು ಮಾಡುವ ಋಷಿಗಳತ್ತ ಓದುಗರ ಲಕ್ಷ್ಯ ಸೆಳೆದು ಪ್ರಾಚೀನ ಸಮಾಜದ ರೀತಿನೀತಿಗಳು ಹೇಗೆ ಪರಿವರ್ತನೋನ್ಮುಖವಾದುವೆಂಬುದನ್ನು ೪ ನೇಯ ಅಧ್ಯಾಯದಲ್ಲಿ ವಿವರಿಸಲಾಗಿದೆ. ಐದನೇಯದರಲ್ಲಿ ವರ್ಣಾಶ್ರಮ ಧರ್ಮದ ಗುಣಧರ್ಮ ಪಂಕ್ತಿಯನ್ನು ವ್ಯಾಖ್ಯಾನಿಸಿ ಮುಂದೆ ಕರ್ಮತತ್ವವನ್ನೆತ್ತಿ ವ್ಯಷ್ಟಿ ಸಮಷ್ಟಿವಾದಗಳ ಸಮನ್ವಯವನ್ನು ಹೇಳಿ Dignity of Labour- ಕರ್ಮ ಗೌರವವೆಂದರೇನೆಂಬುದನ್ನು ಪ್ರಾಚೀನ ಹಿಂದುಸ್ತಾನವು ಅರಿತಿತ್ತೆಂದು ಸಾಧಾರವಾಗಿ ಹೇಳಲಾಗಿದೆ.

ಅನಂತರ ಭಕ್ತಿಯ ಮಾತೆತ್ತಿ ಅದು ಹೇಗೆ ಮುಕ್ತಿಗೆ ಸಾಧನವೆಂಬುದನ್ನು ಗಣಿತದ ಲೆಕ್ಕಾಚಾರದಂತೆ ತಿಳಿಯಾಗಿ ತಿಳಿಸಲಾಗಿದೆ. ಜ್ಞಾನದ ಜ್ಞಾನವೇನು ಅದರ ಬಗೆಯೆಷ್ಟು ಅದರಿಂದ ಲಾಭವೇನು ಎಂಬ ವಿಚಾರವನ್ನು ಆಧುನಿಕ ತತ್ವಜ್ಞರ ವಾಕ್ಯಗಳ ಆಧಾರದ ಮೇಲೆ ಸಮನ್ವಯಿಸಿ ವಿವರಿಸಿದ್ದು ಹೃದಯಂಗಮವಾಗಿದೆ ತತ್ವಗಳ ಆಚರಣೆಗೆ ಅವಶ್ಯವಾದ ಸಂಯಮವನ್ನು ಕಥೋಪಕಥೆಗಳ ದೃಷ್ಟಾಂತ ಕೊಟ್ಟು ಸ್ಪಷ್ಟಪಡಿಸಲಾಗಿದೆ.

ಸರ್ವೋಪನಿಷತ್ತುಗಳ ಸಾರವೆನಿಸಿದ ಗೀತೆಯ ಮುಖ್ಯ ಸಂದೇಶವಾದ ಕರ್ಮಫಲತ್ಯಾಗವನ್ನು ವೇದೋಕ್ತಗಾಥಾದಿಗಳಿಂದ ನಿದರ್ಶಿಸಿ ಭಾರತೀಯ ಸಂಸ್ಕೃತಿಗೆ ಬುನಾದಿಯಂತಿರುವ ಗುರುಶಿಷ್ಯ ಸಂಬಂಧವನ್ನು ಯಥಾವತ್ತಾಗಿ ಸೋದಾಹರಣವಾಗಿ ವರ್ಣಿಸಲಾಗಿದೆ. ಜೀವನದ ಚತುರ್ಮುಖವಾದ ಪುರುಷಾರ್ಥದತ್ತ ಹೊರಳಿ ವಿಧಿನಿಷೇಧಗಳ ಅರ್ಥವನ್ನು ಹೇಳಿ ಯಜ್ಞತತ್ವವನ್ನು ವಿವರಿಸಿ ಧರ್ಮದ ಪ್ರಾಧಾನ್ಯವನ್ನು ಎತ್ತಿ ಹಿಡಿಯಲಾಗಿದೆ. ಹಿಂದು ಸಮಾಜದ ಆಶ್ರಮ ಚತುಷ್ಟಯ ಅಲ್ಲಿಯ ಹೆಣ್ಣಿನಸ್ಥಾನ, ಮಾನವೇತರ ಸೃಷ್ಟಿಯೊಡನೆ ಹಿಂದೀಯರಿಟ್ಟ ಪ್ರೇಮ ಸಂಬಂಧ ಪ್ರಥಮಾತ್ಮ ಗುಣವಾದ ಅಹಿಂಸೆ ಬಲೋಪಾಸನೆ, ಗುರಿಯ ಪರಮಾವಧಿ, ಅವತಾರ ಕಲ್ಪನೆ, ಮೂರ್ತಿ ಪೂಜೆಯ ಸಾರ್ಥಕತೆ ಇವುಗಳನ್ನು ಗ್ರಂಥ ಕರ್ತರು ತಮಗೆ ಸಹಜವಾದ ಸರಳ ಶೈಲಿಯಿಂದ ಆ ಮೂಲಾಗ್ರವಾಗಿ ವಿವೇಚಿಸಿ ಓದುಗರ ಮುಂದಿಟ್ಟಿದ್ದಾರೆ. ಕೊನೆಯ ಅಧ್ಯಾಯದಲ್ಲಿ ಭಾರತೀಯ ಸಂಸ್ಕೃತಿಯ ಕುರುಹುಗಳನ್ನು ಅರ್ಥಪೂರ್ಣ ದೃಷ್ಟಿಯಿಂದ ನೋಡಿ ಉಲ್ಲೇಖ ಮಾಡಲಾಗಿದೆ. ಕಮಲ, ಯಜ್ಞ, ಭಸ್ಮ, ಮುದ್ರೆ, ಜನಿವಾರ, ಹೂವು, ನೈವೇದ್ಯ, ದಕ್ಷಿಣೆ, ಸ್ವಸ್ತಿಕ ಇತ್ಯಾದಿ ಅರ್ಥಗರ್ಭಿತವಾದ, ಉದಾತ್ತ ಧ್ಯೇಯ ದ್ಯೋತಕವಾದ ಕುರುಹುಗಳ ನಿಜಾರ್ಥವನ್ನು ಈ ಅಧ್ಯಾಯದಲ್ಲಿ ಮನೋಹರವಾಗಿ ವಿಶದೀಕರಿಸಲಾಗಿದೆ.

ಭಾರತೀಯರಿಗಿಂದು ಹಿಂದಿನ ಸಾಂಸ್ಕೃತಿಕ ವೈಭವವನ್ನು ಬಣ್ಣಿಸಿ ಅಷ್ಟರಲ್ಲೇ ತೃಪ್ತಿ ಹೊಂದುವ ಬುದ್ಧಿ ಇರುವವುದು ಒಂದು ಮಹಾ ದೌರ್ಬಲ್ಯವೆಂದು ಸಂಸ್ಕೃತಿ ಸಂಪನ್ನರು ಬಲ್ಲರು ಗತ ವೈಭವ ಪ್ರಶಂಸೆಯು ಕನ್ನಡಿಗರಿಗಂತೂ ಇಂದು ಸತ್ಯದ ಮಾತಾಗಿದೆ. ಮಾತಿಗೂ ಕೃತಿಗೂ ಓದಿಗೂ ಆಚಾರಕ್ಕೂ ಜ್ಞಾನಕ್ಕೂ ಕರ್ಮಕ್ಕೂ ಅನೇಕ ಯೋಜನಗಳ ದೂರವಿರುವುದರಿಂದಲೇ ಭಾರತೀಯನಿಂದು ಇಹ ಪರಗಳೆರಡೂ ಇಲ್ಲದೆ, ದೀನ, ದಲಿತ, ದಾಸ ಎನ್ನಿಸಿಕೊಂಡು ಅತ್ತ ಪ್ರಾಚೀನತೆಯೂ ಇಲ್ಲ ಇತ್ತ ಅರ್ವಾಚೀನತೆಯೂ ಇಲ್ಲ, ನಾಗರಿಕತೆಯೂ ಸಂಪೂರ್ಣವಿಲ್ಲ, ಅನಾಗರಿಕತೆಯ ಅಂಶಗಳಿದ್ದರೂ ಅವನ್ನು ಬಿಡುವಷ್ಟು ಧೈರ್ಯವಿಲ್ಲ ಎಂಬ ಸ್ಥಿತಿಯಲ್ಲಿ ತೊಳಲುತ್ತಿರುವುದು ಕಾಣುತ್ತದೆ. ಭಾರತೀಯ ಸಂಸ್ಕೃತಿಯ ಸರ್ವಾಂಶಗಳೂ ಇಲ್ಲಿ ಸಂಗ್ರಹೀತವಾಗಿವೆಯೆಂದು ಹೇಳಲಿಕ್ಕಾಗದು. ಅದರೂ ಸ್ವತಂತ್ರ ಭಾರತದ ಪ್ರಜೆಗಳನ್ನು ನವನಾಗರಿಕರನ್ನಾಗಿ ಪರಿವರ್ತಿಸುವ ಆಶೆಯನ್ನಿಟ್ಟುಕೊಂಡು ಹೊಣೆಗಾರ ವ್ಯಕ್ತಿಗಳಾದ ಶ್ರೀಸಾನೆ ಗುರೂಜಿಯ ಈ ಅಮೂಲ್ಯ ಗ್ರಂಥವನ್ನು ಓದಿ ಮನನ ಮಾಡಿ ನಿಧಿಧ್ಯಾಸದಲ್ಲಿಟ್ಟುಕೊಂಡು ಆತ್ಮೋದ್ಧಾರವನ್ನು ಮಾಡಿಕೊಳ್ಳುವುದಲ್ಲದೆ, ತನ್ಮೂಲಕ ದೊರೆತ ಬೆಳಕಿನಿಂದ ನಾಡಿನ ಮೂಲೆ ಮೂಲೆಗಳಲ್ಲಿರುವ ಆಬಾಲವೃದ್ಧರ ಮನೋಗಹ್ವರಗಳಲ್ಲಿಯ ಅಜ್ಞಾನಾಂಧಕಾರವನ್ನು ಹೊಡೆದೋಡಿಸಿ ಶಿಕ್ಷಣಾದಿ ಸಾಧನಗಳಲ್ಲಿ ಈ ಗ್ರಂಥವನ್ನು ಒಂದನ್ನಾಗಿ ತೆಗೆದುಕೊಂಡು ಪ್ರಚುರ ಪಡಿಸುವುದು ಅವಶ್ಯ ಅನಿವಾರ್ಯ ಅತೀವ ಪ್ರಯೋಜನಕಾರಿ ಎಂದು ನಾವು ಮುಕ್ತ ಕಂಠದಿಂದ ಹೇಳಬಲ್ಲೆವು.

ಸುಲಭ ಚಿಕಿತ್ಸೆ

ಲೇಖಕರು, ಪಂಡಿತ ತಾರಾನಾಥರು. ಪ್ರಕಾಶಕರು, ಡಾ. ಆರ್. ಅಮೃತರಾವ, ಪ್ರೇಮ ಸಾಹಿತ್ಯ ಗ್ರಂಥಮಾಲೆ, ತುಂಗಭದ್ರಾ, ಎಂ. ಎಸ್. ಎಂ. ರೇಲ್ವೆ. ಪುಟಗಳು ೧೧೬, ಬೆಲೆ ೨ ರೂ.

ಈ ಪುಸ್ತಕವು ಪ್ರೇಮ ಸಾಹಿತ್ಯ ಗ್ರಂಥಮಾಲೆಯ ೧ ನೆಯ ಮಣಿ. ೧೯೩೪ರಲ್ಲಿ ಇದರ ಮೊದಲ ಮುದ್ರಣವಾಗಿತ್ತು. ಇದು ೨ನೆಯ ಮುದ್ರಣ. ಪಂಡಿತ ತಾರಾನಾಥರು ಆಯುರ್ವೇದದಲ್ಲಿ ಸಿದ್ಧಹಸ್ತರು. ಅಂತಹರು ಸ್ವಾನುಭವದಿಂದ ಬರೆದ ಈ ಪುಸ್ತಕವು ಕನ್ನಡ ಲೋಕಕ್ಕೆ ಮತ್ತು ಹೊಸ ವೈದ್ಯರಿಗೆ ಒಂದು ವರಪ್ರಸಾದವೆಂದರೆ ಅತಿಶಯೋಕ್ತಿಯಾಗದು. ಸಲಭವಾಗಿ ಸಿಕ್ಕುವ ವನಸ್ಪತಿಗಳನ್ನೇ ಇಲ್ಲಿ ಹೇಳಿದ ರೀತಿಯಲ್ಲಿ ಬಳಸಿ ದಿನವಾಡಿಕೆಯ ಆಮಯಗಳನ್ನೆಲ್ಲ ಗುಣಪಡಿಸಿಕೊಳ್ಳಬಹುದಾಗಿದೆ. ವೈದ್ಯಗುರು ಶ್ರೀ ದ. ಕೃ ಭಾರದ್ವಾಜರು ಬರೆದ ಮೊದಲ ಮಾತು ಪಂಡಿತ ತಾರಾನಾಥರ ಬಗ್ಗೆ ಅನೇಕ ವಿಷಯಗಳನ್ನು ತಿಳಿಸುತ್ತದೆ. ಪ್ರಥಮ ಮುದ್ರಣಕ್ಕಿಂತ ಈ ಮುದ್ರಣವು ಅಂದವಾಗಿದೆ. ಬಳಸಿದ ಕಾಗದಗಳೂ ಅಚ್ಚಿನ ಅಕ್ಷರಗಳೂ ಒಳ್ಳೆಯವಾಗಿವೆ. ವೈದ್ಯರಂತೂ ಇದನ್ನು ಸಂಗ್ರಹಿಸಬೇಕು. ಎಲ್ಲರ ಮನೆಯಲ್ಲಿಯೂ ಇರಬೇಕಾದ ಪುಸ್ತಕವಿದು. ಇದರ ಸಹಾಯದಿಂದ ಹೆಂಗಸು ಮಕ್ಕಳು ಕೂಡ ನೆರೆಹೊರೆಯವರ ಆರೈಕೆ ಮಾಡಬಹುದಾಗಿದೆ, ಭಾಷೆ ಬಹಳ ಸರಲ.

ಧರ್ಮಸಂಭವ

ಲೇಖಕರು, ಪಂಡಿತ ತಾರಾನಾಥರು. ಪ್ರಕಾಶಕರು, ಶ್ರೀ ಅಮೃತರಾವ, ವೈದ್ಯಗುರು ಪ್ರೇಮಾಯತನ, ತುಂಗಭದ್ರಾ ಎಮ್. ಎಸ್. ಎಂ. ರೇಲ್ವೆ. ಪುಟಗಳು, ೧೨೦ ಬೆಲೆ ೨ ರೂ.

ಪ್ರೇಮಸಾಹಿತ್ಯ ಮಾಲೆಯ ೨ ನೆಯ ಮಣಿಯಾಗಿ 'ಧರ್ಮ ಸಂಭವ'ವು ಉದಯಿಸಿದೆ. ಈ ಪುಸ್ತಕದ ಪ್ರಥಮ ಮುದ್ರಣವು ೧೭ ವರ್ಷಗಳ ಹಿಂದೆಯೇ ಆಗಿತ್ತು. ಧರ್ಮದ ವಿಷಯಕ್ಕೆ ಅಂದಿದ್ದ ಸಂಶಯವೃತ್ತಿ, ಅಂಧಶ್ರದ್ಧೆ, ಅಸ್ಪಷ್ಟ ಕಲ್ಪನೆ ಇವು ಇಂದಿಗೂ ಜನಮನವನ್ನು ಆವರಿಸಿಕೊಂಡೇ ಇವೆ. ಪಂಡಿತ ತಾರಾನಾಥರಂಥ ಧೀಮಂತರು ಧರ್ಮದ ವಿಷಯವನ್ನು ವಿವೇಚಿಸಿ ಹೇಳುತ್ತಾರೆಂದಮೇಲೆ ಆಧುನಿಕ ಯುವಲೋಕ ಧಾರಾಳವಾಗಿ ಅದನ್ನು ಗ್ರಹಿಸಲಡ್ಡಿಯಿಲ್ಲ. 'ಧರ್ಮವೆಂಬುದು ಪ್ರಕೃತಿಯಲ್ಲಿಯೇ ಅಂತರ್ಭವವಾಗಿದೆ' ಎಂದು ಹೇಳಿಯೇ ಪಂಡಿತರು ಮುಂದೆ ಸಾಗಿದ್ದಾರೆ. 'ಈ ಪುಸ್ತಕದ ಉದ್ದೇಶವು ಪ್ರಬೋಧಕವಲ್ಲ ಪ್ರಚೋದಕ ಮಾತ್ರವೇ' ಎಂದೂ 'ದೇವ,ಧರ್ಮ, ನಾಗರೀಕತೆಗಳು ಒಂದೊಂದಾಗಿ ಹೇಗೆ ಹುಟ್ಟಿದವು, ಹೇಗೆ ಮಾರ್ಪಡುತ್ತ ಹೋದವು ಎಂಬುದನ್ನು ವಿವರಿಸುವದೇ' ಎಂದೂ ಗ್ರಂಥಕಾರರು ಉದ್ದೇಶನಿರೂಪಣೆ ಮಾಡಿದ್ದಾರೆ. ಈ ಪುಸ್ತಕಕ್ಕೆ ಪೂರಕವಾಗಿ ಪಂಡಿತರು ಇನ್ನೊಂದು ಪುಸ್ತಕ ಬರೆಯತಕ್ಕವರಿದ್ದರೆಂದೂ ಈ ಪುಸ್ತಕ ಮೂಲಕ ಉಂಟಾದ ವಿಚಾರ ತರಂಗಗಳನ್ನು ಅವರ ಪೂರಕ ನಿರೂಪಣೆ ಶಮನಗೊಳಿಸುವಂತಹುದೆಂದು ಪಂಡಿತರು ಆಗಾಗ ಹೇಳುತ್ತಿದ್ದರೆಂದೂ ಪ್ರಕಾಶಕರು ಉಲ್ಲೇಖಿಸಿದ್ದಾರೆ. ಈ ಪೂರಕ ನಿರೂಪಣೆಗೆ ಎರವಾಗಬೇಕಾಯ್ತೆಂದು ನಮಗೂ ಅಸಮಾಧಾನವೆನಿಸುತ್ತದೆ.

ಕನ್ನಡಸಾಹಿತ್ಯ ಮತ್ತು ರಾಜಾಶ್ರಯ

ಲೇಖಕರು, ಶ್ರೀ ಡಿ. ಎನ್. ರಾಮು. ಪ್ರಕಾಶಕರು, ಎಸ್. ಎಸ್. ಎನ್. ಬುಕ್ ಡಿಪೋ, ಬೆಂಗಳೂರು ನಗರ. ಪುಟಗಳು ೪೫+೮. ಬೆಲೆ ೧೦ ಆಣೆ.

ಈ ಪ್ರಬಂಧ ಪುಸ್ತಕವು ನೋಡಲು ಸಿಗ್ಗಾಗಿ ಕಾಣದಿದ್ದರೂ ಇದರಲ್ಲಿ ಸಂಗ್ರಹಿಸಲಾದ ಸಂಗತಿಗಳು ವಿಪುಲವಾಗಿವೆ. ಕನ್ನಡ ಸಾಹಿತ್ಯವನ್ನು ಅಭ್ಯಸಿಸುವ ವಿದ್ಯಾರ್ಥಿಗಳಿಗೆ ಇದು ಅತ್ಯುಪಯುಕ್ತವಾದ ಕೈಪಿಡಿ. ಶ್ರೀ ಡಿ. ಎನ್. ರಾಮು ಅವರು ತಮ್ಮ ಅಭ್ಯಾಸದ ಫಲವನ್ನು ಕೈಚಾಚಿದವರಿಗೆಲ್ಲ (ಈ ಪ್ರಬಂಧ ಮೂಲಕ ಹಂಚಿ ಕೃತಾರ್ಥರಾಗಿದ್ದಾರೆ. ಈ ಪುಸ್ತಿಕೆಗೆ ೧೯೪೬ರಲ್ಲಿ ಮೈಸೂರು ವಿಶ್ವವಿದ್ಯಾಲಯದಲ್ಲಿ ಧರ್ಮಪ್ರಕಾಶ ವೆಂಕಾಜಿರಾಯರ ಬಹುಮಾನ ದೊರಕಿದೆ. ಹನ್ನೆರಡು ವಿಭಾಗಗಳಲ್ಲಿ ವಿಷಯ ಹರಿದಾಡಿ ಕೊನೆಗೆ ಎರಡು ಪರಿಶಿಷ್ಟಗಳಲ್ಲಿ ತಲೆಎತ್ತಿ ನಿಂತಿದೆ. ಮೂರನೆಯ ಪರಿಶಿಷ್ಟದಲ್ಲಿ ಆಕರ ಗ್ರಂಥಗಳ ಪಟ್ಟಿಯಿದೆ. ಪ್ರಬಂಧದ ಹತ್ತನೆಯ ವಿಭಾಗದ ಕೊನೆಗೆ ಸಾಹಿತ್ಯವಾಹಿನಿಯ ಗತಿವಿನ್ಯಾಸವನ್ನು ನಾಲ್ಕು ಮಾತುಗಳಲ್ಲಿ ಮೂಡಿಸಿ ಲೇಖಕರು ವಿಷಯ ಪ್ರಭುತ್ವವನ್ನು ತೋರ್ಪಡಿಸಿದಾರೆ. ಒಟ್ಟಿನಲ್ಲಿ ಈ ಚಿಕ್ಕ ಪ್ರಬಂಧ ಪುಸ್ತಕವು ಸರ್ವಸಂಗ್ರಾಹ್ಯವಾಗಿದೆ.

ಆರ್ಯವೈದ್ಯ

ಪ್ರಮುಖ ಸಂಪಾದಕರು, ಡಾ. ಅ. ಹಲಸೀಕರ, ಆತ್ರೇಯ ಸದನ ಹುಬ್ಬಳ್ಳಿ ಪುಟಗಳು ೭೨ ಬೆಲೆ ೧ ರೂ.

ಆಯುರ್ವೇದ ಪ್ರಸಾರಕ ಮಂಡಲದ ಪರವಾಗಿ ಇದು ಪ್ರತಿ ತಿಂಗಳೂ ಪ್ರಕಟವಾಗುತ್ತದೆ. ೩ನೆಯ ವರ್ಷದ ಮೊದಲನೆಯ ಸಂಚಿಕೆಯು ಇದೇ ವರ್ಷ ಜನೆವರಿ ತಿಂಗಳಲ್ಲಿ ಬೃಹನ್ನಿಘಂಟು ಎಂಬ ಹೆಸರಿನಲ್ಲಿ ಹೊರಟಿದೆ. ೧೫ ಭಾಷೆಯ ವನಸ್ಪತಿಗಳ ಕೋಶವು ಇದಾಗಿದೆ. ವೈದ್ಯರಿಗೆ ಇದು ಉಪಯುಕ್ತ ವಸ್ತುವೆಂದು ಹೇಳುವ ಅಗತ್ಯವಿಲ್ಲ. ಈ ಮಾಸಪತ್ರಿಕೆಯು ಮಾಸಿಕ ಗ್ರಂಥ ಮಾಲೆಯಾಗಿ ಪರಿವರ್ತಿಸುವ ಹಾಗಿದೆ. ಯಾಕಂದರೆ, ಈ ಮುಂದೆ ಬರಲಿರುವ ಸಂಚಿಕೆಗಳಾದರೂ ಸ್ವತಂತ್ರ ವೈದ್ಯಕ ಪುಸ್ತಕಗಳೇ ಆಗಿರುವವಾಗಿ ಸಂಪಾದಕರ ಪ್ರಕಟನೆಯಿಂದ ತಿಳಿಯುವದು. ಇದೊಂದು ಬಗೆಯಿಂದ ಒಳ್ಳೆಯದೇ ಎಂದು ನಾವು ಹೇಳದಿರಲಾರೆವು. ಮಾಸ ಪತ್ರಿಕೆಗಳೆಂದರೆ ಓದಿ ಒಗೆದು ಬಿಡುವ ಪದಾರ್ಥಗಳೆಂದೂ ಅವಕ್ಕೆ ತಾತ್ಪೂರ್ತಿಕ ಮಹತ್ವವೆಂದೂ ಒಂದು ಸಾಮಾನ್ಯ ಕಲ್ಪನೆಯಾಗಿದೆ. ಆದರೆ ಹೀಗೆ ಸ್ವತಂತ್ರ ಪುಸ್ತಕಗಳನ್ನೇ ಓದುಗರಿಗೆ ಒದಗಿಸುತ್ತ ಹೋದರೆ ಅವು ಸಂಗ್ರಾಹ್ಯವಾಗುವವು. ಈ ಹೊಸ ಬಗೆಯ ಏರ್ಪಾಟಿಗೆ ಸಂಪಾದಕರನ್ನು ನಾವು ಅಭಿನಂದಿಸುತ್ತೇವೆ.

ದಶೋಪದೇಶ

ಹಿಂದುಸ್ತಾನ ಹಿಂದೆ ಜ್ಞಾನಸಾಗರವಾಗಿತ್ತು. 'India was a nation of philosophers ಭಾರತ ತತ್ವಜ್ಞಾನಿಗಳ ನಾಡು.' ಎಂದು ಮೋಕ್ಷಮ್ಯೂಲರ ಪಂಡಿತನೆಂದ. ಆದರೆ ಹಾಗೆ ಹೇಳಿಕೊಂಡು ನಮ್ಮ ದೊಡ್ಡಸ್ತಿಕೆ ಮೆರೆಯಿಸುವುದನ್ನಲ್ಲದೆ ನಾವಿಂದು ಇನ್ನೇನನ್ನೂ ಅರಿಯೆವು. ಇದನ್ನರಿತೇ ಲಾರ್ಡ್ ಮೌಂಟಬ್ಯಾಟನ್ನರು ಭಾರತದಲ್ಲಿ ಸ್ತ್ರೀ ಶಿಕ್ಷಣವು (ಏಕೆ? ಎಲ್ಲರ ಶಿಕ್ಷಣವೂ) ದುರ್ಲಕ್ಷಿಸಲ್ಪಟ್ಟದೆಯೆಂದೂ ಸ್ತ್ರೀಯರು ವಿದ್ಯಾಭ್ಯಾಸ ಮುಗಿಸಿದ ಬಳಿಕ ವಿದ್ಯಾದಾನ ಮಾಡಬೇಕೆಂದೂ ಉಪದೇಶಿಸಿದ್ದು. ಹಿಂದುಸ್ತಾನದಲ್ಲಿ ಹಿಂದೆ ಗಾರ್ಗಿ, ಮೈತ್ರೇಯಿ ಮೊದಲಾದ ಋಷಿಪಟ್ಟವೇರಿದ ಮಹಿಳೆಯರೂ ಅರುಂಧತಿ, ಸಾವಿತ್ರಿ ಮುಂತಾದ ಪ್ರೇಮ ಮತ್ತು ತ್ಯಾಗಗಳ ಮೂರ್ತಿಗಳೂ ಝಾನ್ಸಿ ರಾಣಿ, ಕಿತ್ತೂರ ಚನ್ನಮ್ಮನಂತಹ ವೀರ ಮಹಿಳೆಯರೂ ಇದ್ದರೆಂದು ಇಂದಿನ 'ಕಲಿತ' ಹೆಂಗಸರು ಜಂಭ ಕೊಚ್ಚುವುದಷ್ಟು ಕಾಣುವುದಲ್ಲದೆ ವಸ್ತುಸ್ಥಿತಿ ದುಃಸ್ಥಿತಿಗಿಳಿದುದನ್ನು ಲಕ್ಷಿಸುವವರೇ ಇಲ್ಲ. ರಾಮರಾಜ್ಯ, ಧರ್ಮರಾಜ್ಯ, ಭರತ ರಾಜ್ಯಗಳ ಹೆಸರು ಹೇಳುವ ಗಂಡಸರ ಹಣೆಬರೆಹವೂ ಇದೇ ಮಾದರಿಯದಾಗಿದೆ. ಇಂಥ ಅಪ್ಪ ಅಮ್ಮಂದಿರ ಪೆಟಿಯಿಂದಲೇ ಶಾಲೆಗಳಲ್ಲಿ ಕಲಿಯುವವರ ಬುದ್ಧಿ ದಿನೇ ದಿನೇ ಕಡಿಮೆಯಾಗುತ್ತ ಹೋಗಹತ್ತಿದೆ. ಇಂಥ ಪ್ರಜೆಗಳ ನಿರ್ಮಾಣದಿಂದಲೇ ಹಿಂದುಸ್ತಾನವಿಂದು ಅರಾಜಕವಾಗಹತ್ತಿದೆ. ಇದನ್ನರಿತು ತಾಯಿ ತಂದೆಯರು ಕೆಳಗಿನ ತಮ್ಮ ಕರ್ತವ್ಯಬೋಧಕ ಸೂತ್ರಗಳನ್ನು ಪಾಲಿಸುವದು ಅವಶ್ಯಕ. ಮಕ್ಕಳ ದೇಹ, ಅದಕ್ಕಿಂತ ಹೆಚ್ಚಿನವಾದ ಬುದ್ಧಿ ಭಾವನೆಗಳು—ಸರಿಯಾಗಿ ರೂಪುಗೊಳ್ಳಬೇಕಾದರೆ ಮಾತಾಪಿತೃಗಳು ಹೊಣೆಗಾರಿಕೆಯಿಂದ ವರ್ತಿಸುವುದು ಅನಿವಾರ್ಯವೆಂದು ಸಾವಿರ ಸಲ ಹೇಳಿದರೂ ಕಡಿಮೆಯೇ ಸರಿ.

೧. ತಾಯಿ ತಂದೆಗಳು ಮಕ್ಕಳೆದುರು ಪರಸ್ಪರ ಕಲಹ ಮಾಡಕೂಡದು. ಅಂಥ ಅನಿವಾರ್ಯ ಸಂದರ್ಭದಲ್ಲಿ ಅನ್ಯ ಸ್ಥಳಕ್ಕೆ ಹೋಗಿ ಕಾದಬೇಕು. ಏಕೆಂದರೆ ಉಸಿರಿಗೆ ಅವಶ್ಯಕವಾದ ಅಮ್ಲಜನಕದಷ್ಟೇ ಪ್ರೀತಿ ಕೂಡ ಮಗುವಿನ ವ್ಯಕ್ತಿತ್ವಪೋಷಣೆಗೆ ಅವಶ್ಯವಿದ್ದು, ಅದು ಕಲಹಾದಿ ಕಾಮುಕ ಚರ್ಯೆಯ ದರ್ಶನದಿಂದ ನಷ್ಟವಾಗುತ್ತದೆ, ಅರಕ್ಷಿತ ಭಾವವನ್ನು ತಾಳುತ್ತದೆ, ಚಿತ್ತಶುದ್ಧಿ ಅಳಿಯುತ್ತದೆ, ನೀತಿ ದುರ್ಬಲವಾಗುತ್ತದೆ.

೨. ಎರಡನೆಯ ಮಗು ಹುಟ್ಟಿದೊಡನೆ ಮೊದಲ ಮಗುವಿಗೆ ವಿಶೇಷ ಪ್ರೀತಿಯನ್ನು ತೋರಿಸಬೇಕು. ಇಲ್ಲದಿದ್ದರೆ ಅದಕ್ಕೆ ಸ್ಥಾನಭ್ರಂಶ ಹೊಂದಿದಂತೆನಿಸಿ, ದ್ವೇಷಭಾವ ಬೆಳೆದು ಚಿತ್ತಕ್ಷೋಭೆ ಮತ್ತು ಪಾಪಬುದ್ಧಿಗಳುತ್ಪನ್ನವಾಗುವವು.

೩. ಅತಿಮಮತೆಯನ್ನು ತೋರಬಾರದು ಇದರಿಂದ ಮಕ್ಕಳಿಗೆ ಹೊಣೆಗಾರಿಕೆ ಉಂಟಾಗುವುದೇ ಇಲ್ಲ. ಕಡೆಯತನಕ ಅವು ಪರರಕ್ಷಣೆಯನ್ನು ಬಯಸುವ ದೌರ್ಬಲ್ಯದಿಂದ ನರಳುತ್ತವೆ. ಮುಂದೆ ಮದುವೆಯಾದರೆ ತನ್ನ ಸಂಗಾತಿಯೊಡನೆ ವರ್ತಿಸಬೇಕೆಂಬುದು ಕೂಡ ತಿಳಿಯದಂತಾಗುತ್ತದೆ! ಇದರಿಂದ ಮಗುವಿನ ಬುದ್ಧಿ ಮಂಕಾಗಿ ಲಿಂಗದೃಷ್ಟಿಯಿಂದ ಪುಂಸ್ತ್ರೀಭೇದಭಾವ ಶೂನ್ಯವಾಗಿ ಹೋಗಬಹುದು.

೪. ಮಕ್ಕಳನ್ನು ಉದಾಸೀನ ಭಾವದಿಂದ ನೋಡಬಾರದು. ಇದರಿಂದ ಮಕ್ಕಳಲ್ಲಿ ನಿರ್ವಿಣ್ಣತೆ, ನಿರಾಶೆಗಳು ತಲೆದೋರುವವು; ಆತ್ಮವಿಶ್ವಾಸ ಅಳಿಯುವುದು; ಜೀವನದಲ್ಲಿ ಧೈರ್ಯ ಹುಟ್ಟದು; ಬಾಳು ಹಾಳೆನಿಸೀತು.

೫. ಸ್ವರತಿ ಇಲ್ಲವೆ ಇತರ ಮಾಡಬಾರದ ಕೆಲಸವನ್ನು ಅರಿಯದೆ ಕೇವಲ ಕುತೂಹಲ ಬುದ್ಧಿಯಿಂದ ಒಂದು ವೇಳೆ ಮಕ್ಕಳು ಆಚರಿಸಿದರೆ ಅದಕ್ಕೆ ಪ್ರತೀಕಾರಭಾವದಿಂದ ಶಿಕ್ಷೆ ವಿಧಿಸಕೂಡದು. ವಿಧಿಸಿದರೆ ಅದರಿಂದ ಅವುಗಳಲ್ಲಿ ಪಾಪಬುದ್ಧಿ ಉತ್ಪನ್ನವಾಗಿ ಕಳ್ಳತನದಿಂದ ಅದನ್ನು ಮತ್ತೆ ಮತ್ತೆ ಆಚರಿಸತೊಡಗುವವು.

೬. ಮಕ್ಕಳ ಲಿಂಗಭೇದವನ್ನು ವಿಶೇಷತಃ ಅವುಗಳ ಲಕ್ಷ್ಯಕ್ಕೆ ತರಬಾರದು; ಇಲ್ಲವೆ ನಾಚಿಕೆ ಅವಮಾನಗಳು ಉದಯಿಸುವಂತೆ ಅವುಗಳಿಂದ ಮುಚ್ಚಿಡಬಾರದು. ಹುಡುಗರಿಗೆ ಹುಡುಗಿಯರ ಉಡುಪು ಹಾಕಿ ಹುಡುಗರಿಗೆ ಹುಡುಗಿಯರ ಉಡುಪು ಹಾಕಿ,ಕೆಲವು ತಾಯಿಯರು ಅವರನ್ನು ೧೨ ವರ್ಷ ಆಗುವ ವರೆಗೆ ತಮ್ಮೊಡನೆ ಮಲಗಿಸಿಕೊಳ್ಳುತ್ತಾರೆ. ಇದರಿಂದ ಅತಿಶೀಘ್ರವಾಗಿ ಲಿಂಗಬುದ್ಧಿ (ಅದೂ ಮಾತೃನಿಷ್ಠವಾಗಿ) ಉಂಟಾಗಿ ಸ್ತ್ರೀಪುಂಭೇದಜ್ಞಾನ ಇಲ್ಲದಂತೆ ಪರಿಣಮಿಸಬಹುದು; ಹುಡುಗನು ಹುಡುಗಿಯ ಸ್ವಭಾವದವನೂ ಹುಡುಗಿಯು ಹುಡುಗನ ಸ್ವಭಾವದವಳೂ ಆಗಿ ಹೋಗಿಬಿಡಬಹುದು.

೭. ತಾಯಿಂದಿರು ತಮ್ಮ ಗಂಡಂದಿರ ಮೇಲೆ ಅಧಿಕಾರ ನಡೆಸಕೂಡದು. ಇದರಿಂದಲೂ ಮೇಲೆ ಹೇಳಿದ ಹಾನಿ ಸಂಭವಿಸಬಹುದು ಇದು ಅತ್ಯಂತ ಅಪಾಯಕರವಾದ ನಡತೆ. ಇದರಿಂದ ಇಂತಹ ಗಂಡುಭೀರಿತನದ ತಾಯಿಯ ಪೋಷಣೆಯಲ್ಲಿ ಬೆಳೆದ ಹುಡುಗ ಹೆಣ್ಣಿಗನೂ ಹುಡುಗಿ ಗಂಡುರಾವಿಯೂ ಆಗಿ, ಅವರ ಶೀಲ ಸ್ವಭಾವಗಳೇ ಕೆಟ್ಟು ಹೋಗುವುವು. ಇಂದಿನ ಸ್ತ್ರೀ ಸ್ವಾತಂತ್ರ್ಯದ ಹುಯಿಲೆಬ್ಬಿಸಿರುವ ಅತ್ಯುತ್ಸಾಹಿಗಳು ಮೇಲಿನ ಮಾತನ್ನು ಮನನ ಮಾಡುವುದಗತ್ಯ. ಅನಿವಾರ್ಯ. ಇಂಥ ಮಕ್ಕಳು ವಿವಾಹ ಜೀವನ ನಡೆಸಲು ಅನರ್ಹರಾಗುತ್ತಾರೆ. ಅವರು ಯಾರೊಡನೆಯೂ ಸಮಂಜಸವಾದ ನಡತೆಯನ್ನಿಟ್ಟುಕೊಳ್ಳಲಾರದವರಾಗುತ್ತಾರೆ.

೮. ಮಕ್ಕಳನ್ನು ಅತಿಶಿಕ್ಷೆಯಲ್ಲಿ ಇಲ್ಲವೆ ಅಶಿಕ್ಷೆಯಲ್ಲಿಡಬಾರದು. ಅಶಿಕ್ಷೆಯಿಂದ ಮುಂದೆ ಮಗುವು ನಿರಾಶೆಯನ್ನು ಎದುರಿಸುವ ಧೈರ್ಯವನ್ನು ಕಳೆದುಕೊಳ್ಳಬಹುದು; ಅತಿಶಿಕ್ಷೆಯಿಂದ ಮುಂದೆ ಯಾವ ಕೆಲಸಕ್ಕೆ ಕೈಹಾಕಲೂ ಧೈರ್ಯಬರದು; ಧೈರ್ಯವಿಲ್ಲದೆ ಒಂದು ವಿಧದ ಅಂತರಿಕ ಒತ್ತಾಯಕ್ಕೊಳಗಾಗಿ ಯಾವಾಗಲೂ ಅಪಾಯಕರ ಸನ್ನಿವೇಶದಲ್ಲಿ ಧುಮುಕಿ ನೊಂದು ಜಗತ್ತನ್ನು ಬಯ್ಯುವ ಸ್ವಭಾವ ರೂಪಿತವಾಗುತ್ತದೆ.

೯. ಮಕ್ಕಳನ್ನು ನಿವಾರ್ಯವಿರುವಾಗ ಶಸ್ತ್ರಚಿಕಿತ್ಸೆಗೆ ಗುರಿಪಡಿಸಬಾರದು. ಇದರಿಂದ ಭಯಸ್ಪಂದನವುಂಟಾಗಿ ಮನಸ್ಸು ದುರ್ಬಲಪಟ್ಟು ಭಯಕಾತರತೆಗಳು ಮಗುವಿನಲ್ಲಿ ಮನೆಮಾಡಿಕೊಳ್ಳುವವು.

. ಎಳೆಯ ವಯಸ್ಸಿನಲ್ಲಿ 'ಸಾಬರ ಮುಂಜಿ' ಮಾಡಿದರೂ ಇದೇ ಪರಿಣಾಮವುಂಟಾಗುತ್ತದೆ.

೧೦. ಮಗುವು ಶೌಚಕ್ಕೆ ಹೋಗುವುದರ ಬಗ್ಗೆ ಅತಿನಿಯಂತ್ರಣವನ್ನಿಡಬಾರದು. ಇದರಿಂದ ಮಾಡೆಂದಾಗ ಮಾಡಲೊಲ್ಲದ ಪ್ರವೃತ್ತಿಯುಂಟಾಗುತ್ತದೆ. ಅನಂತರ ಮಗುವಿನ ಮಾನಸಿಕ ಸಮತೋಲ ತಪ್ಪಬಹುದು.

ಈ ದಶೋಪದೇಶಗಳನ್ನು ನ್ಯೂಯಾರ್ಕಿನ ಮೆಡಿಕಲ್ ಪತ್ರದಿಂದ ಆರಿಸಲಾಗಿದೆ. ಇವು ಪ್ರತಿಯೊಬ್ಬ ತಂದೆ ಇಲ್ಲವೆ ತಾಯಿ ಅನುಸರಿಸಬೇಕಾದ ಪ್ರಾಥಮಿಕ ನಿಯಮಗಳು. ಇವನ್ನು ಪಾಲಿಸದಿದ್ದರೆ ಮುಂದೆ ಮಕ್ಕಳಿಗೆ ಉಂಟಾಗುವ ಮಾನಸಿಕರೋಗಗಳಿಗೆ ತಂದೆತಾಯಿಗಳೇ ಹೊಣೆಗಾರರಾಗುವರು ಮತ್ತು ತಮ್ಮ ಮಕ್ಕಳಿಂದಲೇ ಅಂಥವರು ಶಪಿಸಲ್ಪಡುವುದು ಖಂಡಿತ.

ವಿವಿಧ ಪ್ರಪಂಚ

ಮಾತಿಗೊಂದು ಕಾಲವಾದರೆ ಮೌನಕ್ಕಿನ್ನೊಂದು

ಅಪಂಡಿತರಿಗೆ 'ವಿಭೂಷಣಂ ಮೌನಂ' ಎಂದು ಹಿರಿಯರು ಹೇಳಿದ್ದಾರೆ. 'ಜ್ಞಾನೇ ಮೌನಂ' ಜ್ಞಾನಿಗೆ ಮೌನವೇ ಭೂಷಣವೆಂದು ಕಾಳಿದಾಸ ಸಾರಿದ್ದಾನೆ. ಮಹಾತ್ಮಾ ಗಾಂಧಿಯವರು ಪ್ರತಿ ಸೋಮವಾರ ಮೌನಿಗಳಾಗಿರುತ್ತಿದ್ದರು. 'ಮೌನದಲ್ಲಿಯು ಕೂಡ ಮಾತಿನ ಧ್ವನಿಯಿರಲಿ' ಎಂದು ವರಕವಿ ಹಾಡಿದ್ದಾನೆ. ಈತನ ಪ್ರಕಾರ 'ಮಾತಿನ ಧ್ವನಿಯಿರುವ ಮೌನ' ಮತ್ತು ಒಂದು ಶಾಪದಂತಿರುವ 'ಮೂಕ ಮೌನ' ಎಂದು ಮೌನದಲ್ಲಿ ೨ ವಿಧ. ಇದರ ಪ್ರಕಾರ ಅಪಂಡಿತರಿಗೆ ಅಜ್ಞಾನವನ್ನು ಮರೆಯಲ್ಲಿಡಲು ಬೇಕಾದ ಮೌನವೇ ಭೂಷಣ, ಪಂಡಿತರಿಗೆ ಪಾಂಡಿತ್ಯ ಪೂರ್ಣತೆಯನ್ನು ಬಿಂಬಿಸುವ (ತುಂಬಿದ ಕೊಡ ತುಳುಕುವದಿಲ್ಲ) ಮೌನವೇ ಭೂಷಣ. ಒಬ್ಬರ ಮೌನವನ್ನು ಇನ್ನೊಬ್ಬರು ಧರಿಸಿದಾಗ ಮೌನವು ಭೂಷಣವಾಗುವದಿಲ್ಲ.

"ನೀನು ಬಲು ಬೇಗ ಇತರರೊಡನೆ ಗೆಳೆತನ ಬೆಳೆಸಿಕೊಂಡು ಬಿಡುತ್ತೀ ಅಲ್ಲೇನೇ?" ಎಂದನೊಬ್ಬ ಪ್ರಿಯತಮ ತನ್ನ ನಿಯಳಿಗೆ. "ನೀನು ಹೋದಲ್ಲೆಲ್ಲ ಹೊಸಬರೊಡನೆ ಕಲೆಯುವ ಚಟವನ್ನು ಬಿಟ್ಟಿದ್ದರೆ ಚೆನ್ನಾಗಿತ್ತು" ಎಂದು ಸೇರಿಸಿದ.

ಒಂದು ದಿನ ಬೆಳಿಗ್ಗೆ ಆ ವ್ಯಾಪಾರಿಯ ಹೆಂಡತಿಯು ಒಬ್ಬ ಕಾರಿನ ಸಾರಥಿಯನ್ನು ಕರೆಸಿದಾಗ ಅವನ ಕಾರಿನಲ್ಲಿ ಮತ್ತೊಬ್ಬ ಪಯಣಿಗನಿದ್ದನು. ಆಗ ಅವಳು ತನ್ನ ಪತಿರಾಯನ ಉಪದೇಶದಂತೆ ಅವನೊಡನೆ ಮಾತಾಡಬಾರದೆಂದು ನಿಶ್ಚಯಿಸಿದಳು. ಹಾಗೇ ಕಾರು ಸಾಗಿತು. ಒಬ್ಬರೂ ಒಂದ ಮಾತನ್ನೂ ಆಡಲಿಲ್ಲ. ಆ ಪಯಣಿಗ ತನ್ನ ಸ್ಥಳ ಬಂದೊಡನೆ ಇಳಿದು ಹೋದ. ಆಗ ಸಾರಥಿಯೆಂದ, "ಅವನು ತೀರ ಅಪರಿಚಿತನಾದ ಒಬ್ಬ ವ್ಯಾಪಾರಿ. ಅವನು ಸ್ವೀಡನ್ನಿನವನು;ಅವನಿಗೆ ಇಲ್ಲಿ ಯಾರ ಪರಿಚಯವೂ ಇಲ್ಲ. ವ್ಯಾಪಾರಕ್ಕಾಗಿ ಅವನು ಇಲ್ಲಿಗೆ ಬಂದಿದ್ದ. ಅವನಿಗೆ ಏನೂ, ಇಂಗ್ಲೀಷು ಬರುವದಿಲ್ಲ. ಆದರಿಂದ ಬಹಳ ತೊಂದರೆಗೀಡಾಗಿದ್ದಾನೆ" ಎಂದ.

ಮೇಲಿನ ಮಾತನ್ನು ಕೇಳಿದೊಡನೆ ಆಕೆ ನಿರ್ಧರಿಸಿದಳು "ನಾನು ಗಂಡನ ಉಪದೇಶ ಪಾಲಿಸಿದ್ದು ತಪ್ಪಾಯಿತು. ಈ ವ್ಯಾಪಾರಿ ನಮ್ಮೂರಿನವನೆಂದು ಅವನೊಡನೆ ಮಾತಾಡಿದ್ದರೆ ಗೊತ್ತಾಗುತ್ತಿತ್ತು. ಅಯ್ಯೋ! ಈಗ ಅವನು ಹೊರಟೇ ಹೋದನಲ್ಲಾ! ನಾನಿನ್ನೆಂದೂ ನನ್ನ ಪ್ರಿಯತಮನ ಉಪದೇಶವನ್ನು ಪಾಲಿಸೆನು".

ಆಕೆ ಹಿಂದೆ ಅತಿ ವಾಚಾಳಿಯಾಗಿದ್ದದ್ದು ದೋಷ; ಈಗ ಅತಿ ಮೌನಿಯಾದದ್ದು ದೋಷ. ಗಂಡ ಹೇಳಿದ್ದು ನ್ಯಾಯ. ಆದರೆ ಆ ನಿಯಮ ಸಾರ್ವಕಾಲಿಕ ಮತ್ತು ಸಾರ್ವದೇಶಿಕವೆಂದು ತಿಳಿದದ್ದು ಆಕೆಯ ದೋಷ. ಆದರಿಂದ 'ಅತಿ ಸರ್ವತ್ರವರ್ಜಯೇತ್' ಎಂಬ ಮಾತನ್ನೂ 'ಯೋದೇಶಕಾಲಕಾರ್ಯ ವ್ಯಪೇಕ್ಷೆಯಾ ಪಂಡಿತ: ಸ ಪುಮಾನ್' ಎಂಬ ನುಡಿಯನ್ನೂ ತಿಳಿಯದ ವಿದ್ಯಾವಂತರುಮನ್ಮರು ನಿಯಮಗಳ ಅನ್ವಯಸಂದರ್ಭಗಳನ್ನರಿಯದೆ ನಿಯಮಬಾಹಿರರಾಗುತ್ತಾರೆ. ಹೀಗೆ ಮಾತಿಗೊಂದು ಕಾಲವಿದ್ದರೆ ಮೌನಕ್ಕೊಂದು ಬೇರೆಯ ಕಾಲವಿದೆ ಎಂದು ಎಲೀನರ್ ಕ್ಲಾರೇಜ್ ಬರೆಯುತ್ತಾನೆ.

ನಮ್ಮ ಹಿರಿಕಿರಿಯರು ತಮ್ಮ ನಿತ್ಯ ಜೀವನದಲ್ಲಿ ಅಪಾರ್ಥಕ್ಕೆಡೆಗೊಡುವ ಮೌನವನ್ನವಲಂಬಿಸುವುದು ಅನುಭವಸಿದ್ಧವಾದುದು. ಮೇಲಿನ ಮಾತನ್ನು ಗಮನಿಸಿ ಅವರು ಇನ್ನು ಮೇಲೆ ಹೀಗೆ ಸಂಶಯ ದೃಷ್ಟಿಗೆ ಗುರಿಯಾಗುವುದನ್ನು ತಪ್ಪಿಸಿಕೊಳ್ಳುವರೆ?

ಒಳ್ಳೆಯ ಮನೆತನಸ್ಥ.... ಆದರೆ?

ಅಮೇರಿಕವೆಂದರೆ ನಮಗೆ ಪಾತಾಳಲೋಕ; ಸಂಪೂರ್ಣ ಕಾಲ ಕೆಳಗೆ. ಇಲ್ಲಿ ಹಗಲಿದ್ದಾಗ ಅಲ್ಲಿ ರಾತ್ರಿ. ಆದರೆ ಪುರಾಣದಲ್ಲಿ ಹೇಳುವಂತೆ ಅದು ನಾಗಲೋಕವಾಗಿಲ್ಲ, ಮಾನವ ಲೋಕವಾಗಿದೆ. ಚಿಕಾಗೋ ಎಂಬ ಅಲ್ಲಿಯ ಒಂದು ನಗರದ ಬ್ಯಾಂಕಿನವರು ಮತ್ತೊಂದು ನಗರವಾದ ಬೋಸ್ಟನ್ನಿನಲ್ಲಿರುವ ಒಂದು ಸಂಸ್ಥೆಗೆ ಅಲ್ಲಿಂದ ಬಂದ ಒಬ್ಬ ತರುಣನ ಬಗ್ಗೆ ಪುರಸ್ಕಾರಪತ್ರವನ್ನು (Recommendation) ಕಳುಹಬೇಕೆಂದು ಕೇಳಿದರು. ಅವನು ನೌಕರಿಗಾಗಿ ಬ್ಯಾಂಕಿಗೆ ಅರ್ಜಿ ಹಾಕಿದ್ದ. ಬ್ಯಾಂಕಿನವರಿಗೆ ಅವನ ಯೋಗ್ಯತೆಯ ಪರಿಚಯ ಮಾಡಿಕೊಡುವ ಪತ್ರ ಬೇಕಾಗಿತ್ತು.

ಬೋಸ್ಟನ್ನಿನ ಸಂಸ್ಥೆಯಿಂದ ಕೆಲದಿನಗಳ ನಂತರ ಒಂದು ಪತ್ರ ಬಂದಿತು. ಅದರಲ್ಲಿ ಆ ತರುಣನ ತಂದೆ ಒಬ್ಬ ಪಾದ್ರಿಯೆಂದೂ ತಾಯಿ ಪ್ರಸಿದ್ಧ ಜಮೀನುದಾರರ ಮನೆತನಕ್ಕೆ ಸೇರಿದವಳೆಂದೂ ತಿಳಿಸಲಾಗಿತ್ತು; ಅಲ್ಲದೆ,ಅವನ ತಂದೆಯ ಹಿರಿಯರು ರಾಜವಂಶದವರೆಂದೂ ತಾಯಿಯ ಮನೆಯವರು ಕಲಾವಿದರ ಪರಂಪರೆಯುಳ್ಳವರೆಂದೂ ಶ್ರೀಮಂತಿಕೆ, ಸ್ಥಾನ, ಮಾನಗಳಲ್ಲಿ ಪ್ರಥಮ ವರ್ಗಕ್ಕೆ ಸೇರಿದ ಸತ್ಕುಲಗಳ ಸಂಯೋಗದಿಂದ ಅವನು ಜನಿಸಿದವನೆಂದೂ ಅದರಲ್ಲಿ ಕಾಣಿಸಲಾಗಿತ್ತು.

ಕೆಲವು ದಿನಗಳು ಉರುಳಿದವು. ಅನಂತರ ಚಿಕಾಗೋ ಬ್ಯಾಂಕಿನವರು ಬೋಸ್ಟನ್ನಿನ ಸಂಸ್ಥೆಗೊಂದು ಉತ್ತರ ಬರೆದರು.

"ನೀವು ಕಳುಹಿದ ಪತ್ರದಲ್ಲಿ ಅಗತ್ಯ ವಿಷಯಗಳನ್ನು ಸಂಪೂರ್ಣವಾಗಿ ಉಲ್ಲೇಖ ಮಾಡಿಲ್ಲ. ನಾವು ಆ ತರುಣನನ್ನು ಪ್ರಜೋತ್ಪಾದನ ಕಾರ್ಯಕ್ಕೆ ಬಳಸಿಕೊಳ್ಳುವ ವಿಚಾರಮಾಡಿಲ್ಲ;" ಎಂದು ಆ ಉತ್ತರದಲ್ಲಿ ಕಾಣಿಸಲಾಯಿತೆಂದು ಕ್ಲೀವ್‌ಲ್ಯಾಂಡ ಅನೊರಿಯಮರು ಬರೆಯುತ್ತಾರೆ.

ಕೇವಲ Favouritism ನಮ್ಮ ನಮ್ಮವರು ಎಂಬ ಭಾವನೆಯಿಂದ ಸರಕಾರೀ ನೌಕರರಿಗೆ ಜನರನ್ನು ಸೇರಿಸಿಕೊಳ್ಳುತ್ತಿರುವ ಹೊಣೆಗಾರಿಕೆಯಿಲ್ಲದ ಕೆಲವು ದೊಡ್ಡ ಹುದ್ದೆದಾರರಿಗೆ ಮೇಲಿನ ಉದಾಹರಣೆ ಒಂದು ಚಮ್ಮಟಿಗೆಯು (whip ಏಟಾಗಿ ಪರಿಣಮಿಸೀತೆಂದು ಸಜ್ಜನಿಕೆಯ ಭಾವದಿಂದ ಯಾರಾದರೂ ಎಣಿಸಿದರೆ ತಪ್ಪಾದೀತೆ?

ಗುಣದೋಷ ವಿಮರ್ಶೆ

ಒಬ್ಬ ಗಂಡಸನ್ನು ಪ್ರೀತಿಸುವುದಕ್ಕೆ ಮೊದಲು ಹೆಂಗಸು ಬಹಳ ನೀತಿದೃಷ್ಟಿಯುಳ್ಳವಳಾಗಿರುತ್ತಾಳೆಂದೂ ಅನಂತರ ನೀತಿಯ ಕಡೆ ಲಕ್ಷ್ಯವನ್ನೇ ಕೊಡುವುದಿಲ್ಲವೆಂದೂ ಕಂಡು ಬಂದಿದೆ. ತದ್ವಿರುದ್ಧವಾಗಿ ಒಬ್ಬ ಹೆಂಗಸನ್ನು ಪ್ರೀತಿಸುವ ಮೊದಲು ಗಂಡಸಿಗೆ ನೀತಿಯ ಬಗ್ಗೆ ವಿಶೇಷ ಲಕ್ಷ್ಯವಿರುವುದಿಲ್ಲವೆಂದೂ ಅನಂತರ ಅವನ ನೀತಿಶಾಸ್ತ್ರದ ನಿಯಮಗಳು ಹೆಚ್ಚಾಗಿ ದೇವತೆ ಕೂಡ ಪಾಲಿಸಲು ಕಷ್ಟಪಡಬೇಕಾಗುವಷ್ಟು ಕಠಿನವಾಗುವುದೆಂದೂ ಅಮೇರಿಕದ "ಪಮ್ಮ ಪತ್ರಿಕೆ" ಸಾರಿದೆ. ಈ ಮಾತು ಸಾರ್ವತ್ರಿಕವಲ್ಲದಿದ್ದರೂ ಈಗಿನ ಕಾಲದಲ್ಲಿ ಬಹುಮಟ್ಟಿಗೆ ನಿಜವೆಂದು ತೋರುತ್ತದೆ. ಕೆಲವು ವಿವಾಹಿತ ಪುರುಷರು ವಿವಾಹಾನಂತರ ಅತಿ ಪ್ರೌಢಿಯನ್ನು, ಅತಿರಸಿಕತೆಯನ್ನು ಪ್ರದರ್ಶಿಸುವುದು ಮತ್ತು ಕೆಲ ಅವಿವಾಹಿತ ನಾಸ್ತಿಕರು ವಿವಾಹನಂತರ ಅತ್ಯಾಸ್ತಿಕತೆ ಅತಿ ಪವಿತ್ರತೆಯನ್ನು ತಾಳುವುದು ಇದಕ್ಕೆ ನಿದರ್ಶನ. ಕೆಲವು ಎಂಬ ವಿಶೇಷಣವನ್ನು ಪ್ರಯೋಗಿಸಿದ್ದು ನಾಗರಿಕರನ್ನೂ ಅರ್ಧ ನಾಗರಿಕ ಇಲ್ಲವೆ ಅನಾಗರಿಕರನ್ನೂ ಪ್ರತ್ಯೇಕಿಸುವುದಕ್ಕಾಗಿ. ಮೇಲಿನ ನಿದರ್ಶನವು ಆಧುನಿಕ ನಾಗರಿಕರಲ್ಲಿ ಹೆಚ್ಚಾಗಿ ಕಂಡುಬರುವುದು ಸಹಜ. ಇದಕ್ಕೆ ಅವರಿಗಿರುವ ಕೇವಲ ಲೌಕಿಕತೆ ಮತ್ತು ಪ್ರತ್ಯೇಕತ್ತ ಸ್ವಭಾವಗಳೇ ಕಾರಣ.

ಹೆಂಗಸಿನ ಅತಿ ಪ್ರವೃತ್ತಿ ಮತ್ತು ಗಂಡಸಿನ ಮಿತ ಪ್ರವೃತ್ತಿಗಳು ಲೋಕಪ್ರಸಿದ್ಧವಿವೆ. ಒಮ್ಮೆ ಒಂದು ಸಾರ್ಥಕವಾದರೆ ಮತ್ತೊಮ್ಮೆ ಇನ್ನೊಂದು ಸಾರ್ಥಕವಾಗುತ್ತದೆ, ಕಾರ್ಯಸಾಧಕವೆನಿಸುತ್ತದೆ. ಸುಸಂಸ್ಕಾರ ಬೆಳೆಸಿಕೊಂಡ ಸ್ತ್ರೀಪುರುಷರು ತಮ್ಮ ಸ್ವಾಭಾವಿಕ ಇಲ್ಲವೆ ಸಂಸ್ಕಾರಜನ್ಯ ಲೋಪದೋಷಗಳನ್ನು ಸರಿಪಡಿಸಿಕೊಂಡು ದೇಶಕಾಲ ಸಂದರ್ಭಾನುಸಾರ ನಡೆದುಕೊಳ್ಳುತ್ತಾರೆ. ಸಂಸ್ಕಾರ ಬೆಳೆಯಲ್ಲದ, ಪರಿಪಾಕಹೊಂದದ ಮನಸ್ಸುಳ್ಳ ಸ್ತ್ರೀಪುರುಷರಲ್ಲಿ ಯಾವ ಗುಣದೋಷಗಳಿದ್ದರೂ ಅವನ್ನು ಔಚಿತ್ಯ ದೃಷ್ಟಿಯಲ್ಲಿ ಅಳವಡಿಸುವ ಬುದ್ಧಿ ಉತ್ಪನ್ನವಾಗದು, ಶಕ್ತಿ ಬರದು. ಗುಣದೋಷಗಳು ಪಾಪಪುಣ್ಯ, ಧರ್ಮಾಧರ್ಮಗಳಂತೆ Relative ಪರಸ್ಪರ ಸಂಬಂಧ ವ್ಯಕ್ತಿಗಳು. ಒಂದೊಂದು ಸಂದರ್ಭದಲ್ಲಿ ಅದು ಇದಾಗಬಹುದು. ಆದುದರಿಂದ ಆಯಾ ಗುಣದೋಷ ಸಂಪನ್ನತೆಯಿಂದ ಒಬ್ಬ ವ್ಯಕ್ತಿಯು ಉತ್ತಮ ಅಥವಾ ನೀಚನೆನ್ನುವುದು ತಪ್ಪು. ಅದು ಸಂದರ್ಭ ನಿಯಂತ್ರಿತ ಎಂದು ತಿಳಿಯಬೇಕು.

ಅಡಿಗೆಯಲ್ಲಿ ಶಿಕ್ಷಣ

ಬಾಳೆಹಣ್ಣು ಕೆಡದಂತೆ ಇಡುವ ಬಗೆ:

ಬಾಳೆಯ ಹಣ್ಣನ್ನು ತುಂಡು ಮಾಡಿ ಕಿತ್ತಳೆ, ದ್ರಾಕ್ಷಿ, ಲಿಂಬೆ ಇಲ್ಲವೆ ಪರಂಗಿ ಹಣ್ಣಿನ ರಸದಲ್ಲಿ ಮುಳುಗಿಸು; ಈ ರಸದಲ್ಲಿರುವ ಒಂದು ವಿಶಿಷ್ಟ ದ್ರವ್ಯವು ಬಾಳೆಯ ಹಣ್ಣು, ಸೇಬು ಇಲ್ಲವೆ ಬೋರೆಹಣ್ಣು ಹಳದಿ ಬಣ್ಣಕ್ಕೆ ತಿರುಗಿ ಕೆಡದಂತೆ ಸುರಕ್ಷಿತವಾಗಿಡುವುದು.

ಕಡೆದು ತೆಗೆದ ಕೆನೆಯನ್ನು ಸುರಕ್ಷಿತವಾಗಿ ಇಡುವ ಬಗೆ:

ಮೊಟ್ಟೆಯ ಬಿಳಿಯ ರಸವನ್ನು ಕೆನೆಯೊಡನೆ ಬೆರೆಸಿ ಕಡೆದರೆ ಅದರಿಂದ ಕೆನೆಯು ಪರಿಮಾಣವನ್ನೂ ಹೆಚ್ಚುತ್ತದೆ, ರುಚಿಯೂ ಕೆಡುವುದಿಲ್ಲ; ಕೆನೆ ಬಹಳ ತೆಳ್ಳಗಿದ್ದರೆ ಒಂದು ಚಮಚದಷ್ಟು ಲಿಂಬೆ ನೀರನ್ನು ಒಂದು ಅಚ್ಚೇರು ಕೆನೆಗೆ ಬೆರೆಸು.

ಬೇಯಿಸುವಾಗ ಅನ್ನದಗಳು ಒಂದಕ್ಕೊಂದು ಅಂಟದಂತೆ ಮಾಡುವ ಬಗೆ:

ಒಂದು ಸೇರು ನೀರಿನಲ್ಲಿ ಬೇಯುತ್ತಿರುವ ಅನ್ನಕ್ಕೆ ಒಂದು ಚಮಚದಷ್ಟು ಲಿಂಬೆಯ ರಸವನ್ನು ಸೇರಿಸು.

ಸೇಬು ಇಲ್ಲವೆ ಇತರ ಹಣ್ಣುಗಳ ರಸಾಯನ ಕೆಡದಂತೆ ಇಡುವ ಬಗೆ:

ಮೊಟ್ಟೆಯ ಬಿಳಿಯ ರಸವನ್ನು ತೆಗೆದು ಪಾತ್ರೆಯ ತಳಕ್ಕೆ ಬಳಿದು ಅನಂತರ ಅದರಲ್ಲಿ ರಸಾಯನವನ್ನು ತುಂಬು.

ಮೇಲಿನವು ತಿನಸುಗಳನ್ನು ಬಹುಕಾಲ ಉಳಿಸುವ ಕೆಲವು ಯೋಜನೆಗಳು. ಇವು ಬಹಳ ಸರಳವಿದ್ದರೂ ಬಹಳ ಮಂದಿಗೆ ಗೊತ್ತಿಲ್ಲ. ಒಮ್ಮೊಮ್ಮೆ ಸಣ್ಣ ಸಣ್ಣ ಕಾರ್ಯಗಳು ದೊಡ್ಡ ನಷ್ಟವನ್ನು ತಪ್ಪಿಸಲು ಕಾರಣವಾಗುತ್ತವೆಂಬುದು ನಿಜ.

ಕೈಗಾರಿಕೆಗಳಿಂದೇ ಸಮಾಜಸ್ವಾಸ್ಥ್ಯವೃದ್ಧಿ

(ಲೇಖ—೨)

ಲೇಖಕರು :— ಶ್ರೀ ಎಸ್. ಕೆ. ಕಲ್ಲಾಪೂರ ಬಿ. ಎ. ಎಲ್. ಎಲ್. ಬಿ

(ಗ್ರಾಮೋದ್ಯೋಗ ಸಂಘ, ಕರ್ನಾಟಕ ಶಾಖೆ)

ಹೋದ ಲೇಖದಲ್ಲಿ ವಿವಿಧ ಕೈಗಾರಿಕೆಗಳ ವರ್ಗೀಕರಣವು ಅವು ಹೋತ ಕಾರಣ ಹೇಳಿ, ಸಂಕ್ಷೇಪವಾಗಿ ಹಳ್ಳಿ ಜೀವನದ ವಿಷಯ ನಿರೂಪಿಸಿ, ಉತ್ಪಾದನೆಯ ಮಂದಗತಿಯನ್ನು ಪರಿಶೀಲಿಸಿ ಹಳ್ಳಿಯ ಕೆಲಸಗಾರರ ಸುಖ ದುಃಖದ ಸಹಕಾರ ಕೆಳಗೊಳ್ಳುವ ಯುಕ್ತ ಸಹಾಯದ ಸನ್ನಿವೇಶನೆ ಮಾಡಿಯಾಯಿತು. ಈ ಲೇಖನದಲ್ಲಿ ಇನ್ನು ಕೆಲ ಅಂಶಗಳನ್ನು ಚರ್ಚಿಸಬೇಕೆನ್ನುತ್ತೇನೆ.

ತಜ್ಞರೂ ಸೀಮಿತ ಕಾರ್ಯಕ್ಷೇತ್ರವೂ

ಹೆಚ್ಚು ಕಡಿಮೆ ಹಳ್ಳಿಗಳ ಯಾವತ್ತೂ ಕೈಗಾರಿಕೆಗಳು ಒಂದಿಲ್ಲೊಂದು ರೀತಿಯ ಸಹಾಯವಿಲ್ಲದೆ ಹಾಳಾದವಾಗಿರುತ್ತವೆ. ಇಂದಿನ ಯಂತ್ರಯುಗದಲ್ಲಿ ಕೂಡ ಕೈಗಾರಿಕೆಯಿಂದ ಜೀವಿಸುತ್ತಿರುವವರ ಸಂಖ್ಯೆಯು ವಿಶೇಷವೇ ಆಗುತ್ತದೆ. ಹೀಗಿರುವಾಗ ಪ್ರತಿಯೊಂದು ಹಳ್ಳಿಯು ಪ್ರತಿಯೊಂದು ಕೈಗಾರಿಕೆಯನ್ನು ಪ್ರೋತ್ಸಾಹಿಸುವ ಧೋರಣವನ್ನು ಅನುಸರಿಸುವದು ಎಷ್ಟೇ ಯೋಗ್ಯವಾದದ್ದಾದರೂ ಆ ಬಗ್ಗೆ ಸಾಕಷ್ಟು ಹಣ ಮತ್ತು ಯೋಜಕರು ಮುಂದೆ ಬರುವದು ಅಸಾಧ್ಯ. ಇಂಥ ಪ್ರಸಂಗದಲ್ಲಿ ಒಂದೆರಡು ಕೈಗಾರಿಕೆಗಳ ಪುನರ್ರಚನೆಯ ಕಾರ್ಯಕ್ರಮವನ್ನು ಕೈಕೊಂಡು ಅದನ್ನು ಇಡೀ ದೇಶದಲ್ಲಿ ಪ್ರಸಾರಮಾಡುವದು ಒಂದು ಜಾಣತನ. ಈ ಧೋರಣವನ್ನು ಕೈಕೊಳ್ಳುವುದರಿಂದ ಬಹು ಕಡಿಮೆ ತಜ್ಞರು ನಮಗೆ ದೊರೆತರೂ ಸಾಕಾಗುವದು. ಒಂದೇ ಕಡೆಗೆ ನಮ್ಮ ದೃಷ್ಟಿಯಿರುವುದರಿಂದ ಅದರಲ್ಲಿ ನಮಗೆ ಸಾಕಷ್ಟು ಅನುಭವವನ್ನು ಬಹು ಕಡಿಮೆ ಅವಧಿಯಲ್ಲಿ ದೊರೆಯುವದು ಸಾಧ್ಯವಾಗುವದಲ್ಲದೆ ಅನೇಕ ಎಡೆಗಳಲ್ಲಿ ಬೇರೆ ಬೇರೆ ಮನುಷ್ಯರು ಮತ್ತು ಬೇರೆ ಬೇರೆ ಅನುಭವಗಳು ಮುಂಬರುತ್ತವೆ. ಒಬ್ಬರು ಪಡೆದ ಜ್ಞಾನ ಅನುಭವಗಳ ಲಾಭವನ್ನು ಇನ್ನೊಬ್ಬರು ಉಪಯೋಗಿಸಿಕೊಳ್ಳಲಾಗುತ್ತದೆ. ಆ ಕೈಗಾರಿಕೆಗಳ ಒಡವೆಗಳ ಮಾರಾಟದ ಏರ್ಪಾಡು ಮತ್ತು ಅವುಗಳಿಗೆ ಬೇಕಾಗುವ ಸರಕುಗಳ ಖರೀದಿಯ ಏರ್ಪಾಡು ಅಲ್ಲದೆ ತಯಾರಿಕೆಯ ಏರ್ಪಾಡು ಮಾಡುವದು ಸುಲಭವಾಗುತ್ತದೆ.

ಅದರ ಕೆಲವೊಂದು ಕ್ಷೇತ್ರವನ್ನು ಆರಿಸಿ ಆ ಕ್ಷೇತ್ರದಲ್ಲಿ ಯಾವತ್ತೂ ಕೈಗಾರಿಕೆಗಳು ಕೆಲಸವನ್ನು ಕೈಕೊಳ್ಳುವದರಲ್ಲಿ ಸಹ ಒಂದು ರೀತಿಯ ಜಾಣತನವಿದೆ. ತಜ್ಞರ ವಿಚಾರವು ಬೇರೆ. ಅದರ ಪ್ರಸಾರಕ ಕಾರ್ಯದರ್ಶಿ ಮುಂತಾದವರ ಕೊರತೆಯು ಸಹ ಬಹುಮಟ್ಟಿಗಿದೆ. ಇಡೀ ಪ್ರಾಂತದ ತುಂಬ ನಮ್ಮ ಚಟುವಟಿಕೆಗಳನ್ನು ನಾವು ಹರಡಿತ್ತ ನಡೆದರೆ ಸಾಕಷ್ಟು ಯೋಜಕರು ಕೆಲಸಗಾರರು ನಮಗೆ ದೊರೆಯುವದು ಕಠಿಣ. ಒಬ್ಬನೇ ಕಾರ್ಯದರ್ಶಿಯು ಅನೇಕ ಕೆಲಸಗಳನ್ನು ಒಂದೇ ಸ್ಥಳದಲ್ಲಿ ಕುಳಿತು ನೋಡಿಕೊಳ್ಳುವದು ಸಾಧ್ಯವಾಗುತ್ತದೆ. ಖರ್ಚು ಕಡಿಮೆ; ಮೇಲ್ವಿಚಾರಣೆ ಸುಲಭ. ಆದರೆ ಬಹು ದೊಡ್ಡ ಕ್ಷೇತ್ರವನ್ನು ಅವನ ಸ್ವಾಧೀನದಲ್ಲಿ ಕೊಟ್ಟರೆ ಎಷ್ಟೇ ಕಡಿಮೆ ಪ್ರಮಾಣದ ಕೆಲಸವನ್ನಾದರೂ ಅವನು ನೋಡಿಕೊಳ್ಳುವದು ಸಾಧ್ಯವಾಗುವದಿಲ್ಲ.

ಹಳ್ಳಿ ಬದುಕಿದರೆ ದಿಳ್ಳಿ ದಿಗ್ಗೇಶ ಬದುಕುವವು

ಸರಕಾರದವರು ಈ ಮೊದಲು ಕೇಳಿಕೊಂಡಂತೆ ಒಂದೆರಡು ಕೈಗಾರಿಕೆಗಳಿಗೆ ಮಾತ್ರ ಪ್ರೋತ್ಸಾಹ ಕೊಡತಕ್ಕದ್ದೆಂದು ಯೋಗ್ಯವಾದದ್ದಾದರೆ ಅವುಗಳನ್ನು ಕ್ರಮವಾಗಿ ಆರಿಸುವದೆಂತು? ಯಾವ ಯಾವ ಕೈಗಾರಿಕೆಗಳಿಗೆ ಯಾವ ಯಾವ ಕಾರಣಗಳ ಮೇಲಿಂದ ಪ್ರಥಮ ಸ್ಥಾನ ಕೊಡತಕ್ಕದ್ದು?

ಯಂತ್ರಗಳ ಈ ಯುಗದಲ್ಲಿ ಕೈಗಾರಿಕೆಗಳ ಅವಶ್ಯಕತೆಯುಂಟೋ ಎಂಬುದೂ ಒಂದು ಪ್ರಶ್ನೆ. ಏನು ಮಾಡಿದರೂ ಯಂತ್ರದ ಒಡವೆಗಳೊಡನೆ ಕೈಗಾರಿಕೆ ಒಡವೆಗಳು ಸ್ಪರ್ಧಿಸಲಾರವೆಂಬುದನ್ನು ಒಪ್ಪಲೇಬೇಕು. ಕನಿಷ್ಠ ಆಹಾರದ ಸಲುವಾಗಿ ಯಾದರೂ ನಾವು ಹಳ್ಳಿಗಳ ಮೇಲೆ ಅವಲಂಬಿಸಿರಬೇಕಾಗಿದೆ. ನಮ್ಮ ಗಿರಣಿಗಳಿಗಾಗಿ ಬೇಕಾಗುವ ಹತ್ತಿ, ಸೆಣಬು, ಕಬ್ಬು, ಎಣ್ಣೆಕಾಳು ಮುಂತಾದ ಕಚ್ಚಾ ಸರಕುಗಳು ಮುಖ್ಯವಾಗಿ ಹಳ್ಳಿಗಳಲ್ಲಿ ಬೇಸಾಯದಿಂದಲೇ ದೊರೆಯತಕ್ಕವಾಗಿರುತ್ತವೆ. ಅದಕ್ಕಾದರೂ ನಾವು ಹಳ್ಳಿಗಳನ್ನೂ ಬೇಸಾಯವನ್ನೂ ರಕ್ಷಿಸಬೇಕಾಗಿದೆ. ನಮ್ಮಲ್ಲಿಯ ಬೇಸಾಯವು ವರ್ಷಕ್ಕೆ ನಾಲ್ಕು ತಿಂಗಳ ಉದ್ಯೋಗವನ್ನು ಸಹ ಕೊಡುವದಿಲ್ಲ. ನಾಲ್ಕು ತಿಂಗಳ ಅನ್ನವನ್ನೂ ಕೊಡುವದಿಲ್ಲ. ಅಕಾಲಿಕ ಮಳೆಗಾಳಿ ಸಿಡುಗುಗಳ ಮೂಲಕ ಬರಬಹುದಾದ ಬೆಳೆಯೂ ಕೈಹತ್ತುವದಿಲ್ಲ. ಅದ್ದರಿಂದ ಕೇವಲ ಬೇಸಾಯವನ್ನು ಮತ್ತು ಹಳ್ಳಿಗಳನ್ನು ರಕ್ಷಿಸುವದಕ್ಕಾಗಿ ಒಂದಿಲ್ಲೊಂದು ಹೋರೆಯನ್ನು ಕಲ್ಪಿಸಿಕೊಟ್ಟು ಅದರಿಂದ ಕೆಲಮಟ್ಟಿನ ಉತ್ಪನ್ನವನ್ನೂ ಲಾಭವನ್ನೂ ಕಲ್ಪಿಸಿಕೊಡುವ ಹೊಣೆಗಾರಿಕೆಯು ಸರಕಾರದ ಮೇಲೆ ಬಂದಿದೆ. ಇಲ್ಲವಾದರೆ ಹಳ್ಳಿಗಳು ಮತ್ತು ಬೇಸಾಯವು ಬದುಕಲಿಕ್ಕಿಲ್ಲ, ಮತ್ತು ಜೊತೆಜೊತೆಗೆ ದಿಳ್ಳಿ ದಿಗ್ಗೇಶ ಬದುಕುವದೂ ಕಠಿಣವಾದೀತು. ಬೇಸಾಯವು ಸರಿಯಾಗಿ ನಡೆಯಬೇಕಾದರೆ ಕಮ್ಮಾರ, ಬಡಿಗ, ಕುಂಬಾರ, ಮಾದಿಗ ಮೊದಲಾದ ವ್ಯವಸಾಯಗಾರರು ಹಳ್ಳಿಗಳಲ್ಲಿ ವಾಸಿಸಿ ರೈತರಿಗೆ ನೆರವಾಗಬೇಕು ವಿಚಾರಮಾಡಿ ನೋಡುವವರಿಗೆ ಇವರಲ್ಲಿ ಯಾರೊಬ್ಬನೂ ಇನ್ನೊಬ್ಬನನ್ನು ಮತ್ತು ಯಾವದೊಂದು ಕೈಗಾರಿಕೆಯು ಇನ್ನೊಂದು ಕೈಗಾರಿಕೆಯನ್ನು ಬಿಟ್ಟಿರಲಾರದೆಂದೂ ಹಳ್ಳಿಯ ಜೀವನಕ್ಕೆ ಇವೆಲ್ಲ ಅತ್ಯವಶ್ಯವಾದ ಅವಯವಗಳೆಂದೂ ಸ್ಪಷ್ಟವಾಗುತ್ತದೆ. ಇವುಗಳಲ್ಲಿ ಯಾವದಾದರೂ ಒಂದು ಜರ್ಜರಿತಗೀಡಾದರೆ ಹಳ್ಳಿಗಳು ಅಂಗಹೀನವಾಗುವದೆಂಬುದು ಸ್ಪಷ್ಟ.

೬ ನಿರುದ್ಯೋಗಿಗಳು ಸಾಮಾಜಕಂಟಕರಾದಾರು ಜೋಕೆ

ಈ ವಿಧ ಈ ವ್ಯವಸಾಯಗಾರರಲ್ಲಿ ಯಾವದೊಂದು ವರ್ಗವು ಯಂತ್ರಗಳ ಸ್ಪರ್ಧೆಯ ಮೂಲಕ ನಾಶಹೊಂದಿದರೆ ಅದಕ್ಕೆ ಸೇರಿದ ಯಾವತ್ತೂ ಜನರು ನಿರುದ್ಯೋಗಿಗಳಾಗುವರು. ಅವರಿಗೆ ಉದ್ಯೋಗವನ್ನೂ ಗಳಿಕೆಯನ್ನೂ ಕಲ್ಪಿಸಿಕೊಡುವ ಬಗೆ ಹೇಗೆ? ಅವರು ತಮ್ಮ ಹೊಟ್ಟೆಯ ಪಾಡಿಗಾಗಿ ಕಳವು-ಸುಲಿಗೆ ಕೊಲೆ-ಸುಲಿಗೆ ಮುಂತಾದ ಅಪರಾಧಗಳನ್ನು ಮಾಡಹತ್ತಿದರೇನುಗತಿ? ಅವರನ್ನು ಕ್ರಿಮಿನಲ್ ಸೆಟ್ಲ್‌ಮೆಂಟ್ ಮುಂತಾದವುಗಳಿಗೆಳೆದ ಮೇಲೆ ಅಲ್ಲಾದರೂ ಕೆಲಸ ಕೊಡಲೇ ಬೇಕಲ್ಲವೇ? ಊಟ ಉಡಿಗೆಗಳನ್ನು ಕೊಡಲೇ ಬೇಕಲ್ಲವೇ? ಆ ಬಗ್ಗೆ ಗಿರಣಿಗಳ ಮೇಲೆ ಇಲ್ಲವೆ ಇತರ ಜನತೆಯ ಮೇಲೆ ಕರಭಾರವನ್ನು ಹಾಕಲೇ ಬೇಕಲ್ಲವೇ? ಅಥವಾ ವಿದೇಶಗಳಲ್ಲಿರುವ ಪರಿಪಾಠದಂತೆ ಉದ್ಯೋಗಿಗಳ ಮೇಲೆ ಕರಹಾಕಿ ನಿರುದ್ಯೋಗಿಗಳು ಬದುಕಿರುವ ಬಗ್ಗೆ ಪಟ್ಟಿ (doles) ಕೊಟ್ಟು ಅವರು ಸಾಯಗೊಡಬಾರದೆಂದು ನಿರುಪಯೋಗವಾದ ಉದ್ಯೋಗಗಳನ್ನು ಕಲ್ಪಿಸಿಕೊಡಬೇಕಲ್ಲವೇ? ಅಂತೂ ಕೈಗಾರಿಕೆಗಳಲ್ಲಿ ತೊಡಗಿದ ಪ್ರಾಮಾಣಿಕ ಕೆಲಸಗಾರರ ಕೈಯಿಂದ ಅವರ ಉದ್ಯೋಗಗಳನ್ನು ಕಸಕೊಂಡು ಅವರನ್ನು ನಿರುದ್ಯೋಗಿಗಳನ್ನಾಗಿ ಮಾಡಿ ಉಪವಾಸ ಕೆಡವಿ ದುಷ್ಕೃತ್ಯಗಳ ಕಡೆಗೆ ಅವರ ಮನಸ್ಸನ್ನು ಹರಿಯಗೊಟ್ಟು, ಅವರನ್ನು ಸಮಾಜಕಂಟಕರನ್ನಾಗಿ ಮಾಡಿ ಆ ಮೇಲೆ ಅವರನ್ನು ಶಿಕ್ಷೆಗೆ ಗುರಿಮಾಡಿ ಸೆರೆಮನೆಗಳಲ್ಲಿಟ್ಟು ಅಲ್ಲಿ ಕೆಲಸವನ್ನೂ ಊಟ ಉಡಿಗೆಗಳನ್ನೂ ಕಲ್ಪಿಸಿಕೊಡುವದು ಎಲ್ಲಿಯ ಜಾಣತನ? ಅಥವಾ ಪಟ್ಟಿ (doles) ಕೊಟ್ಟು ನಿರುಪಯೋಗದ ಕೆಲಸಗಳಲ್ಲಿ ತೊಡಗಿಸುವದೂ ಯಾವ ಜಾಣತನ? ಹಾಗೂ ಅವರನ್ನು ರೋಗಿಗಳನ್ನಾಗಿ ಮಾಡಿ ಅನಂತರ ಅವರ ಬಗ್ಗೆ ಔಷಧಾಲಯವನ್ನು ಇಡುವದರಲ್ಲೇನು ಜಾಣತನ? ಇದು ಸಮಾಜವನ್ನು ಬುಡಮೇಲು ಮಾಡುವದೆಂದೇ ನನ್ನ ಹೇಳಿಕೆ. ಸಮಾಜಕಂಟಕರಾದ ಗಿರಣಿಗಳಲ್ಲಿ ತಯಾರಾದ ಒಡವೆಗಳನ್ನು ಒಂದು ದುಡ್ಡು ಕಡಿಮೆ ಕೊಟ್ಟು ಕೊಳ್ಳುವವರು ಎರಡು ದುಡ್ಡುಗಳನ್ನು ಸರಕಾರಕ್ಕೆ ಕರದ ರೂಪದಲ್ಲಿ ಕೊಟ್ಟು ನಿರುದ್ಯೋಗಿಗಳನ್ನು ಪೋಷಿಸುತ್ತಾರೆ.

ವರ್ಗೀಕರಣದ ಇನ್ನೊಂದು ಬಗೆ

ಹಳ್ಳಿಗಳ ಕೈಗಾರಿಕೆಗಳು ಮತ್ತು ಸರಕಾರದ ಸಹಾಯ ಈ ದೃಷ್ಟಿಗಳಿಂದ ವಿಚಾರಮಾಡುವಾಗ ನಮ್ಮ ಕೈಗಾರಿಕೆಗಳನ್ನು ಈ ಕೆಳಗಿನಂತೆ ವರ್ಗೀಕರಿಸತಕ್ಕದ್ದೆಂದು ನಾನು ತಿಳಿಯುತ್ತೇನೆ.

೧ ಬೇಸಾಯಗಾರರು ನಿರುದ್ಯೋಗಿಗಳಾಗಿರುವ ಸಮಯದಲ್ಲಿ ಮತ್ತು ಅವರಿಗೆ ಬೇಸಾಯದಿಂದ ಅವಶ್ಯವಿರುವಷ್ಟು ಗಳಿಕೆ ಇಲ್ಲದಿರುವಾಗ ಅವರಿಗೆ ಉದ್ಯೋಗವನ್ನೂ ಗಳಿಕೆಯನ್ನೂ ಕೊಡುವ ಕೈಗಾರಿಕೆಗಳು.

ಉದಾ: ಜನ, ಕೋಳಿ, ಜೇನು, ರೇಶಿಮೆ ಹುಳ ಸಾಕುವದು, ಭತ್ತ ಕುಟ್ಟುವದು, ನೂಲುವದು.

೨ ಬೇಸಾಯಗಾರರಿಗೆ ಸಹಾಯ ಮಾಡತಕ್ಕ ಉದ್ಯೋಗಗಳನ್ನು ಮಾಡುತ್ತಿರುವವರ ಕೈಗಾರಿಕೆಗಳು.

ಉದಾ: ಕಮ್ಮಾರಿಕೆ ಬಡಿಗತನ ಇತ್ಯಾದಿ.

೩ ಹಳ್ಳಿಗಳಲ್ಲಿ ಉತ್ಪತ್ತಿಸುವ ಸರಕುಗಳನ್ನು ಉಪಯೋಗಿಸಿ ಹಳ್ಳಿಗಳಿಗೆ ಅವಶ್ಯವಿರುವಂಥ ಮತ್ತು ಹಳ್ಳಿಗಳಲ್ಲಿ ಖರ್ಚಾಗುವಂಥ ಒಡವೆಗಳನ್ನು ತಯಾರಿಸುವಂಥವು.

ಉದಾ : ಎಣ್ಣೆಗಾಣ,ಹಿಟ್ಟು ಬೀಸುವದು, ಹಗ್ಗ ತಯಾರಿಸುವದು.

೪ ಹೊರಗಿನಿಂದ ಕಚ್ಚಾ ಸರಕುಗಳನ್ನು ತರಿಸಿಕೊಂಡು ಅವುಗಳಿಂದ ಹಳ್ಳಿಗಳಿಗೆ ಅವಶ್ಯವಿರುವ ಒಡವೆಗಳನ್ನು ತಯಾರಿಸುವದು.

ಉದಾ: ನೇಯುವದು ಕಮ್ಮಾರಿಕೆ.

೫ ಹಳ್ಳಿಗಳಲ್ಲಿ ಉತ್ಪನ್ನವಾಗುವ ಕಚ್ಚಾ ಸರಕುಗಳಿಂದ ಒಡವೆಗಳನ್ನು ತಯಾರಿಸಿ ಅವುಗಳನ್ನು ಪಟ್ಟಣಗಳಿಗೆ ರಫ್ತು ಮಾಡುವ ಕೈಗಾರಿಕೆಗಳು.

೬ ಪಟ್ಟಣಗಳಿಂದ ಕಚ್ಚಾ ಸರಕುಗಳನ್ನು ತರಿಸಿಕೊಂಡು ಪಟ್ಟಣಗಳಿಗೆ ಕಳುಹಿಸುವ ಬಗ್ಗೆ ಒಡವೆಗಳನ್ನು ತಯಾರಿಸುವ ಕೈಗಾರಿಕೆಗಳು.

೭ ಇತರ.

ಇವುಗಳಲ್ಲಿ ಒಂದನೆಯ ಮತ್ತು ಎರಡನೆಯ ವರ್ಗಗಳ ಕೈಗಾರಿಕೆಗಳು ನಿರ್ನಾಮವಾದರೆ ಹಳ್ಳಿಗಳು ಸರ್ವಥಾ ಬದುಕಲಾರವು. ಈ ಕೆಲಸಗಾರರಿಗೆ ವರ್ಷದಲ್ಲಿ ಕೈತುಂಬ ಕೆಲಸ ಕೊಟ್ಟು ಅವರಿಗೆ ಹೊಟ್ಟೆತುಂಬ ಅನ್ನ ಕೊಡುವದು ಸರಕಾರದ ಆದ್ಯ ಕರ್ತವ್ಯವಾಗಿದೆ. ಅವರ ಒಡವೆಗಳೊಡನೆ ಸ್ಪರ್ಧಿಸುವ ಸರಕುಗಳು ಹಳ್ಳಿಗಳಿಗೆ ಬರಲೇ ಬಾರದು. ಅವುಗಳನ್ನು ತಯಾರಿಸಲು ಗಿರಣಿಗಳಿಗೆ ಪ್ರತಿಬಂಧ ವಿರಲೇ ಬೇಕು. ಇದೊಂದು ಕ್ರಾಂತಿಯೆಂದು ಜನರೂ ಸರಕಾರದವರೂ ಪ್ರತಿಪಾದಿಸಬಹುದು. ಆದರೆ ಈ ಕ್ರಾಂತಿಯುಂಟಾಗದೆ ಗತ್ಯಂತರವಿಲ್ಲ. ಸಾಧ್ಯವಿದ್ದ ಪ್ರಯತ್ನಗಳಿಂದ ಕೈಗಾರಿಕೆಗಳಿಗೆ ಅತಿ ಕಡಿಮೆದರದಲ್ಲಿ ಕಚ್ಚಾ ಸರಕುಗಳು ದೊರೆಯುವಂತೆ ಮಾಡುವದೂ ಕೆಲಸಗಾರರಿಗೆ ಅವಶ್ಯವುಳ್ಳ ಯಂತ್ರೋಪಕರಣಗಳನ್ನೂ ಕೈಗಾರಿಕೆ ಶಿಕ್ಷಣವನ್ನೂ ದೊರಕಿಸಿ ಕೊಡುವದೂ ಅವರ ಒಡವೆಗಳಿಗೆ ಯೋಗ್ಯದರ ಕೊಡುವ ಗಿರಾಕಿಗಳನ್ನು ದೊರಕಿಸಿ ಕೊಡುವದೂ ಅವಶ್ಯವಿದ್ದರೆ ದ್ರವ್ಯಸಹಾಯ ಮಾಡುವದೂ ಸರಕಾರದ ಕರ್ತವ್ಯವಾಗಿದೆ ಈ ಬಗ್ಗೆ ಅವರು ಎಷ್ಟು ವಿಚಾರ ಮಾಡಿದರೂ ಕಡಿಮೆ.

ಸರಕಾರದ ಸಹಾಯಾನುಗುಣ ವರ್ಗೀಕರಣ

ಸರಕಾರದ ಕಡೆಯಿಂದ ಸಹಾಯಗಳು ದೊರೆಯತಕ್ಕವೆಂಬ ವಿಚಾರದಿಂದ ಕೈಗಾರಿಕೆಗಳನ್ನು ಈ ಕೆಳಗಿನಂತೆ ವರ್ಗೀಕರಿಸ ಬಹುದಾಗಿದೆ.

೧ ಅನಾದಿಯಿಂದಲೂ ನಡೆದು ಬರುತ್ತಿರುವ ಧಂಧೆಗಳು.

(ಅ) ಅತಿ ಜರೂರಾಗಿ ಸಹಾಯ ಬೇಕಾಗಿ ಅದು ದೊರೆತರೆ ಮಾತ್ರ ಜೀವಿಸ ಬಲ್ಲಂಥವು

(ಆ) ಸಹಾಯವು ಅವಶ್ಯ ವಿರುತ್ತಿದ್ದರೂ ಅಷ್ಟೊಂದು ಜರೂರು ಇಲ್ಲದಂಥವು.

(ಇ) ಸಹಾಯ ವಿಲ್ಲದೆ ಬದುಕ ಬಲ್ಲಂಥವು.

(ಈ) ಎಷ್ಟು ಸಹಾಯ ದೊರೆತರೂ ಜೀವಿಸದಂಥವು.

೨ ಹೊಸದಾಗಿ ಸ್ಥಾಪಿಸತಕ್ಕ ಕೈಗಾರಿಕೆಗಳು.

ಅನಾದಿಯಿಂದ ನಡೆದು ಬರುತ್ತಿರುವ ಕೈಗಾರಿಕೆಗಳಿಗೆ ಪ್ರೋತ್ಸಾಹ ಕೊಡುವದು ಸರಕಾರದ ಆದ್ಯಕರ್ತವ್ಯವು. ಹೊಸ ಕೈಗಾರಿಕೆಗಳನ್ನು ಹಳ್ಳಿಗಳಲ್ಲಿ ಸ್ಥಾಪಿಸುವದು ಅಸಾಧ್ಯ ಅಥವಾ ಕಠಿಣ ಸಾಧ್ಯವಾದ ಮಾತು ಅದರಂತೆ. ಯಾವರೀತಿಯ ಸಹಾಯದಿಂದಲೂ ಬದುಕಲಾರದ ಕೈಗಾರಿಕೆಗಳ ಬಗ್ಗೆ ಹಣ ವೆಚ್ಚಮಾಡುವದು ಜಾಣತನವಲ್ಲವೆಂದು ನನ್ನ ಅಭಿಪ್ರಾಯ.

೧ (ಅ) ಮತ್ತು (ಆ) ಇವು ಪ್ರಥಮತಃ ಸರಕಾರದವರು ಕೈಕೊಳ್ಳತಕ್ಕ ವಿಷಯಗಳಿದ್ದು ೨ ನೆಯದು ಅನಂತರದ ವಿಷಯ. ಹೆಚ್ಚು ಕಡಿಮೆ ಅನಾದಿಯಿಂದ ಹಳ್ಳಿಗಳಲ್ಲಿ ನಡೆದು ಬರುತ್ತಿರುವ ಕೈಗಾರಿಕೆಗಳು ಬಿಡಿಸಲಾರದ ಸಡಲಿಸಲಾರದ ರೀತಿಯಿಂದ ಹಳ್ಳಿಯ ಜೀವನದಲ್ಲಿ ಸೇರಿ ಬಿಟ್ಟವೆ ಆದ್ದರಿಂದ ಆ ಬಗ್ಗೆ ಲಕ್ಷ ಕೊಡುವದು ಅತಿ ಅಗತ್ಯವಾದ ಮಾತು ಆದರೂ ಯಾವದೊಂದು ಕ್ಷೇತ್ರದಲ್ಲಿ ಹೊಸ ಕೈಗಾರಿಕೆಗಳು ಅಸ್ತಿತ್ವದಲ್ಲಿ ಬಂದು ಬಿಟ್ಟು ಬೇರೂರಿದರೆ ಅವನ್ನು ಅಲಕ್ಷಿಸುವದೂ ಜಾಣತನವಲ್ಲ. ವಿಶೇಷವಾಗಿ ಪಟ್ಟಣಗಳಲ್ಲಿ ಅಥವಾ ಔದ್ಯೋಗಿಕ ಕೇಂದ್ರಗಳಲ್ಲಿ ಅವು ಹುಟ್ಟಿ ಬೆಳೆಯುತ್ತವೆ.

ಮಹಾತ್ಮರ ಅಡಿದಾವರೆಗೆ

ಓ ಮಹಾತ್ಮಾ ಗಾಂಧಿ, ತಂದೆ, ಸತ್ಯಾತ್ಮ
ಭಾರತೀಯರ ಬಿಟ್ಟು ಹೋದೆಯ ಮಹಾತ್ಮ

೧

ನಾಡೆಲ್ಲ ನಿಬಿಡಾಂಧ ಕಾರದಲಿ ಬಿದ್ದು,
ದಾಸ್ಯ ದೌರಾತ್ಮ್ಯಗಳ ನನುಭವಿಸುತಿದ್ದು;
ಭ್ರಾಂತನಾಗಿರೆ ಮುಂದಿ ಬಂದೆ ತಿರೆಗೊಡೆಯ,
ಶಾಂತಿಯುಣಿಸಿದೆ ಸತ್ಯಸಾಗರದ ಕಡೆದು!

೨

ಹಿಂದು ಮುಸ್ಲಿಮರೈಕ್ಯ ಭಾರತದ ಸೌಖ್ಯ—
ಎಂದು ಹೇಳಿಗಿದರಾಯ್ತು ಕಡೆಗೂ ಅಶಕ್ಯ;
ಸರ್ವ ಧರ್ಮ ಸಮನ್ವಯಕ್ಕೆ ನೀ ದುಡಿದೆ—
ಪಾಕಿ—ಪಾಕಿಸ್ತಾನ ವೆರಡನ್ನು ಪಡೆದೆ!

೩

ಕಸವೆಂದು ತಮ್ಮ ತಾವೇ ಹಳಿದು ಕೊಂಡು
ಬಿಸುಸುಯ್ವ ಬಾಳ್ವ ಭಾರತರನ್ನು ಕಂಡು—
ಹುಸಿಮುನಿಸ.ದೋರಿ ಕರ್ತವ್ಯವನು ಕಲಿಸಿ,
ಒಸೆದಿತ್ತೆ ಬಿಡುಗಡೆಯ ದೇವತೆಯ ನೊಲಿಸಿ!

೪

ತಪ್ಪ ನಿನ್ನದು ಅಮರ, ನಿಸ್ವಾರ್ಥವಮರ,
ನಿನ್ನ ಸತ್ಕಾರ್ಯ ಪ್ರಯತ್ನವೂ ಅಮರ!
ಅದನರಿಯದಿರುವ, ಅದನಾಚರಿಸದಿರುವ
ಆಗದಿರಲೆಮ್ಮ ಅಜ್ಞಾನ ತಾನಮರ!

೫

ನಾಡನಾಯಕ ನಿನ್ನ.ನೆಚ್ಚಿ ನಡೆದಿಲ್ಲ—
ಅದಕಿಷ್ಟು ಸಿಟ್ಟೆ? ಅಹುದದಯೋಗ್ಯವಲ್ಲ;
ನಾವು ಹೇಡಿಗಳಯ್ಯೊ ಕಡುನನ್ನಿಕಾರ,
ನಮ್ಮ ಪಾಪದ ಫಲದೆ ನೀಹೋದೆ ದೂರ!

೬

ನಿನ್ನಿರವೆ ಶಾಂತಿ ಸುಧೆಯಂಬುನಿಧಿಯೊಯ್ತು,
ನಿನ್ನ ವಿರಹವೆ ನಿಶ್ಯದಾವಾಗ್ನಿಯಾಯ್ತು;
ನಿನ್ನ ನಂಬಿದನು ಅನುಸರಿಸದಿರೆ ನಾವು—
ನಿನಗೆಮರಪದ, ನಮಗೆ ಬದುಕಾಯ್ತು ಸಾವು.

೭

ದೀನದಲಿತರ ನೆತ್ತಿ ಹೊರೆದಯ್ಯ ನೀನು,
ನಿನ್ನೊಳಗಣಾ ಪ್ರೀತಿ ಬರಿಯ ಹೆಜ್ಜೇನು!
ಇನ್ನಾರ ಬಳಿವಿಡಿದು ಹೊರೆಯೆನ್ನಲಕ್ಕು?
ಅನ್ಯಾಯವಾಯ್ತಯ್ಯೊ ಕಾಣದೋ ದಿಕ್ಕು!

೮

ಭವ್ಯಾತ್ಮ ನಿನಗೆನ್ನ ಮುಡಿಪಿಡುವೆನೊಪ್ಪು,
ಪ್ರೇಮ ಮಯಿಯಾಗಿನಾನಿದೊ ನಮಿಪೆನಪ್ಪು;
ಜಗದಯ್ಯ ನಗುವೊಗದ ಓಗಾಂಧಿತಾತ—
ಮಂಗಳಾಗಿ ಕರೆವೆನೋಗೊಡು ದಿವ್ಯಚೇತ!

— ಎಸ್. ಕೆ. ಚಂದ್ರವದನೆ

ಸಂಪಾದಕೀಯ ಟೀಕೆಟಿಪ್ಪಣಿಗಳು

ಸಂತ್ರಸ್ತರಿಗೆ ಪರಿಹಾರ

ಮಹಾತ್ಮಾ ಗಾಂಧಿಯವರ ಮರಣದ ನಂತರ ಮುಂಬಯಿ ಪ್ರಾಂತದ ಸಾತಾರೆ ಬೆಳಗಾವಿ ಜಿಲ್ಲೆಗಳ ಕೆಲ ಭಾಗಗಳಲ್ಲಿ ಮತ್ತು ಕೊಲ್ಹಾಪುರ ಸಂಸ್ಥಾನದ ಕೆಲ ಭಾಗದಲ್ಲಿ ನಡೆದ ಕೊಳ್ಳೆ, ಸುಲಿಗೆ ಮೊದಲಾದವುಗಳು ಇದೀಗ ನಿಂತದ್ದು ಸಂತೋಷದ ಸಂಗತಿಯಾಗಿದೆ. ಗಾಂಧಿಯವರನ್ನು ಚಿತ್ಪಾವನ ಬ್ರಾಹ್ಮಣನೊಬ್ಬನು ಕೊಂದನೆಂದು ಇಡೀ ಬ್ರಾಹ್ಮಣ ಸಮಾಜವೆ ಪಾಪಿಯೆಂದು ತಿಳಿದು ಅದನ್ನು ಛಲಿಸುವ ಕ್ರಮವನ್ನು ಕೈಕೊಳ್ಳುವುದು ಯಾವ ರೀತಿಯಿಂದಲೂ ನ್ಯಾಯ್ಯವಾಗಲಾರದು. ಗಾಂಧೀಜಿಯವರ ಕೊಲೆಯು ಈ ಕಾರಣವು ಕೇವಲ ನೆಪ ಮಾತ್ರ; ಬ್ರಾಹ್ಮಣರ ವಿರುದ್ಧ ಸತ್ಯಶೋಧಕ ಚಳವಳಿಯ ಕಾಲದಿಂದ ಹಬ್ಬಿಸಿದ್ದ ದ್ವೇಷಾಗ್ನಿಯ ಪರಿಣಾಮವೇ ಈ ಅನಾಹುತವೆಂದು ಹೇಳಿದರೆ ತಪ್ಪಾಗದು. ಈ ದೃಷ್ಟಿಯಿಂದ ವಿಚಾರ ಮಾಡಿ ದ್ವೇಷಾಗ್ನಿಯನ್ನು ಆರಿಸಿ ಬಿಡಲು ಪ್ರಯತ್ನಿಸುವುದು ಸರಕಾರದ ಮತ್ತು ಸಾರ್ವಜನಿಕ ಧುರೀಣರ ಕರ್ತವ್ಯವಾಗಿದೆ. ಈ ಗಲಭೆಗಳ ಸಂಬಂಧದಲ್ಲಿ ನಿಷ್ಪಕ್ಷಪಾತ ವಿಚಾರಣೆ ನಡೆಸಬೇಕೆಂದು ಹಿಂದುಸ್ತಾನ ಸರಕಾರದವರು ಕೊಲ್ಹಾಪುರ ಮಂತ್ರಿಮಂಡಳವನ್ನು ಕಿತ್ತಿ ಹಾಕಿ ಆಡಳಿತಗಾರರ ವಶಕ್ಕೆ ಅದನ್ನು ಒಪ್ಪಿಸಿರುವರಲ್ಲದೆ ತಪಾಸಣೆಯ ಕಾರ್ಯವನ್ನೂ ಭರದಿಂದ ಸಾಗಿಸಿದ್ದಾರೆ. ಸಂತ್ರಸ್ತರಿಗೆ ಪರಿಹಾರ ಕೊಡುವ ಯೋಜನೆಯನ್ನೂ ಸರಕಾರದವರು ನಿರ್ಧರಿಸುವರೆಂದು ಆಶಿಸಬಹುದಾಗಿದೆ. ಹಿಂದುಸ್ತಾನ ಸರಕಾರದವರು ಈ ಕ್ರಮವನ್ನು ಕೈಕೊಂಡಿರುವಾಗ ನಮ್ಮ ಮುಂಬಯಿ ಸರಕಾರದವರು ಮಾತ್ರ ಈ ಬಗ್ಗೆ ವಿಶೇಷ ಕ್ರಮವನ್ನೇನೂ ಕೈಕೊಂಡಿಲ್ಲೆಂದೂ ವಿಷಾದಿಸಬೇಕಾಗಿದೆ. ಕರ್ನಾಟಕ ಪ್ರಾಂತೀಯ ಕಾಂಗ್ರೆಸ ಸಮಿತಿಯವರು ಮೊನ್ನೆ ಸಭೆ ಸೇರಿದಾಗ ಈ ಬಗೆಗೆ ವಿಚಾರ ಮಾಡಿ ಪರಿಹಾರ ಯೋಜನೆಯನ್ನು ಕೈಕೊಳ್ಳಬೇಕೆಂದು ಬಿನ್ನವಿಸಿಕೊಂಡಿರುವರು. ಮುಂಬಯಿ ಸರಕಾರದವರೂ ಇದೇ ತಾನೆ ಪ್ರಕಟನೆ ಹೊರಡಿಸಿ ಪರಿಹಾರದ ಯೋಜನೆಯನ್ನು ಸಾರಿದ್ದು ಸಂತೋಷದ ಸಂಗತಿ. ಗಲಭೆಗಳಲ್ಲಿ ಭಾಗವಹಿಸಿದವರಿಗೆ ಯೋಗ್ಯ ಶಾಸನ ಮಾಡಿ ಜನತೆಗೆಲ್ಲ ಸಂರಕ್ಷಣೆಯ ಆಶ್ವಾಸನ ಕೊಡುವದು ಸರಕಾರದ ಕರ್ತವ್ಯವೆಂದು ಬೇರೆ ಹೇಳಬೇಕಿಲ್ಲ.

ಮಹತ್ವದ ನಿರ್ಣಯಗಳು

ಹುಬ್ಬಳ್ಳಿಯಲ್ಲಿ ಸೇರಿದ್ದ ಕರ್ನಾಟಕ ಪ್ರಾಂತೀಯ ಕಾಂಗ್ರೆಸ ಸಮಿತಿಯು ಗಲಭೆಗಳ ಬಗೆಗೆ ಗೊತ್ತುವಳಿ ಸ್ವೀಕರಿಸಿದ್ದಲ್ಲದೆ ಇನ್ನೆರಡು ಮಹತ್ವದ ಗೊತ್ತುವಳಿಗಳನ್ನೂ ಸ್ವೀಕರಿಸಿದೆ. ಭಾಷಾನ್ವಯ ಪ್ರಾಂತ ರಚನೆಯ ಕ್ರಮವನ್ನು ಹಿಂದುಸ್ತಾನ ಸರಕಾರದವರು ಕೈಕೊಂಡು ಸಂಬಂಧಿಸಿದ ಪ್ರಾಂತಗಳವರು ತಮ್ಮ ತಮ್ಮ ಗಡಿಗಳನ್ನು ಪರಸ್ಪರ ವಿಚಾರವಿನಿಮಯದಿಂದ ನಿರ್ಧರಿಸಿಕೊಳ್ಳಬೇಕೆಂದು ಬಯಸಿದ ಮೇರೆಗೆ ಕರ್ನಾಟಕ ಪ್ರಾಂತೀಯ ಕಾಂಗ್ರೆಸ ಸಮಿತಿಯೂ ಗಡಿ ಸಂಧಾನ ಸಮಿತಿಯೊಂದನ್ನು ನೇಮಿಸಿರುವದು. ಇದು ಅತ್ಯಂತ ಮಹತ್ವದ್ದು. ಆಯಾ ಪ್ರಾಂತದ ಜನರು ತಮ್ಮ ತಮ್ಮ ಗಡಿಗಳನ್ನು ಪರಸ್ಪರ ವಿಚಾರವಿನಿಮಯದಿಂದ ನಿರ್ಧರಿಸಿಕೊಳ್ಳಬೇಕೆಂದು ಮಹಾತ್ಮರು ಅಭಿಪ್ರಾಯಪಡುತ್ತಿದ್ದರಲ್ಲದೆ ಕರ್ನಾಟಕಕ್ಕೆ ಅವರು ಕೊಟ್ಟ ಕೊನೆಯ ಸಂದೇಶವು ಇದೇ ಆಗಿತ್ತೆಂದು ಹೇಳಬಹುದು. ಇದನ್ನನುಲಕ್ಷಿಸಿ ಪ್ರಾಂತೀಯ ಕಾಂಗ್ರೆಸ ಸಮಿತಿಯವರು ಸಂಧಾನ ಸಮಿತಿಯನ್ನು ನೇಮಿಸಿದ್ದು ಸ್ತುತ್ಯವಾಗಿದೆ. ಗಡಿಗಳನ್ನು ನಿರ್ಧರಿಸುವಾಗ ಕೆಲವೊಂದು ತಪ್ಪುತಡಿಗಳಾಗಬಹುದು: ಒಂದು ಪ್ರಾಂತದಲ್ಲಿ ಸೇರಬೇಕಾಗಿದ್ದ ಭಾಗವು ಎರಡನೇ ಪ್ರಾಂತದಲ್ಲಿಯೂ ಕೂಡಬಹುದು. ಇದರಿಂದ ಯಾರೂ ತಲೆಕೆಡಿಸಿಕೊಳ್ಳದೆ ಪರಸ್ಪರ ಸೌಹಾರ್ದ ಭಾವದಿಂದ ಇರಬೇಕು. ತಮ್ಮ ಹಕ್ಕುಬಾಧ್ಯತೆಗಳನ್ನು ಎರಡನೇ ಪ್ರಾಂತದವರಿಗೆ ತಿಳಿಸಿಕೊಟ್ಟು ಅವರ ಮನವೊಲಿಸಿ ಕಾರ್ಯವನ್ನು ಸಾಧಿಸಿಕೊಳ್ಳಬೇಕು. ಇದರಿಂದಲೆ ದೇಶದಲ್ಲಿ ನೆಮ್ಮದಿ ಉಳಿಯುವದು. ಇದನ್ನು ನೆನೆದು ಆಯಾ ಪ್ರಾಂತದವರು ಗಡಿಗಳನ್ನು ನಿರ್ಣಯಿಸುವಾಗ ತಕ್ಕ ಧೋರಣವನ್ನನುಸರಿಸಬೇಕು. ಹೈದ್ರಾಬಾದ ಗಡಿಯಲ್ಲಿದ್ದ ಜನರಿಗೆ ಸೈನ್ಯ ಶಿಕ್ಷಣವನ್ನು ಕೊಟ್ಟು ಅವರಿಗೆ ಶಸ್ತ್ರಾಸ್ತ್ರಗಳನ್ನು ಪೂರಯಿಸಬೇಕೆಂದು ಕೇಳಿಕೊಳ್ಳುವ ಮತ್ತೊಂದು ಗೊತ್ತುವಳಿಯನ್ನು ಕಾಂಗ್ರೆಸ ಸಮಿತಿಯು ಸ್ವೀಕರಿಸಿದೆ. ಹೈದ್ರಾಬಾದ ಗಡಿಯಲ್ಲಿ ನಡೆವ ಅನಾಹುತಗಳನ್ನು ನೋಡಿದರೆ ಅಲ್ಲಿನ ಜನರು ಸ್ವಸಂರಕ್ಷಣೆಗೆ ಸಿದ್ಧರಾಗುವದು ಅತ್ಯವಶ್ಯವೆಂದು ಹೇಳಬೇಕಾಗುವದು. ಆ ಬಗೆಗೆ ಅವರನ್ನು ತರಬೇತುಗೊಳಿಸುವದು ಸರಕಾರದ ಕರ್ತವ್ಯ. ಇತ್ತ ಅವರು ಗಮನಿಸುವರೆಂದು ನಂಬುತ್ತೇವೆ.

ಗ್ರಾಮೋದ್ಯೋಗಗಳು

ಹಿಂದುಸ್ತಾನದ ಮುಖ್ಯ ಮಂತ್ರಿಗಳಾದ ಪಂಡಿತ ಜವಾಹರಲಾಲರು ಹಿಂದುಸ್ತಾನ ವಣಿಕ ಸಂಘದ ಸಭೆಯಲ್ಲಿ ಭಾಷಣ ಮಾಡುತ್ತ ಉದ್ಯೋಗಗಳ ಧೋರಣದ ಬಗ್ಗೆ ಮಹತ್ವದ ಮಾತುಗಳನ್ನು ಹೇಳಿದರು. ಹಿಂದುಸ್ತಾನವು ಅಮೇರಿಕೆಯಿಂದಾಗಲಿ ಬೇರೆ ದೇಶಗಳಿಂದಾಗಲಿ ಅನೇಕ ಸರಕುಗಳನ್ನು ತರಿಸುತ್ತಿರುವಾಗಲೆ ದೊಡ್ಡ ಪ್ರಮಾಣದಲ್ಲಿ ಗ್ರಾಮೋದ್ಯೋಗಗಳಿಗೆ ಎಲ್ಲ ಬಗೆಯ ಪ್ರೋತ್ಸಾಹನೆ ಕೊಡಲಾಗುವದೆಂದು ಅವರು ಸಾರಿದರು. ಸದ್ಯದ ಅಂತರ್ದೇಶೀಯ ಪರಿಸ್ಥಿತಿಯನ್ನು ಲಕ್ಷಿಸಿದರೆ ನಮ್ಮ ಗ್ರಾಮೋದ್ಯೋಗಗಳತ್ತ ಸರಕಾರದವರು ಮತ್ತು ಉದ್ಯಮದಾರರು ಹೆಚ್ಚು ಗಮನಕೊಡುವದು ಅತ್ಯವಶ್ಯವೆಂದೆನಿಸದಿರಲಾರದು. ಜನತೆಗೆ ಬೇಕಾದ ಸರಕುಗಳನ್ನು ಪೂರಯಿಸುವ ದೃಷ್ಟಿಯಿಂದ ಇಷ್ಟೆ ಅಲ್ಲ; ಇಲ್ಲಿನ ಬಡತನ ಮತ್ತು ನಿರುದ್ಯೋಗತೆಯನ್ನು ಹೋಗಲಾಡಿಸುವ ದೃಷ್ಟಿಯಿಂದಲೂ ಗ್ರಾಮೋದ್ಯೋಗಗಳನ್ನು ಅಭಿವೃದ್ಧಿಗೊಳಿಸುವದು ಅತ್ಯವಶ್ಯವಾಗಿದೆ. ಹಿಂದುಸ್ತಾನದ ವಿಭಜನೆಯ ನಂತರ ನಿರಾಶ್ರಿತರ ಪುನರ್ನಿವೇಶನ ಮತ್ತು ಪರಿಹಾರದ ದೃಷ್ಟಿಯಿಂದಲೂ ಗ್ರಾಮೋದ್ಯೋಗಗಳಿಗೆ ಪ್ರೋತ್ಸಾಹನೆ ಕೊಟ್ಟು ಅವುಗಳನ್ನಭಿವೃದ್ಧಿಪಡಿಸುವ ಕಾರ್ಯಕ್ರಮ ಯಶಸ್ವಿಯಾಗಬೇಕಾದರೆ ಗ್ರಾಮೋದ್ಯೋಗಗಳಿಗೆ ಶರಣು ಹೊಗುವದು ಅತ್ಯವಶ್ಯವಾಗಿದೆ. ಈ ಮಹತ್ವದ ಸಾಮಾಜಿಕ ಕಾರ್ಯವನ್ನು ಮಾಡುವದಕ್ಕಾಗಿ ಜನರನ್ನು ಒತ್ತಾಯದಿಂದ ಸಂಗ್ರಹಿಸುವದು ಇಷ್ಟವೆಂದು ಮುಖ್ಯ ಮಂತ್ರಿಗಳು ಹೇಳಿದ್ದಾರೆ. ಹಿಂದುಸ್ತಾನದಲ್ಲಿ ಜನಬಲ ಬೇಕಾದಷ್ಟಿದ್ದರೂ ಯೋಗ್ಯರೀತಿಯಿಂದ ಅದರ ಸಂಘಟನೆಯಾಗಿ ಗ್ರಾಮೋದ್ಯೋಗಗಳಲ್ಲಿ ಅದರ ಉಪಯೋಗ ಆಗದೆ ಇದ್ದುದರಿಂದ ಅದೆಲ್ಲ ನಿರುಪಯುಕ್ತವಾಗಹತ್ತಿದೆ. ಇದನ್ನು ನೆನೆದು ಮುಖ್ಯಮಂತ್ರಿಗಳು ಒತ್ತಾಯದಿಂದ ಈ ಜನಬಲದ ಉಪಯೋಗ ಮಾಡಿಕೊಳ್ಳಬೇಕೆಂದು ಸೂಚಿಸಿದ್ದು ಉಚಿತವಾಗಿದೆ. ಸರಕಾರದವರು ಆದಷ್ಟು ಬೇಗ ಈ ಕ್ರಮವನ್ನು ಕೈಕೊಳ್ಳುವದು ಇಷ್ಟವಾಗಿದೆ. ಸಾರ್ವಜನಿಕರ ಬೆಂಬಲ ಇವರಿಗೆ ದೊರೆಯುವದೆಂಬುದನ್ನು ಬೇರೆ ಹೇಳಬೇಕಿಲ್ಲ. ಹಿಂದುಸ್ತಾನದ ಭೂಸಂಪತ್ತು ಬೇಕಾದಷ್ಟಿದ್ದು ಜನಬಲವನ್ನು ಪಡೆದು ಅದರ ಯೋಗ್ಯ ಪ್ರಯೋಜನ ಮಾಡಿಕೊಂಡದ್ದಾದರೆ ಹಿಂದುಸ್ತಾನ ತನ್ನ ಸರಕುಗಳಿಗಾಗಿ ಬೇರೆ ಯಾವ ದೇಶವನ್ನೂ ಅವಲಂಬಿಸಬೇಕಾಗಿಲ್ಲೆಂಬುದು ನಿರ್ವಿವಾದವಾಗಿದೆ.

ಕಮ್ಯುನಿಷ್ಟರು

ಪಶ್ಚಿಮ ಬಂಗಾಲ ಪ್ರಾಂತದಲ್ಲಿ ಕಮ್ಯುನಿಷ್ಟರು ನಡೆಸಿದ ಚಟುವಟಿಕೆಗಳನ್ನು ನೋಡಿದರೆ ಆ ಪಕ್ಷದ ಮೇಲೆ ಆ ಸರಕಾರದವರು ಹಾಕಿದ ನಿರ್ಬಂಧಗಳು ನ್ಯಾಯ್ಯ ಮತ್ತು ಅವಶ್ಯವೆಂದು ಹೇಳದೆ ಗತ್ಯಂತರವಿಲ್ಲ. ದೇಶದಲ್ಲಿ ಯಾವದೇ ಬಗೆಯ ಅರಾಜಕತೆಯುಂಟಾಗದೆ ಹಿಂಸೆಗೆ ಅವಕಾಶ ಸಿಕ್ಕದೆ ಆಡಳಿತವನ್ನು ನಡೆಸುವದು ಸರಕಾರದ ಮುಖ್ಯ ಕರ್ತವ್ಯ. ಇವುಗಳಿಗೆ ಲೋಪ ತರಲು ಪ್ರಯತ್ನಿಸುತ್ತ ಇಲ್ಲವೆ ಹೊಂಚು ಹಾಕುವ ಪಕ್ಷವನ್ನಾಗಲಿ ವ್ಯಕ್ತಿಗಳನ್ನಾಗಲಿ ನಿರ್ಬಂಧಿಸುವದು ಕ್ರಮಪ್ರಾಪ್ತ. ಬಂಗಾಲ ಸರಕಾರದ ಗೃಹಮಂತ್ರಿಗಳು ಕಮ್ಯುನಿಷ್ಟ ಸಂಘವನ್ನು ಅಕ್ರಮಗೊಳಿಸಬೇಕಾಗಿ ಬಂದ ಕಾರಣಗಳನ್ನು ಹೇಳುವಾಗ ಸಾರ್ವಜನಿಕ ಶಾಂತಿ ಸುವ್ಯವಸ್ಥೆಗೆ ಭಂಗವನ್ನುಂಟುಮಾಡುವ ಚಟುವಟಿಕೆಗಳನ್ನು ಅವರು ನಡೆಸಿದ್ದರೆಂದು ಸ್ಪಷ್ಟಪಡಿಸಿದ್ದಾರೆ. ತಮ್ಮ ರಾಜಕೀಯ ಉದ್ದೇಶವನ್ನು ಸಾಧಿಸಲು ಅವರು ಪ್ರಾಂತದಲ್ಲಿಯ ಆಹಾರ ಕೊರತೆಯ ಪರಿಸ್ಥಿತಿಯ ದುರ್ಲಾಭ ಪಡೆದದ್ದಲ್ಲದೆ ಕೂಲಿಕಾರರ ಸಂಕಷ್ಟಗಳ ಪ್ರಯೋಜನವನ್ನೂ ಪಡೆದರು. ಈ ಧ್ಯೇಯ ಸಾಧನೆಗಾಗಿ ಪ್ರಾಂತದಲ್ಲೆಲ್ಲ ಹಿಂಸಾತ್ಮಕ ಮಾರ್ಗದಿಂದ ಅರಾಜಕತೆಯನ್ನುಂಟುಮಾಡುವ ಪ್ರಯತ್ನವನ್ನು ನಡೆಸಿರುವರೆಂದು ಮಂತ್ರಿಗಳ ಭಾಷಣದಿಂದ ಗೊತ್ತಾಗುವದು. ಜನರಿಗೆ ಶಸ್ತ್ರಾಸ್ತ್ರಗಳನ್ನು ಪೂರಯಿಸಿ ಅವರದೊಂದು ಸೈನ್ಯ ಕಟ್ಟಬೇಕೆಂದು ಕಲಕತ್ತೆಯ ಅಧಿವೇಶನದಲ್ಲಿ ಕಮ್ಯುನಿಷ್ಟರು ಮಹತ್ವದ ಗೊತ್ತುವಳಿಯನ್ನು ಸ್ವೀಕರಿಸಿ ಬಂಗಾಲ ಪ್ರಾಂತವನ್ನು ಮುಖ್ಯ ಠಾಣೆಯನ್ನಾಗಿಟ್ಟುಕೊಂಡು ಇಡೀ ಭಾರತದಲ್ಲಿ ತಮ್ಮ ಚಟುವಟಿಕೆಗಳನ್ನು ನಡೆಸುವ ನಿರ್ಧಾರ ಕೈಕೊಂಡದ್ದರಿಂದ ಆ ಸರಕಾರವು ಮುಂದಾಗಿ ಕಮ್ಯುನಿಷ್ಟ ಸಂಸ್ಥೆಯನ್ನು ಅಕ್ರಮಗೊಳಿಸಿದ್ದು ನ್ಯಾಯ್ಯವೆ. ಕಮ್ಯುನಿಷ್ಟರು ಕೂಲಿಕಾರರ ಹಿತೈಷಿಗಳೆಂದು ಹೇಳಿಕೊಂಡು ಅವರ ನಾಯಕತ್ವವನ್ನು ವಹಿಸಿದ್ದುಂಟು. ಆದರೆ ಅವರ ಮಾರ್ಗದಿಂದ ಕೂಲಿಕಾರರಿಗೆ ಸಾಧಿಸಿದ ಲಾಭವನ್ನು ನೆನೆದರೆ ಅದು ಪ್ರಯೋಜನಕರವಿಲ್ಲೆಂದು ಹೇಳಬೇಕಾಗುವದು. ಸದ್ಯದ ಪರಿಸ್ಥಿತಿಯಲ್ಲಿ ಕೂಲಿಕಾರರ ಮನಸ್ಸಿನಲ್ಲಿ ಇಲ್ಲದ್ದೊಂದು ತುಂಬಿ ಉತ್ಪಾದನೆಗೆ ವ್ಯತ್ಯಯವುಂಟಾಗುವಂಥ ಯೋಜನೆಗಳನ್ನು ಕೈಕೊಳ್ಳುವದನ್ನು ಯಾವ ಸರಕಾರವೂ ಸಹಿಸದು. ರಾಜಕೀಯ ಧ್ಯೇಯಸಾಧನೆಗೆ ಇದು ತಕ್ಕ ಮಾರ್ಗವಲ್ಲ. ಬಂಗಾಲ ಸರಕಾರದ ಈ ಧುರೀಣತ್ವವನ್ನು ಉಳಿದ ಸರಕಾರಗಳೂ ಅನುಸರಿಸಬೇಕಾಗುವದು ಅನಿವಾರ್ಯವಾಗುವದು.

ಕೊಲ್ಹಾಪುರ ಸಂಸ್ಥಾನ

ಕೊಲ್ಹಾಪುರ ಸಂಸ್ಥಾನವು ಭಾರತ ಒಕ್ಕೂಟದಲ್ಲಿ ಒಂದು ಸಂಸ್ಥಾನ. ಸಮೀಪದ ದಕ್ಷಿಣಸಂಸ್ಥಾನಗಳೆಲ್ಲ ಮುಂಬಯಿ ಪ್ರಾಂತದಲ್ಲಿ ವಿಲೀನಹೊಂದಿದ್ದರೂ ಕೊಲ್ಹಾಪುರವು ಸ್ವತಂತ್ರವಾಗುಳಿದು ಆಡಳಿತವನ್ನು ನಡೆಸುತಿದೆ. ಮಹಾತ್ಮರ ಮರಣದ ನಂತರ ಆ ಸಂಸ್ಥಾನದಲ್ಲಿ ಜರುಗಿದ ಕೊಳ್ಳೆ ಸುಲಿಗೆ ಮೊದಲಾದವುಗಳಿಗಾಗಿ ಹಿಂದುಸ್ತಾನ ಸರಕಾರವು ಅಲ್ಲಿನ ಮಂತ್ರಿಮಂಡಳವನ್ನು ರದ್ದುಪಡಿಸಿ ಸ್ವತಂತ್ರ ಆಡಳಿತಾಧಿಕಾರಿಯ ಮೂಲಕ ಆಡಳಿತವನ್ನು ಸಾಗಿಸಿರುವದು. ಗಲಭೆಗಳಲ್ಲಿ ಅಪರಾಧಿಗಳಾದವರನ್ನು ಹುಡುಕಿ ತಕ್ಕ ಕ್ರಮ ತೆಗೆದುಕೊಳ್ಳಲು ಅವಕಾಶವುಂಟಾಗಲು ಸರಕಾರದವರು ಹೀಗೆ ಮಾಡಿದ್ದುಂಟು. ತಪಾಸಣೆಯ ಕಾರ್ಯ ಈಗಾಗಲೆ ಪ್ರಾರಂಭವಾಗಿದ್ದು ಹಿಂದಿನ ಮಂತ್ರಿಗಳು ಮೊದಲಾದವರನ್ನು ಸೆರೆಹಿಡಿಯುವದೂ ನಡೆದಿದೆ. ಸರಕಾರದವರ ಈ ಧೋರಣವನ್ನು ಪ್ರತಿಭಟಿಸಿ ಹಿಂದಿನ ಮಂತ್ರಿ ಶ್ರೀ ಮಾಧವರಾವ ಬಾಗಲರು ಭಾಷಣ ಮಾಡಿದ್ದಲ್ಲದೆ ದಿಲ್ಲಿಗೆ ಶಿಷ್ಟಮಂಡಳವನ್ನೂ ಒಯ್ಯಲಿದ್ದರು ಆದರೆ ಅದೇಕೋ ಅವರು ಮುಂಬಯಿಯಿಂದಲೇ ಮರಳಿರುವದರಲ್ಲದೆ ಮೊದಲಿನ ಪ್ರತಿಭಟನಾ ಧೋರಣವನ್ನೂ ಬಿಟ್ಟುಗೊಟ್ಟಿರುವರೆಂದು ತೋರುತ್ತದೆ. ಹಿಂದುಸ್ತಾನ ಸರಕಾರದವರು ಕೊಲ್ಹಾಪುರದಲ್ಲಿ ಆಡಳಿತಗಾರರನ್ನು ನಿಯಮಿಸಿದ್ದು ನಿರಾಶಾದಾಯಕವಾಗಿದ್ದರೂ ಜನರು ಮಾತ್ರ ಯಾವದೇ ಬಗೆಯ ಆಂದೋಲನಕ್ಕೆ ಕೈಹಾಕದೆ ಆಡಳಿತಗಾರರಿಗೆ ಸಂಪೂರ್ಣ ಸಹಾಯಮಾಡಬೇಕೆಂದು ಅವರು ಈಗ ಹೇಳುತ್ತಿರುವರು ಸಂಸ್ಥಾನಪ್ರಜೆಗಳು ಮುಂಬರುವ ಚುನಾವಣೆಗಳ ಬಗ್ಗೆ ಸಿದ್ಧತೆಯನ್ನು ಮಾಡಬೇಕೆಂದೂ ಅವರು ಹೇಳಿರುವರು. ಶ್ರೀ ಮಾಧವರಾಯರು ಈ ಬಗೆಯಾಗಿ ತಮ್ಮ ಧೋರಣವನ್ನು ಬದಲಿಸಿದ್ದು ಸಂತೋಷದ ಸಂಗತಿ. ಅವರ ಪಕ್ಷದವರೂ ಇದೇ ಧೋರಣವನ್ನು ವಹಿಸಿದ್ದಾದರೆ ಸಂಸ್ಥಾನದಲ್ಲಿ ಇಂದು ತೋರುವ ಒಂದು ಬಗೆಯ ನಿರಾಶಾದಾಯಕ ಪರಿಸ್ಥಿತಿ ಬೇಗ ಮಾಯವಾಗಬಹುದು. ಕೊಲ್ಹಾಪುರದಲ್ಲಿ ಪ್ರಜಾ ಪರಿಷತ್ತಿನಲ್ಲಿಯೆ ಇಬ್ಬಣವಾಗಿದ್ದುದರಿಂದ ಆಡಳಿತ ಸರಾಗವಾಗಿ ಸಾಗಲು ವ್ಯತ್ಯಯವುಂಟಾಗಿದೆ. ಕೊಲ್ಹಾಪುರಸಂಸ್ಥಾನ ಉಳಿದ ದಕ್ಷಿಣ ಸಂಸ್ಥಾನಗಳಂತೆ ವಿಲೀನ ಹೊಂದಿಬಿಟ್ಟಿದ್ದರೆ ಒಳಿತಾಗುತ್ತಿತ್ತು. ಆದರೆ ಅಲ್ಲಿ ಈ ವರೆಗೆ ಅಧಿಕಾರದಲ್ಲಿದ್ದವರು ಇದಕ್ಕೆ ವಿರುದ್ಧವಿದ್ದುದರಿಂದ ಇದಾಗಲಿಲ್ಲ. ಆದರೂ ಈ ಸಂಬಂಧದಲ್ಲಿ ಜನಮತವನ್ನು ತಿಳಿದುಕೊಳ್ಳುವದು ಅವಶ್ಯ. ಸಂಸ್ಥಾನ ಸ್ವತಂತ್ರವಾಗಿಯೆ ಉಳಿಯುವುದಾದರೆ ಅಲ್ಲಿನ ಅಲ್ಪಸಂಖ್ಯಾತರಿಗೆ ಯೋಗ್ಯ ಸಂರಕ್ಷಣೆ ಸಿಕ್ಕಲಿಕ್ಕೆ ಬೇಕು. ಗಾಂಧೀಜಿ ಮರಣಾನಂತರ ಸಂಭವಿಸಿದಂಥ ಘಟನೆಗಳ ಪುನರಾವೃತ್ತಿಯಾಗದಂತೆ ಆಶ್ವಾಸನ ದೊರೆಯತಕ್ಕದ್ದು. ಕೊಲ್ಹಾಪುರ ಸಂಸ್ಥಾನ ತನ್ನ ಭವಿಷ್ಯವನ್ನು ಬೇಗ ನಿರ್ಧರಿಸಿಕೊಂಡಷ್ಟು ಇಷ್ಟ.

ಸೊಂಡೂರು

ಸೊಂಡೂರು ಇನ್ನೂ ಮದ್ರಾಸದಲ್ಲಿ ಸೇರದೆ ಸ್ವತಂತ್ರವಾಗಿ ಉಳಿಯಲಬಯಸಿದೆ. ಸಂಸ್ಥಾನ ಖಾತೆಯ ಕಾರ್ಯದರ್ಶಿಗಳಾದ ಶ್ರೀ ಮೆನನರು ಹೊಸದಿಲ್ಲಿಯಲ್ಲಿ ಹಿಂದುಸ್ತಾನದಲ್ಲಿಯ ಸಂಸ್ಥಾನಗಳ ಬಗೆಗೆ ಹೇಳುವಾಗ ಸೊಂಡೂರು ಸಂಸ್ಥಾನವೂ ಬೇಗ ಮದ್ರಾಸದಲ್ಲಿ ಸೇರುವದು, ಆದರೆ ತಾರೀಖು ಇನ್ನೂ ನಿಶ್ಚಿತವಾಗಿಲ್ಲ ಎಂದು ಹೇಳಿದ್ದುಂಟು. ಸೊಂಡೂರು ಸಂಸ್ಥಾನದ ಪ್ರಜಾಧಿಕಾರಿಗಳು ಈ ಹೇಳಿಕೆಯನ್ನು ವಿರೋಧಿಸಿ ಸೊಂಡೂರು ಮದ್ರಾಸದಲ್ಲಿ ವಿಲೀನವಾಗುವದಿಲ್ಲ ಸ್ವತಂತ್ರವಾಗಿಯೆ ಉಳಿಯುವದೆಂದು ಸಾರಿರುವರು. ಸೊಂಡೂರಿನಂಥ ಚಿಕ್ಕ ಸಂಸ್ಥಾನವು ಸ್ವತಂತ್ರವಾಗಿ ಉಳಿದು ಸದ್ಯದ ಪರಿಸ್ಥಿತಿಯಲ್ಲಿ ಅದೆಂತು ಆಡಳಿತವನ್ನು ಸಾಗಿಸುವದೊ ತಿಳಿಯದು. ಭಾರವಾದ ಆಡಳಿತ ವೆಚ್ಚವನ್ನು ಸಹಿಸದೆ ಪ್ರಜೆಗಳ ಸದ್ಯದ ಬೇಡಿಕೆಗಳನ್ನು ಪೂರೈಸಿ ಆವಶ್ಯಕ ಸುಧಾರಣೆಗಳನ್ನು ಮಾಡಲು ಸಮರ್ಥವಾಗದೆ ಸೊಂಡೂರಿಗಿಂತ ದೊಡ್ಡವಾದ ಸಂಸ್ಥಾನಗಳೆ ಪ್ರಾಂತಗಳಲ್ಲಿ ವಿಲೀನ ಹೊಂದಿರುವಾಗ ಸೊಂಡೂರು ಸ್ವತಂತ್ರ ಉಳಿದು ಆಡಳಿತ ಸಾಗಿಸುವುದಾಗಿ ಸಾರುವದು ಧಾರ್ಷ್ಟ್ಯದ ಮಾತು. ಸೊಂಡೂರು ಸಂಸ್ಥಾನ ಸರಕಾರ ಮಾತ್ರವೆ ಈ ಬಗೆಯ ನಿರ್ಧಾರವನ್ನು ಕೈಕೊಳ್ಳಲಾರದು. ಪ್ರಜೆಗಳ ಅಭಿಪ್ರಾಯವನ್ನೂ ಕೇಳಿಕೊಳ್ಳುವದು ಅತ್ಯವಶ್ಯವಾಗಿದೆ. ರಾಜ ಪ್ರಜೆಗಳಿಬ್ಬರೂ ಸದ್ಯದಂತೆಯೆ ಸ್ವತಂತ್ರ ಉಳಿದು ಸಂಸ್ಥಾನಾಡಳಿತವನ್ನು ಸರಾಗವಾಗಿ ಸಾಗಿಸಿಕೊಂಡು ಹೋಗುವುದಾಗಿ ನಿರ್ಧರಿಸಿದ್ದಾದರೆ ಹಾಗೆ ಮಾಡಬಹುದು. ಆದರೆ ಪ್ರಜೆಗಳ ಅಭಿಪ್ರಾಯವನ್ನು ಕೇಳದೆ ರಾಜರು ಕೆಲ ಅಹಂಮನ್ಯರ ಸ್ವಾರ್ಥಿ ಮಾತುಗಳಿಗೆ ಬಲಿಬಿದ್ದು ಯಾವದೊಂದು ನಿರ್ಧಾರವನ್ನು ಕೈಕೊಂಡರೆ ಅದೆಂದಿಗೂ ಯಶಸ್ವಿಯಾಗದು. ಅದರಿಂದ ರಾಜರಿಗಾಗಲಿ ಪ್ರಜೆಗಳಿಗಾಗಲಿ ಹಿತವಾಗದು. ಇದನ್ನು ನೆನೆದು ಸೊಂಡೂರು ಸಂಸ್ಥಾನ ಸರಕಾರದವರು ತಮ್ಮ ಧೋರಣವನ್ನು ಗೊತ್ತುಪಡಿಸಬೇಕೆಂದು ಸೂಚಿಸುತ್ತೇವೆ.

ಕಾಶ್ಮೀರ ಸಮಸ್ಯೆ

ಕಾಶ್ಮೀರ ಸಮಸ್ಯೆ ಇನ್ನೂ ಬಗೆಹರಿಯಲೊಲ್ಲದು. ಭದ್ರತಾ ಮಂಡಳದಲ್ಲಿ ನ್ಯಾಯ ದೊರೆಯಬಹುದೆಂದು ಬಯಸಿದವರೆಲ್ಲ ಈಗ ನಿರಾಸೆಹೊಂದುತ್ತಿರುವರು. ಆ ಮಂಡಳದವರು ಈ ಪ್ರಶ್ನೆಯನ್ನು ಮುಂದಕ್ಕೆ ಹಾಕುತ್ತಿರುವರು. ಇನ್ನೇನು ಸಮಸ್ಯೆ ಬಗೆಹರಿಯುವದು, ಸೂಕ್ತವಾದ ನಿರ್ಣಯವನ್ನು ಭದ್ರತಾಮಂಡಳವು ಕೈಕೊಳ್ಳುವುದು ಎಂದು ಸುದ್ದಿ ಬರುವಷ್ಟರಲ್ಲಿಯೇ ಈ ಸಮಸ್ಯೆಯಲ್ಲಿ ಅನಿರೀಕ್ಷಿತ ತೊಡಕುಗಳೆದ್ದಿವೆ ಒಡಂಬಡಿಕೆಯ ಆಸೆಯಿಲ್ಲ ಎಂಬ ಸುದ್ದಿ ಬರುತ್ತಿದೆ. ಈ ರೀತಿ ಈ ಪ್ರಶ್ನೆ ಸನ್ನಿಧಿಗೆ ಬೀಳಹತ್ತಿದೆ. ಕಲಾತ ಸಂಸ್ಥಾನವೀಗ ಪಾಕಿಸ್ತಾನವನ್ನು ಸೇರಿದ್ದರಿಂದ ಪಾಕಿಸ್ತಾನ ಸರಕಾರದವರು ಇನ್ನಷ್ಟು ಬಿಗಿಯಾದ ಧೋರಣವನ್ನು ವಹಿಸಬಹುದೆಂದು ತೋರುತ್ತದೆ ಕಾಶ್ಮೀರವನ್ನು ವಿಭಜಿಸಬೇಕೆಂದು ಹಿಂದೊಮ್ಮೆ ಲಾರ್ಡ ಮೌಂಟಬ್ಯಾಟನ್ನರು ಪ್ರತಿಪಾದಿಸಿದ್ದನ್ನೆ ಈಗ ಹಲವರು ಸೂಚಿಸುವರೆಂದು ತರ್ಕಿಸಲಾಗುತ್ತದೆ. ಈ ಪ್ರಶ್ನೆಯನ್ನು ಒಮ್ಮೆ ಚರ್ಚೆಗೆ ತೆಗೆದುಕೊಂಡಾಗ ಅದರ ಇತ್ಯರ್ಥಮಾಡದೆ ಇರುವದರಿಂದ ಮತ್ತು ಕಾಲಕಾಲಕ್ಕೆ ಅಧ್ಯಕ್ಷರು ಬದಲಾಗುವುದರಿಂದ ಹಿಂದಿನ ಅಧ್ಯಕ್ಷರು ಸೂಚಿಸಿದ್ದನ್ನು ಮುಂದಿನ ಅಧ್ಯಕ್ಷರು ಗ್ರಹಿಸದೆ ಹೊಸ ಸೂಚನೆಯನ್ನೆ ಮಾಡಿ ಮತ್ತೆ ಹೊಸ ಹೊಸ ಪ್ರಶ್ನೆಗಳನ್ನು ಉದ್ಭವಿಸುತ್ತಿರುವರು. ಹೀಗಾಗಿ ಯಾವದೂ ಬಗೆಹರಿಯದೆ ಕಾಲವಿಲಂಬವಾಗಹತ್ತಿರುವದು ಇದರಿಂದ ಕಾಶ್ಮೀರದ ಜನತೆಗೆ ಇಷ್ಟೇ ಅಲ್ಲ ಹಿಂದುಸ್ತಾನ ಮತ್ತು ಪಾಕಿಸ್ತಾನಗಳಲ್ಲಿಯ ಜನರಿಗೂ ಮನಃಶಾಂತಿ ಇಲ್ಲದಂತಾಗಿದೆ. ಭದ್ರತಾ ಮಂಡಳಕ್ಕೆ ಹೋದುದೇ ತಪ್ಪು ಅಲ್ಲಿ ನ್ಯಾಯವೇನೂ ದೊರೆಯುವದಿಲ್ಲೆಂದು ಮುಂತಾಗಿ ಗಾಂಧೀಜಿ ಹೇಳಿದ್ದು ಯಥೋಚಿತವಾಗಿತ್ತೆಂದು ಸದ್ಯದ ಅನುಭವದಿಂದ ಒಪ್ಪುವ ಪ್ರಸಂಗ ಬಂದಿದೆ. ಭದ್ರತಾ ಮಂಡಳದವರು ಇಂಥ ಮಹತ್ವದ ಪ್ರಶ್ನೆಯಲ್ಲಿ ಈ ಬಗೆಯ ಕಾಲವಿಲಂಬ ಧೋರಣವನ್ನು ವಹಿಸದೆ ಆದಷ್ಟು ಬೇಗ ಅದರ ಇತ್ಯರ್ಥಮಾಡಿ ತನ್ನ ಪ್ರತಿಷ್ಠೆಯನ್ನು ಕಾಯ್ದುಕೊಳ್ಳುವದು ಮುಖ್ಯವಾಗಿದೆ.

ಅಂತರ್ದೇಶೀಯ

ಹವಾನಾ ಪರಿಷತ್ತು

ಹವಾನಾದಲ್ಲಿ ಕಳೆದ ನಾಲ್ಕು ತಿಂಗಳಿಂದ ಸಭೆ ಸೇರಿದ ಅಂತರಾಷ್ಟ್ರೀಯ ವ್ಯಾಪಾರ ಪರಿಷತ್ತು ಅಂತರಾಷ್ಟ್ರೀಯ ವ್ಯಾಪಾರ ಸನದನ್ನು ಸಿದ್ಧಪಡಿಸಿದೆ. ಜಗತ್ತಿನಲ್ಲಿ ಎಲ್ಲೆಡೆ ಜೀವನದ ಮಟ್ಟವು ಹೆಚ್ಚುಗುವಂತೆ ಮತ್ತು ಜಗತ್ತಿನ ಅಭ್ಯುದಯ ಸಾಗುವಂತೆ ಮಾಡುವುದೇ ಸನದಿನ ಉದ್ದೇಶ. ಈ ಸನದಿಗೆ ೫೪ ರಾಷ್ಟ್ರಗಳ ಪ್ರತಿನಿಧಿಗಳು ಸಹಿಹಾಕಿದರು.

ವಿವರ

ಅಂತರಾಷ್ಟ್ರೀಯ ವ್ಯಾಪಾರ ಸಂಘವನ್ನು ನಿರ್ಮಿಸಬೇಕು. ಮತ್ತು ಅದರ ಸದಸ್ಯರು ವ್ಯಾಪಾರ ನಿರ್ಬಂಧಗಳನ್ನೂ ನಿರುದ್ಯೋಗವನ್ನೂ ಕಡಿಮೆ ಮಾಡಬೇಕು. ಎಲ್ಲೀ ಮೊದಲಾದ ನಿಯಮಗಳನ್ನು ಪಾಲಿಸಬೇಕೆಂದು ಸನದಿನಲ್ಲಿ ಹೇಳಲಾಗಿದೆ. ರಾಷ್ಟ್ರಗಳಲ್ಲಿ ಪರಸ್ಪರವಾಗಿ ವ್ಯಾಪಾರ ಪ್ರಶ್ನೆಗಳೆದ್ದರೆ ಅವುಗಳನ್ನು ಈ ಸಂಘದ ಮೂಲಕವೇ ಬಗೆಹರಿಸಿಕೊಳ್ಳಬೇಕು. ವ್ಯಾಪಾರ ಕುಂಠಿಸುವ ಅಥವಾ ಜೀವನ ಮಟ್ಟವನ್ನು ಎತ್ತರಿಸುವ ಕಾರ್ಯದಲ್ಲಿ ನ್ಯೂನತೆ(?) ತರುವ ಇಲ್ಲವೆ ಅಧಿಕ ಘರ್ಷಣೆಗಳಿಗೆ ಕಾರಣವಾಗುವ ಪ್ರವೃತ್ತಿಗಳಿಗೆ ಸನದು ತಡೆಹಾಕಿದೆ.

ಸಂಪತ್ತುಗಳ, ಆಯಾತ ನಿರ್ಯಾತಗಳ ಮೇಲಿನ ನಿರ್ಬಂಧ ಇವುಗಳ ವಿಷಯದಲ್ಲಿ ಒಮ್ಮತಕ್ಕೆ ಬರಲು ಕಷ್ಟವಾಯಿತು. ಇವೇ ಸನದಿನ ಮುಖ್ಯ ವಿಷಯಗಳು. ಒಂದು ನಾಡಿಗೆ ನಿಶ್ಚಿತ ಸುಂಕದ ಸಂಬಂಧ ಲಾಭವು ಎಲ್ಲರಿಗೂ ಸಿಗಬೇಕೆಂಬ ಸಾಮಾನ್ಯ ತತ್ವಕ್ಕೆ ಒಪ್ಪಿಗೆ ಕೊಡಲಾಗಿದೆ. ಆದರೆ ಈಗ ಎರಡು ನಾಡುಗಳ ನಡುವಣ ಮತ್ತು ರಾಷ್ಟ್ರಗಳ ಗುಂಪಿನಲ್ಲಿರುವ ನಾಡುಗಳ ನಡುವಣ (ಉದಾ: ಕಾಮನವೆಲ್ತಿನಲ್ಲಿರುವ ರಾಷ್ಟ್ರಗಳು) ಪರಸ್ಪರ ಸವಲತ್ತುಗಳನ್ನು ಒಮ್ಮೆಲೇ ತೆಗೆದುಹಾಕಬಾರದೆಂದು ಸನದಿನಲ್ಲಿ ಹೇಳಿದೆ.

ಆಯಾತ ನಿರ್ಯಾತ ನಿರ್ಬಂಧ ಪ್ರಶ್ನೆಯು ಬಹು ತೊಂದರೆ ಕೊಟ್ಟಿತು. ಹಿಂದುಳಿದ ದೇಶವು ಅಭಿವೃದ್ಧಿಗಾಗಿ ಆಯಾತ ಮಾಡಿಕೊಳ್ಳುವಂತಾಗುವುದು. ಅಂಥ ಆಯಾತದ ಸರಕುಗಳ ಸಂಖ್ಯೆ ಪ್ರಮಾಣ ಕಡಿಮೆಯಿರಬೇಕೆಂದು ಹೇಳಲಾಗಿದೆ. ಒಮ್ಮೆ ಒಂದು ದೇಶವು ತನ್ನ ಆಯಾತವನ್ನು ಕಡಿಮೆ ಮಾಡಲು ನಿಶ್ಚಯಿಸಿದರೆ ಒಂದೇ ದೇಶದಿಂದಾಗುವ ಆಯಾತದ ಸರಕುಗಳನ್ನು ಕಡಿಮೆ ಮಾಡುವುದಕ್ಕಿಂತ ಅದು ಎಲ್ಲ ದೇಶಗಳ ಆಯಾತದ ಸರಕುಗಳನ್ನೂ ಅಷ್ಟಷ್ಟು ಕಡಿಮೆ ಮಾಡಬೇಕೆಂದು ನಿರ್ಣಯಿಸಲಾಗಿದೆ; ಆದರೆ ಈ ನಿಯಮಗಳಿಂದ ಕೂಡ ತೆಗೆದುಕೊಳ್ಳುವ ವ್ಯಾಪಾರದ ಬಗೆ ಹರಿಯುವುದಿಲ್ಲ ಏಕೆಂದರೆ, ಪ್ರತಿಯೊಂದು ನಾಡೂ ತನಗೆ ಯಾವ ನಾಡಿನಿಂದ ಸಾಲ ಬರಬೇಕಾಗಿದೆಯೋ ಅಲ್ಲಿಂದ ಸರಕುಗಳನ್ನು ತರಿಸಿಕೊಳ್ಳಲು ಯತ್ನಿಸುವುದು. ಇದಕ್ಕಾಗಿ ದೇಶಗಳು ಅಂತರಾಷ್ಟ್ರೀಯ ನಿಧಿ ಸಂಗ್ರಹದ ಮೂಲಕ ವಿನಿಮಯ ನಿರ್ಬಂಧಗಳನ್ನು ಹಾಕಿ ಒಂದು ನಾಡಿನಿಂದ ಬರುವ ಆಯಾತವನ್ನು ತಡೆಯಬಹುದೆಂದು ಸರಳತ್ತು

ಕಾಶ್ಮೀರದ ಕಾವಳ

ಕಾಶ್ಮೀರದ ಕಲಹವನ್ನು ಒಡಂಬಡಿಕೆಯ ಮೂಲಕ ಇತ್ಯರ್ಥ ಪಡಿಸಬೇಕೆಂದು ಭದ್ರತಾ ಮಂಡಲದ ಅಧ್ಯಕ್ಷರಾದ ಡಾ. ಸಿಯಾಂಗರು ಪ್ರಯತ್ನಿಸುತ್ತಿದ್ದಾರೆ(?). ಅವರ ಪ್ರಯತ್ನಗಳಲ್ಲಿ ನಿಶ್ಚಯ ಹೊಂದಿದುದರಿಂದ ಸಂಧಿ ಮಾತುಕತೆಗಳು ನಡೆಯುವವದಿಲ್ಲೆಂದು ಹೇಳಲಾಗುತ್ತದೆ.

ಮಾತುಕತೆಯಲ್ಲಿ ಉಂಟಾದ ಬಿಕ್ಕಟ್ಟನ್ನು ಗಮನಿಸಿ, ರಾಯ್ಟರ ವಿಶೇಷ ಸುದ್ದಿಗಾರನು ಪ್ರಶ್ನೆಯ ಇತ್ಯರ್ಥವನ್ನು ಮಾಡಲು ಭದ್ರತಾ ಮಂಡಲಕ್ಕೆ ಇರುವಸಾಮರ್ಥ್ಯದ ಮುಂದೆ ಪ್ರಶ್ನಾರ್ಥಕ ಚಿಹ್ನವನ್ನಿಟ್ಟಿದ್ದಾರೆ.

ಪ್ರಶ್ನೆಯು ಈ ವರೆಗೆ ೨ ಘಟ್ಟಗಳನ್ನು ದಾಟಿದೆ. ಮೊದಲನೆಯ ಘಟ್ಟದಲ್ಲಿ ಕಾಶ್ಮೀರದ ಮೇಲೆ ದಂಡೆತ್ತಿ ಬಂದಿರುವ ದಾಳಿಗಾರರಿಗೆ ಪಾಕಿಸ್ತಾನವು ಸಹಾಯ ನೀಡುತ್ತಿದೆಯೆಂದು ಭಾರತವು ದೂರಿತು. ೨ನೆಯದರಲ್ಲಿ ಪಾಕಿಸ್ತಾನವು ಪ್ರತ್ಯಾರೋಪವನ್ನು ಹೊರಿಸುತ್ತ, ಕಾಶ್ಮೀರವನ್ನು ನುಂಗಲು ಭಾರತವು ಹೊಂಚುಹಾಕಿದೆಯೆಂದು ನುಡಿದು, ಈ ಪ್ರಕರಣವನ್ನು ಸ್ವಲ್ಪ ವಿಸ್ತರಿಸಿ ಜುನಾಗಡ ಪ್ರಶ್ನೆಯನ್ನು ಅದರಲ್ಲಿ ಕೂಡಿಸಿತು. ಅನಂತರ ಭದ್ರತಾಮಂಡಲದ ಅಧ್ಯಕ್ಷರು ಉಭಯ ಪಕ್ಷಗಳ ಮುಂದುಮೇಳದ ಒಂದು ನಿರ್ಣಯ ಪತ್ರವನ್ನು ಕೂಡಿಸಿದರು. ಆಗ ಭದ್ರತಾಮಂಡಲವು ತ್ರಯಸ್ಥರ ಸಮಿತಿಯನ್ನು ಭಾರತಕ್ಕೆ ಕಳುಹಿ ಸಾರ್ವಜನಿಕ ಮತಗಣನೆ ನಡೆಸಬೇಕೆಂದಿತು. ಈ ಮತಗಣನೆ ನಡೆವ ವಾತಾವರಣದ ಲಕ್ಷಣವನ್ನು ಹಿಂದೂಸ್ಥಾನ ಒಂದು ವಿಧವಾಗಿಯೂ ಪಾಕಿಸ್ತಾನ ಮತ್ತೊಂದು ವಿಧವಾಗಿಯೂ ಹೇಳಿದ್ದರಿಂದ ಅಧ್ಯಕ್ಷರು ತಮ್ಮದೊಂದು ಗೊತ್ತುವಳಿಯನ್ನು ತಂದರು. ಅದರಲ್ಲಿ ೫ ಅಂಶಗಳನ್ನು ಚಿತ್ರಿಸಲಾಗಿದೆ. ಚೀನೀ ಪ್ರತಿನಿಧಿಯು ಭದ್ರತಾಮಂಡಲದ ಪ್ರತಿನಿಧಿಗಳೊಡನೆ ಖಾಸಗಿ ಮಾತುಕತೆ ನಡೆಸಿ ಈ ಗೊತ್ತುವಳಿಯನ್ನು ರಚಿಸಿದ್ದರಿಂದ ಭದ್ರತಾಮಂಡಲದ ಬಹುಸಂಖ್ಯಾಕ ಸದಸ್ಯರ ಅಭಿಮತ ಇದೇ ರೀತಿ ಇದೆಯೆಂದು ಊಹಿಸಲಾಗಿತ್ತು. ಇದಕ್ಕೆ ಬಹುಶಃ ಭಾರತ ಒಪ್ಪುವಂತೆ ತೋರಿದಾಗ ಪಾಕಿಸ್ತಾನದ ಪ್ರತಿನಿಧಿಗಳು ಉಭಯ ಪಕ್ಷಗಳಲ್ಲೊಂದರ ಸೇನೆ ಇರುವಾಗ ಮತಗಣನೆ ನಡೆಯುವುದು ಸರಿಯಲ್ಲವೆಂದು ವಾದಿಸಿದರು.

ಹೀಗಾಗಿ ಭದ್ರತಾಮಂಡಲವು ಒಂದು ಸುತ್ತು ಸುತ್ತಿ ದಂಡಾಯಿತು. ಮೊದಲು ಪಾಕಿಸ್ತಾನದತ್ತ ಒಲೆಯುವ ಲಕ್ಷಣ ಭಾರತದತ್ತ ಕಲೆಹಾಕಿ ಈಗ ಪಿಟಿಪಿಟಿ ಸ್ವರ್ಗದಲ್ಲಿ ಕುಳಿತು ನೋಡುತ್ತಿದೆ. ಏಪ್ರಿಲ್ ತಿಂಗಳಲ್ಲಿ ಭದ್ರತಾಮಂಡಲದ ಅಧ್ಯಕ್ಷ ಪೀಠವು ಕೊಲಂಬಿಯದ ಪ್ರತಿನಿಧಿಯ ಸ್ವಾಧೀನಕ್ಕೆ ಬರುವುದು. ಈ ಬದಲಾವಣೆಯಿಂದ ಕಾವಳ ಕಳೆಯುವುದೋ ಹೇಗೆ ಎಂಬುದನ್ನು ನಿರೀಕ್ಷಿಸಿ ನೋಡಬೇಕಾಗಿದೆ.

ಕೊಡಲಾಗಿದೆ. ಅಂತರಂಗ ಕಾವನ್ನು ಹೇರುವಾಗಲೂ ಪಕ್ಷಪಾತವಾಗದಾರದೆಂದು ಹೇಳಲಾಗಿದೆ.

ಪಾಲಿಸ್ತಾನದಲ್ಲಿ ಅಮೇರಿಕ

ಪಾಲಿಸ್ತಾನದಲ್ಲಿಯ ಅರಾಜಕ ಪರಿಸ್ಥಿತಿಯನ್ನು ಅದಕ್ಕೆ ಕಾರಣಗಳಾದ ಬ್ರಿಟಿಶರ ನಿರ್ಗಮನ ಮತ್ತು ಭದ್ರತಾಮಂಡಲದ ದೋಲಾಚಲ ಧೋರಣೆ ಇವುಗಳನ್ನು ಹಿಂದೆಯೇ ವಿವರಿಸಲಾಗಿತ್ತು. ವಿಭಜನೆಯ ತೀರ್ಪಿಗೆ ಪರಸ್ಪರ ವಿರೋಧಿಗಳಾದ ರಶಿಯ ಅಮೇರಿಕಗಳ ಸಹಿ ಬಿದ್ದಿತ್ತು. ಆದರೆ ಸಂಶಯಗ್ರಸ್ತರಾದ ಟ್ರೂಮನ್ನರು ಸಾಹೇಬರಿಗೆ ರಶಿಯದ ಒಪ್ಪಿಗೆಯು ಹಿಂದೆ ನಿಗೂಢವಾಗಿರಬೇಕು, ಪಾಲಿಸ್ತಾನದಲ್ಲಿ ತಮ್ಮ ವರ್ಚಸ್ಸನ್ನು ಬೆಳೆಸುವ ತಂತ್ರವಿರಬೇಕು ಎನ್ನಿಸಿ ಆ ಮರುಗಳಿಗೆಯಲ್ಲಿ ಅರಬ ಯಹೂದಿಗಳ ತಂಟಮ್ಮಲ್ಲಿ ರಾಜಿಯಿಂದ ನಡೆಯಬೇಕೆಂಬ ಭಂಗಿಯನ್ನು ಊಡಿಕೊಡಗಿದ್ದಾರೆ.

"ಮೇ ೧೫ ರಲ್ಲಿ ಪಾಲಿಸ್ತಾನವನ್ನು ಬಿಟ್ಟು ಬ್ರಿಟಿಶರು ಹೋಗುವುದು ಖಂಡಿತ. ಸಾರ್ವಜನಿಕ ಶಾಂತತೆಯನ್ನು ಕಾಪಾಡಬಲ್ಲ ಸರಕಾರವು ಅಂದಿನಿಂದ ತಲೆಯೆತ್ತುವಂತೆ ಮಾಡುವ ಹೊಣೆ ನಮ್ಮ ಮೇಲೆ ಬಿದ್ದಿದೆ. ನಾವು ಸುಮ್ಮನಿದ್ದರೆ ಪಾಲಿಸ್ತಿನದಲ್ಲಿ ರಕ್ತದ ಕಾಲುವೆ ಹರಿಯುವುದಲ್ಲದೆ, ಜಾಗತಿಕ ಶಾಂತಿಗೆ ಧಕ್ಕೆ ಯುಂಟಾಗುವ ಸಂದರ್ಭ ಬರಬಹುದು. ಸಂ. ರಾ. ಸಂಘದಲ್ಲಿರುವ ಹೊಣೆಗಾರ ಸದಸ್ಯರು ಇಷ್ಟಕ್ಕೆಲ್ಲ ಅವಕಾಶ ಕೊಡಲಾರರೆಂದು ನಾನು ನಂಬಿದ್ದೇನೆ" ಎಂದು ಉಗ್ಗಡಿಸಿದ ಟ್ರೂಮನ್ನರ ದೃಷ್ಟಿಯ ಹಿಂದೆ ನಾಳಿನ ಚುನಾವಣೆ, ತಮ್ಮ ಜಯ ಇವುಗಳ ಕನಸು ಅಡಗಿದೆಯೆಂಬುದನ್ನು ಬಲ್ಲವರು ಮಾತ್ರ ಬಲ್ಲರು. ಪ್ರಜಾಸತ್ತೆಯು ಪಕ್ಷದವರಿಗೆ ರಶಿಯದ ಭಯಹಾಕಿ ಹುರುದುಗೊಳಿಸಿ ಸಾಮಾನ್ಯ ಜನತೆಯನ್ನು ಅದೇ ಸಾಧನದಿಂದ ಆಕರ್ಷಿಸಿ ತಾವೊಬ್ಬರು ದೊಡ್ಡ ಮುತ್ಸದ್ದಿಗಳೆನಿಸಿಕೊಂಡು ಅಧ್ಯಕ್ಷ ಪೀಠದಲ್ಲಿ ರಾರಾಜಿಸುವ ಹಂಬಲೇ ಟ್ರೂಮನ್ನರಿಂದ ಇಂಥ ಮಾತನ್ನು ಆಡಿಸಿತೆಂದು ಹೇಳಲಡ್ಡಿಯಿಲ್ಲ. ಇದೇ ಅಭಿಪ್ರಾಯಕ್ಕೆ ಪೋಷಕವಾಗಿ ಅಮೇರಿಕದ ಹಿಂದಿನ ಉಪಾಧ್ಯಕ್ಷರೂ ಈಗಲದ ಅಧ್ಯಕ್ಷ ಚುನಾವಣೆಗೆ ಸ್ವತಂತ್ರ ಹುರಿಯಾಳಾಗಿನಿಂತವರೂ ಆದ ಹೆನ್ರಿ ವ್ಯಾಲೇಸರು—"ಅಮೇರಿಕದಲ್ಲಿ ಗಂಡಾಂತರ ಪರಿಸ್ಥಿತಿಯನ್ನು ಸಾರುವ ಉದ್ದೇಶದಿಂದ ಟ್ರೂಮನ್ನರು ಪಾಶ್ಚಾತ್ಯರಾಗಿ ರಣಕಹಳೆಯನ್ನು ಊದುತ್ತಿದ್ದಾರೆ" ಎಂದೂ ಗದುಗುಹರ್ಪಿ ಗಿದೆ. ಅಮೇರಿಕದಲ್ಲಿ ಪೋಲೀಸು ರಾಜ್ಯ ಸ್ಥಾಪನೆಮಾಡಿ ಇಡಿ ಜಗತ್ತನ್ನು ತಮ್ಮ ವಶಪಡಿಸಿಕೊಳ್ಳುವುದೇ ಟ್ರೂಮನ್ನರ ಉದ್ದೇಶ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ. ರಶಿಯದ ಗಡಿಯಲ್ಲಿರುವ ಗ್ರೀಸು ತುರ್ಕಿಗಳಲ್ಲಿ ತಾವು ಕೈಹಾಕುವುದನ್ನು ಉಳಿದವರು ಸಹಿಸಿಕೊಳ್ಳಬೇಕು, ತಮ್ಮ ನಾಡಿಂದ ಸಾವಿರಾರು ಮೈಲು ದೂರದಲ್ಲಿಯ ಚೆಕೊಸ್ಲೊವೆಕಿಯ, ಇಟಲಿ ಮುಂತಾದ ನಾಡುಗಳಲ್ಲಿ ರಶಿಯ ವರ್ಚಸನ್ನು ಬೀರಿದರೆ ಅದಾಗದು ಎಂಬ ಟ್ರೂಮನ್ನರ ನೀತಿ "ಅಟಂನೀತಿ" ಯಲ್ಲದೆ ರಾಜನೀತಿಯಲ್ಲ. ಹಿಂದುಸ್ತಾನದಲ್ಲಿ ಕಾಂಗ್ರೆಸ್ ಮತ್ತು ಮುಸ್ಲಿಂ ಲೀಗುಗಳಲ್ಲಿ ಒಪ್ಪಂದವಾಗದಿದ್ದಾಗ, ವಿಭಜನೆ ಅನಿವಾರ್ಯವೆಂದು ಬ್ರಿಟಿಶರೆಂದರಲ್ಲದೆ ಅನ್ಯಮಾರ್ಗವನ್ನು ಸೂಚಿಸುವ, ಬುದ್ಧಿ ಹೇಳುವ, ವರ್ಚಸ್ಸು ಬೀರಿ ಹಿಂದುಸ್ತಾನದ ಅಖಂಡತೆಯನ್ನು ಕಾಯುವ

— ೮ ನೆಯ ಪುಟ ನೋಡಿರಿ

ಪಪಾಯಿ

ಉಷ್ಣವಲಯದಲ್ಲಿ ವಾಸಿಸುವ ಜನರಿಗೆ ಪಪಾಯಿ ಅಥವಾ ಅಕ್ಕತಂಗಿಯರ ಹಣ್ಣು ಅಪರಿಚಿತವಲ್ಲ. ರಬ್ಬರಿನಂತೆ ಅಂಟಾಗಿರುವ ಅದರ ಕಾಯಿಯ ಒಣಗಿಸಿದ ಸೊನೆಗೆ "ಪಪಾಯಿನ್" ಎಂದು ವಿಜ್ಞಾನಿಗಳು ಕರೆಯುತ್ತಾರೆ. ಇದನ್ನು ಅನೇಕ ಕೈಗಾರಿಕೆ ಮತ್ತು ಔಷಧಗಳ ತಯಾರಿಕೆ ಇವುಗಳಲ್ಲಿ ಬಳಸುತ್ತಾರೆ. ಕೃತಕ ರೇಶ್ಮೆ ಉತ್ಪತ್ತಿಯೊಡನೆ ಸೇರಿಸಿ ಅಂಟು ಹೆಣೆಯಾಗ ತಾಜಾ ರೀತಿಯ ಅಂಟು ತೆಗೆಯಲು ಇದನ್ನು ಉಪಯೋಗಿಸುತ್ತಾರೆ. ಕೆಲವು ಸೌಂದರ್ಯೋಪಕರಣಗಳನ್ನು ತಯಾರಿಸಲು ಇದು ಬೇಕು. ಚರ್ಮ ಹದಮಾಡಲೂ ಇದು ಅಗತ್ಯ. ಒಣ ಮಾಂಸವನ್ನು ಹದಗೊಳಿಸಲು ಇದು ಉಪಯುಕ್ತವಾಗಿದ್ದು ಇದಲ್ಲದೆ ಇದನ್ನು ಇನ್ನೂ ಅನೇಕ ಕೆಲಸಕ್ಕೆ ಬಳಸಬಹುದು ಎಂದು ಜೋಸೆಫ್ ಕಾಮರು ಅಭಿಪ್ರಾಯ ಪಡುತ್ತಾರೆ.

ಪಪಾಯಿಯು ಸಿಲೋನಿಯಿಂದ ಬರುವ ಸೊನೆ ಅಮೇರಿಕದ ಸಂಯುಕ್ತ ಸಂಸ್ಥಾನದ ಉದಿಮೆದಾರರಿಗೆ ಬಹಳ ಪ್ರಿಯವಾದುದಾಗಿತ್ತು. ಆದುದರಿಂದ ೨ ನೆಯ ಮಹಾಯುದ್ಧದ ಕಾಲದಲ್ಲಿ ಪಪಾಯಿ ಉತ್ಪಾದನೆಯನ್ನು ೯೦೦ ರಷ್ಟು ಹೆಚ್ಚು ಮಾಡಲಾಯಿತು. ೧೯೪೪ ರಲ್ಲಿ ೧೦,೫೦೦ ರತ್ತಲುಗಳಷ್ಟನ್ನು ಉತ್ಪಾದಿಸಲಾಯಿತು. ಅದರ ಬೆಲೆ ೬೬,೫೦೦ ರೂಪಾಯಿಗಳಷ್ಟಾಯಿತು. ೧೯೪೫ ರಲ್ಲಿ ೬,೬೫,೫೦೦ ರೂಪಾಯಿ ಬೆಲೆಯ ೧,೯೯,೭೬೦ ರತ್ತಲಷ್ಟನ್ನು ಬೆಳೆಸಲಾಯಿತು.

ನಡುವ ಬಗೆ

೧೦ ವರ್ಷಗಳ ಕೆಳಗೆ ತಾಂಗನೀಕದ ಜನರಿಗೆ ಪಪಾಯಿ ಸೊನೆಯ ನಿಜವಾದ ಬೆಲೆ ಗೊತ್ತಿದ್ದಿಲ್ಲ. ೧೯೩೫ ರಲ್ಲಿ, ಮೇರು ಶಿಖರದ ಫಲವತ್ತು ಪ್ರದೇಶದಲ್ಲಿರುವ ಅರುಷವೆಂಬ ಸ್ಥಳದಲ್ಲಿ ಒಬ್ಬ ಪಾದ್ರಿಯು ಪಪಾಯಿ ಬೆಳೆ ತೆಗೆಯಲು ಪ್ರಯತ್ನಿಸಿದನು. ಆಗ ಅವನಿಗೆ ಒಕ್ಕಲುತನದ ಅಧಿಕಾರಿಗಳು ಸಾಧ್ಯವಿದ್ದ ಎಲ್ಲ ನೆರವನ್ನೂ ಒದಗಿಸಿದರು. ಇಂದು ಅರುಷದ ಪ್ರತಿಯೊಬ್ಬ ತೋಟಿಗನೂ ಪಪಾಯಿ ಬೆಳೆಯುತ್ತಾನೆ. ಒಂದು ವರ್ಷದೊಳಗೇ ಅದು ಫಲಬಿಡುತ್ತದೆ. ಎಕರೆಗೆ ೬೦ ರಿಂದ ೧೦೦ ರತ್ತಲುಗಳ ವರೆಗೆ ಸೊನೆ ಸಿಗುತ್ತದೆ.

ಆದರೆ ಪಪಾಯಿ ಬೆಳೆವುದರಲ್ಲಿ ಕೆಲವುಮಟ್ಟಿಗೆ ನಷ್ಟದ ಅಂಶವೂ ಇದೆ. ಹೆಣ್ಣುಗಿಡ ಮಾತ್ರ ಕಾಯಿ ಬಿಡುವುದಲ್ಲದೆ ಗಂಡುಗಿಡ ಬಿಡದು. ಹೆಣ್ಣುಗಿಡ ಹೂಬಿಟ್ಟ ಕೂಡಲೆ ಅದಕ್ಕೆ ಪುಂಪರಾಗ ಮಿಲನ ಮಾಡಿಸಬೇಕಾಗುತ್ತದೆ. ಅಷ್ಟು ಮಾತ್ರ ಗಂಡುಗಿಡದ ಪ್ರಯೋಜನ. ಅನಂತರ ಅದನ್ನು ಕಡಿದೊಗೆಯುತ್ತಾರೆ. ಅವುಗಳ ಸ್ಥಳದಲ್ಲಿ ಹೆಣ್ಣುಗಿಡ ಕೆಲವಾದರು ಹುಟ್ಟಬಹುದೆಂದು ಹೊಸ ಸಸಿಗಳನ್ನು ನಡುತ್ತಾರೆ.

ಬೀಜಕ್ಕೆ ಹುಳು ತಾಗದಿದ್ದರೆ ಕೆಲಕಾಲದಲ್ಲಿ ತೋಟದತುಂಬ ಹೆಂಗಿಡಗಳನ್ನು ಬೆಳೆಸಬಹುದು. ಕೆಲವೇ ಗಂಡುಗಿಡಗಳನ್ನು ಪರಾಗಕ್ಕಾಗಿ ಇಟ್ಟುಕೊಳ್ಳಬಹುದು. ಗಿಡಗಳಸುತ್ತ ಮಾತ್ರ ಕಳೆ ಯೇಳದಂತೆ ಚೊಕ್ಕವಾಗಿ ಇಡಲು ಮರೆಯಬಾರದು.

ಸೊನೆಯನ್ನು ಒಣಗಿಸುವದು

ಪಪಾಯಿ ಗಿಡ ಕಾಯಿ ಬಿಡಲು ೬-೮ ತಿಂಗಳು ಬೇಕಾಗುತ್ತವೆ. ಆ ಫಲದಿಂದ ಸೊನೆಯನ್ನು ಆಗ ತೆಗೆಯಬಹುದು. ವರ್ಷದ ೯ ತಿಂಗಳಲ್ಲಿ ಹೇಳಾದರೂ ೧೦ ದಿನಗಳಿಗೊಮ್ಮೆ ಸೊನೆ ತೆಗೆಯಬಹುದು. ನಾಲ್ಕು ವರ್ಷಗಳವರೆಗೆ ಪಪಾಯಿಯಿಂದ ಫಲ ತೆಗೆಯಬಹುದು. ಅತಿಹರಿತವಾದ ರೇಜರ್ ಬ್ಲೇಡಿನಿಂದ ಸೂಕ್ಷ್ಮವಾಗಿ ಕತ್ತರಿಸಿ ಸೊನೆಯನ್ನು ತೆಗೆಯಬೇಕು. ತೆಗೆದ ಕೂಡಲೆ ಸೊನೆ ಮುದ್ದೆಯಾಗುತ್ತದೆ. ಕರಗೆ ಅದನ್ನು ತಗೆದು ಒಣಗಿಸತಕ್ಕದ್ದು. ತಟ್ಟೆಯಲ್ಲಿಟ್ಟು ಅದರಲ್ಲಿಯ ಕಸ, ಕಡ್ಡಿ, ಧೂಳು ಇತ್ಯಾದಿಗಳನ್ನು ಮೊದಲೇ ತೆಗದು ಹಾಕಿಬಿಡಬೇಕು. ಸೊನೆ ಕೈನ್ಯೆಗೆ ತಾಗಿದರೆ ಸುಡುವುದರಿಂದ ಅದನ್ನು ಬಹುಜಾಗ್ರತೆಯಿಂದ ತೆಗೆಯಬೇಕು. ಹೊಗೆ ಸೊಪ್ಪನ್ನು ಒಣಗಿಸುವಂತೆ ಈ ಸೊನೆಯ ಮುದ್ದೆಗಳನ್ನಾದರೂ ಬಿಸಿಗಾಳಿಯನ್ನು ಹಂಪುಗಳ ಮೂಲಕ ತಟ್ಟೆಯ ಬುಡಕ್ಕೆ ಅಟ್ಟಿ ಒಣಗಿಸಬೇಕು. ಆ ಗಾಳಿಯ ಉಷ್ಣಪ್ರಮಾಣ ೧೦೦ ಅಂಶ ಸೆಂಟಿಗ್ರೇಡಿನಷ್ಟಿರಬೇಕು. ೧೨ ಗಂಟೆಗಳಲ್ಲಿ ಮುದ್ದೆಗಳು ಒಣಗಿಬಿಡುತ್ತವೆ. ಒಣಗಿಸಿದ ನಂತರ ಅದಕ್ಕೆ 'ಪಾಪೇನ್' ಎನ್ನಲಾಗುತ್ತದೆ. ಆ 'ಪಾಪೇನ'ನ್ನು ಡಬ್ಬಿಗಳಲ್ಲಿ ತುಂಬಿ ಕಳಿಸಬಹುದು. ಅದನ್ನು ಗ ಎಲ್ಲಿಗೆಬೇಕೆಂದರಲ್ಲಿಗೆ—ಅಮೇರಿಕದ ಸಂಯುಕ್ತ ಸಂಸ್ಥಾನಕ್ಕೆ ಬೇಕಾದರೂ—ಕಳುಹಬಹುದು ಮತ್ತು ದ್ರವ್ಯಾಭಾವವಿರುವ ಈ ಕಾಲದಲ್ಲಿ ಯಥೇಷ್ಟವಾಗಿ ಡಾಲರುಗಳನ್ನು ಸಂಪಾದಿಸಬಹುದು.

— ಅರ್ಜುನ



ಶ್ರೀ. ಪಾಕಿಸ್ಥಾನ ಮಂತ್ರಿಗಳು ಫೆಬ್ರುವರಿ ೧ನೆಯ ತಾರೀಖು ಪತ್ರಿಕಾ ಪ್ರತಿನಿಧಿಗಳ ಪರಿಷತ್ತಿನಲ್ಲಿ ಇಂಗ್ಲೆಂಡಿನ ವಿದೇಶಾಂಗದ ಕಾರ್ಯದರ್ಶಿ ಮತ್ತು ಸಂ. ರಾ. ಸಂಘದ ಭದ್ರತಾ ಮಂಡಲದ ಬ್ರಿ. ಪ್ರತಿನಿಧಿ ಮುಖಂಡ ಇವರು ಪಾಲಿಸ್ತಾನದ ಮೇಲೆ ಚರ್ಚಿಸುತ್ತಿರುವುದು.

ಭಾರತದ ಆರ್ಥಿಕ ಪದ್ಧತಿಯಲ್ಲಿ ವಿಮಾದಾರರ ಸ್ಥಾನ

ಆರ್ಥಿಕ ಕ್ಷೇತ್ರದಲ್ಲಿ ಅಗತ್ಯವಾದುದೆಂದರೆ ಉತ್ಪಾದನೆ ಮತ್ತು ಉತ್ಪನ್ನಗಳ ಉತ್ಕರ್ಷ. ಆದರೆ ಅದಕ್ಕೆ ಅನುಸಾರವಾಗಿ ಹಂಚಿಕೆಯೇರಿಕೆ ಇಲ್ಲ. ಈ ಪರಿಸ್ಥಿತಿಯಿಂದ ಮುಕ್ತರಾಗಬೇಕಾದರೆ ನಾವೂ ವಿಮಾದಾರರೂ (Insurers) ಆರ್ಥಿಕ ಬಿಕ್ಕಟ್ಟಿಗೆ ಬಲಿಯಾಗದಿರಬೇಕು ಎಂದು ವಿಮೆಯ ಸೂಪರಿಂಟೆಂಡೆಂಟರು ಅಭಿಪ್ರಾಯ ಪಡುತ್ತಾರೆ. ಮುಂದುವರಿದು ಅವರು— "ಔದ್ಯೋಗಿಕ ಉತ್ಪಾದನೆಯು ಇಳಿತಾಯವನ್ನು ತಡೆಗಟ್ಟದಿದ್ದರೆ ವಿಮಾದಾರರ ಆದಾಯ ಇಳಿದು ಹೋಗದಿರದು" ಎಂದು ತಮ್ಮ ೧೯೪೭ ರ ಹಿಂದೀ ವಿಮಾ ವಾರ್ಷಿಕ ವರದಿಯಲ್ಲಿ ಸಾರಿದ್ದಾರೆ.

೧೯೪೬ರಲ್ಲಿ ವಿಮೆಯುಬ್ಬಿನ ಸ್ಥಿತಿಯುಳ್ಳಿತ್ತು. ಬೆಲೆಯ ಏರಿಕೆ ಮುಂತಾದ ಕಾರಣಗಳಿಂದ ಇಲ್ಲಿಯ ವರೆಗೆ ಉಬ್ಬಿನ ಸ್ಥಿತಿ ಹಾಗೇ ಇದ್ದುದಾದರೂ ಅಗಲೇ ಅದು ಇಳಿಮುಖವಾಗುವ ಲಕ್ಷಣಗಳು ಕಂಡು ಬರುತ್ತಿವೆ.

ವಿಭಜನಾ ನಂತರ

ವಿಭಜನಾನಂತರ ವಿಮೆ ಮತ್ತು ಪ್ರಾವಿಡೆಂಟ ಸೊಸಾಯಿಟಿಗಳ ರಿಜಿಸ್ಟ್ರಾರ್ ಆಫೀಸುಗಳು ಉಭಯ ಅಧಿರಾಜ್ಯಗಳಲ್ಲಿ ಅಸ್ತಿತ್ವ ಸ್ಥಾನಾಂತರ ಹೊಂದಿದವು. ೧೯೩೮ ರ ವಿಮಾ ಶಾಸನದ ಪ್ರಕಾರ ಹಿಂದುಸ್ಥಾನದಲ್ಲಿ ೨೩೬, ಪಾಕಿಸ್ತಾನದಲ್ಲಿ ೯ ಮತ್ತು ಮಿಕ್ಕಡೆ ೧೧೧ ವಿಮೆಗಳು ೪೭ ನೆಯ ನವೆಂಬರಿನಲ್ಲಿ ರಿಜಿಸ್ಟರಾದವು.

೧೯೪೬

ಹಿಂದೀ ಜೀವ ವಿಮೆ	ಹಿಂದಿನ ವರ್ಷಕ್ಕಿಂತ ಹೆಚ್ಚು	ಹಿಂದೀತರ ಜೀವ ವಿಮೆ
ಪಾಲಿಸಿಗಳು—		
೨೫,೬೯,೦೦೦	೧,೯೩,೦೦೦	೨,೨೮,೦೦೦
ವಿಮಾ ಧನ—		
೫೧೪.೫೦ ಕೋಟಿ ರೂಪಾಯಿಗಳು	೫೫.೦೭ ಕೋಟಿ ರೂಪಾಯಿಗಳು	೧೦೦.೮೫ ಕೋಟಿ ರೂಪಾಯಿಗಳು
ಕಂತು ಹಣದ ಆದಾಯ—		
೨೫.೫೯ ಕೋಟಿ ರೂಪಾಯಿಗಳು	೨.೭೮ ಕೋಟಿ ರೂಪಾಯಿಗಳು	೫.೬೫ ಕೋಟಿ ರೂಪಾಯಿಗಳು

೧೯೪೬ ರಲ್ಲಿ ಭಾರತದ ಹೊರಗೆ ಮಾಡಿದ ಹಿಂದೀ ವಿಮೆಯ ಪಾಲಿಸಿಗಳು ೧೬,೩೦೦ ವಿಮಾಧನ ೫.೭೩ ಕೋಟಿ ರೂಪಾಯಿಗಳು ಮತ್ತು ಸುಮಾರು ೮೫,೭೦೦ ಪಾಲಿಸಿಗಳಲ್ಲಿ ವಿಮಾಧನ ೨೪.೯೦ ಕೋಟಿ ರೂಪಾಯಿಗಳು.

೧೯೪೬ ರ ಒಟ್ಟು ವಿಮೆ ತೆರಿಗೆಯ ಆದಾಯ— ಹಿಂದೀಯರ ವಿಮೆಯಿಂದ ೩೨.೦೨ ಕೋಟಿ ರೂಪಾಯಿಗಳು; ಹಿಂದೀಯೇತರ ವಿಮೆಯಿಂದ ೭.೬೬ ಕೋಟಿ ರೂಪಾಯಿಗಳು; ವಿತರಣವಾದ ಹಣ ಅನುಕ್ರಮವಾಗಿ ೧೬.೧೭ ಕೋಟಿ ರೂಪಾಯಿಗಳು ಮತ್ತು ೫.೮೮ ಕೋಟಿ ರೂಪಾಯಿಗಳು; ಉಳಿದ ೧೫.೮೫ ಮತ್ತು ೧.೮೮ ಕೋಟಿ ರೂಪಾಯಿಗಳು ಹಿಂದೀ ಮತ್ತು ತದಿತರ ವಿಮಾಧನದ ಉತ್ಕರ್ಷವನ್ನು ತೋರಿಸುತ್ತವೆ.

ಬಡ್ಡಿಯಲ್ಲಿ ಕೆಳಮೊಗ

ಆದಾಯದ ತೆರಿಗೆಯನ್ನು ಕಳೆದು ೧೯೪೬ರಲ್ಲಿ ಜೀವ ವಿಮಾಧನದ ಮೇಲೆ ನೂರಕ್ಕೆ ೩.೨೦ ಬಡ್ಡಿ ಕೊಡಲಾಗುತ್ತಿತ್ತು. ಅದರ ಹಿಂದಿನ ವರ್ಷದ ಬಡ್ಡಿ ದರ ನೂರಕ್ಕೆ ೩.೪೮ ಇತ್ತು. ನಿರ್ವಹಣದ ವೆಚ್ಚ ೪೬ ರಲ್ಲಿ ಕಂತು ಹಣದಲ್ಲಿ ನೂರಕ್ಕೆ ೩೧.೨; ಹಿಂದಿನ ವರ್ಷವೂ ಅಷ್ಟೇ ಇತ್ತು. ಹಿಂದೀಯೇತರ ವಿಮೆಗೆ ೪೬ ರಲ್ಲಿ ೩.೧೮ ಮತ್ತು ೪೫ ರಲ್ಲಿ ೩.೨೨ ಬಡ್ಡಿ ದರವೂ ೨೦.೨ ಮತ್ತು ೧೯.೩ ನಿರ್ವಹಣ ವೆಚ್ಚವೂ ಉಂಟಾದವು.

ಹೊಸ ವಿಮಾ ಸಂಸ್ಥೆಗಳು

ಹೊಸ ಸಂಸ್ಥೆಗಳು ೪೮; ಅವುಗಳಲ್ಲಿ ೧೦ ಉಳಿದಾಯವನ್ನು ಪಾಲಿಸಿ ಮತ್ತು ಶೇರುಹೋಲ್ಡರುಗಳಿಗೆ ಕೊಟ್ಟವು. ಉಳಿದವುಗಳಲ್ಲಿ ಅದನ್ನು ಮುಂದಿನ ಲೆಕ್ಕಕ್ಕೆ ಕೂಡಿಸಲಾಯಿತು. ೨೩ ಸಂಸ್ಥೆಗಳು ಕೊರತೆಯನ್ನು ತೋರಿಸಿದವು. ಅವುಗಳಲ್ಲಿ ೧೩ ರ ಕೊರತೆಯನ್ನು ಪೇಡ್ ಅಪ್ ಬಂಡವಾಲದಿಂದ ತುಂಬಿ ಕೊಡಲಾಯಿತು. ಉಳಿದ ೧೦ ರಲ್ಲಿ ಹಾಗೆ ತುಂಬಿ ಕೊಡಲಿಲ್ಲ.

ಜೀವೇತರ ವಿಮೆ

ಹಿಂದೀ ಮತ್ತು ತದಿತರ ಒಟ್ಟು

೧೯೪೬ ಮತ್ತು ೧೯೪೫ ರಲ್ಲಿ	ಹಕ್ಕುಗಳ ಪ್ರಮಾಣ ನೂರಕ್ಕೆ	ಕಮಿಶನ್ನಿನ ಪ್ರಮಾಣ ನೂರಕ್ಕೆ	ವ್ಯಯದ ಪ್ರಮಾಣ ನೂರಕ್ಕೆ	ಹಿಂದೀ ಕಂತು ಹಣ	ಹಿಂದೀಯೇತರ ಕಂತು ಹಣ
ಅಗ್ನಿ ವಿಮೆ	೪೦ ಮತ್ತು ೪೧	೨೨ ಮತ್ತು ೨೨	೨೬ ಮತ್ತು ೨೭	೩.೮೩ ಕೋಟಿ ರೂ.	೨.೧೯ ಕೋಟಿ ರೂ.
ಸಾಮುದ್ರ ವಿಮೆ	೪೦ ಮತ್ತು ೫೨	೧೫ ಮತ್ತು ೧೮	೨೧ ಮತ್ತು ೨೧	೧.೧೦ ಕೋಟಿ ರೂ.	೧.೧೨ — " —
ಮಿಶ್ರ ವಿಮೆ	೨೮ ಮತ್ತು ೩೪	೧೫ ಮತ್ತು ೧೩	೨೧ ಮತ್ತು ೨೦	೧.೭೬ ಕೋಟಿ ರೂ.	೧.೫೬ — " —
ಒಟ್ಟು				೬.೬೯ ಕೋಟಿ ರೂ.	೪.೮೭ ಕೋಟಿ ರೂ.

ಪ್ರಾವಿಡೆಂಟ್ ಸೊಸಾಯಿಟಿಗಳು

೧೯೪೭ ರ ನವೆಂಬರ ೧೫ ರಲ್ಲಿ ಹಿಂದುಸ್ಥಾನದಲ್ಲಿ ೧೧೧, ಪಾಕಿಸ್ತಾನದಲ್ಲಿ ೮ ಹೀಗೆ ಒಟ್ಟು ೧೧೯ ಪ್ರಾವಿಡೆಂಟ್ ಸೊಸಾಯಿಟಿಗಳು ರಿಜಿಸ್ಟರಾದವು.

ಹೊಸ ವ್ಯಾಪಾರ

೧೯೪೬		ಹಿಂದಿನ ವರ್ಷಕ್ಕಿಂತ ಹೆಚ್ಚಾದ ಅಂಶ	ವರ್ಷಾಂತ್ಯದ ಒಟ್ಟು ವ್ಯಾಪಾರ
ಪಾಲಿಸಿಗಳ ಸಂಖ್ಯೆ	೨೪೦೦೦	೧೬೦೦	೮೨,೫೦೦
ವಿಮಾಧನ	೧೨೬.೩೭	೨೪.೩೦	೩೦೭ ೩೭
	ಲಕ್ಷ ರೂ.	ಲಕ್ಷ ರೂ.	ಲಕ್ಷ ರೂ.

ಸರಕಾರೀ ಸೆಕ್ಯೂರಿಟಿಯಲ್ಲಿಟ್ಟ ಹಣ

ಸೆಕ್ಷನ್ ೨೭ ರ ಪ್ರಕಾರ ಕಂಪನಿಗಳು ಡಿಸೆಂಬರ್ ೩೧ ರಲ್ಲಿ ಸರಕಾರ ಮತ್ತು ಸಮ್ಮತಿ ಪಡೆದ ಸೆಕ್ಯೂರಿಟಿಗಳಲ್ಲಿ ಕಾಯಿದೆಯ ಅವಶ್ಯಕತೆಗಿಂತ ನೂರಕ್ಕೆ ೬೦ ರಷ್ಟು ಹೆಚ್ಚು ಹಣವನ್ನು ಇಟ್ಟದ್ದು ಕಂಡು ಬಂದಿದೆ. "ವಿಮಾಶಾಸನದ ಸೆಕ್ಷನ್ ೨೭ ಕ್ಕಿಂತ ಹೆಚ್ಚಾಗಿ ಸುಲಭ ಧನದ ಪರಿಸ್ಥಿತಿಯು ಹೀಗೆ ಮುಖ್ಯ ವಿಮಾ ಕಂಪನಿಗಳು ಸರಕಾರೀ ಮತ್ತು ಸಮ್ಮತಿ ಪಡೆದ ಸೆಕ್ಯೂರಿಟಿಗಳಲ್ಲಿ ಹಣ ಹಾಕುವಂತೆ ಮಾಡಿದೆ" ಎಂದು ವರದಿಯಲ್ಲಿ ಹೇಳಿದೆ.

ಅಧಿಕಾರಿಗಳಿಗೆ ಅಧಿಕಾರ ಪತ್ರ

ವಿಮಾ ಕಾಯಿದೆಯನ್ವಯ ೧೯೪೬ ರಲ್ಲಿ ಏಜಂಟರಿಗೆ ಕೊಟ್ಟ ಲೈಸೆನ್ಸುಗಳ ಸಂಖ್ಯೆ ೧,೫೬,೯೯೨ ಇವುಗಳಲ್ಲಿ ಸುಮಾರು ನೂರಕ್ಕೆ ೧೪ ರಷ್ಟು ಸ್ತ್ರೀ ಏಜಂಟರಿಗೆ ಕೊಡಲಾಗಿದ್ದವು. "ಇವೆಲ್ಲವೂ ನಿಜವಾದ ಸಂದರ್ಭದಲ್ಲಿ ಕೊಟ್ಟವೋ ಅಲ್ಲವೋ ಎಂಬುದನ್ನು ತಿಳಿಯುವುದು ಕಷ್ಟ" ಎಂದು ವರದಿ ವ್ಯಾಖ್ಯಾನಿಸುತ್ತದೆ.

ಅಗ್ಗದರದ ಪಾಲಿಸಿ ಮತ್ತು ಧನನ್ಯಾಸ

ಇತ್ತೀಚಿನ ನೂರಕ್ಕೆ ೨॥ ರಂತೆ ಕೊಟ್ಟ ಸಾಲವನ್ನು ಎತ್ತಿ, "ಈ ಅಗ್ಗದರದ ಪಾಲಿಸಿಯು ಅನುಸರಣೆಗಿರುವ ಇತಿ ಮಿತಿಗಳನ್ನು ಸರಕಾರ ಅರಿತಿದೆ" ಎಂದು ಸೂಪರಿಂಟೆಂಡೆಂಟರು ಸ್ಮರಿಸುತ್ತಾರೆ. ಇಂದಿನ ಈ (Cheap money Policy) ಸುಲಭ ಧನ ಪರಿಸ್ಥಿತಿಯಿಂದ ಕಂಪನಿಗಳು ತಮ್ಮ ನ್ಯಾಯವಾದ ಧನನ್ಯಾಸ (Investment) ವನ್ನು ಬಿಟ್ಟು ಹೆಚ್ಚಿನ ಲಾಭಕ್ಕಾಗಿ ಇತರ ಕ್ಷೇತ್ರಗಳನ್ನು ಹುಡುಕುತ್ತ ಹೋಗಬಾರದೆಂದು ಅವರು ಸಲಹೆ ಕೊಟ್ಟಿದ್ದಾರೆ.

ಜೀವವಿಮೆಯ ದರದ ಪುನರ್ವಿಮರ್ಶೆ

ಪುನರ್ವಿಮರ್ಶೆಯ ಮಾತೆತ್ತಿ, ಇತ್ತೀಚೆಗೆ ಜೀವ ವಿಮೆಯ ಕಂತಿನ ಹಣದ ದರದ ಪುನರ್ವಿಮರ್ಶೆಯು ಬಡ್ಡಿಯ ತಳಹದಿಯ ಮೇಲೆ ಲಾಭಕ್ಕನುಗುಣವಾಗಿ ಮಾಡಲ್ಪಟ್ಟಿದ್ದರೂ ಇನ್ನೂ ಎಷ್ಟೋ ವಿಮಾದಾರರು ಲಾಭಕರವಲ್ಲದ ದರದಂತೆಯೇ ಕಂತಿನ ಹಣವನ್ನು ತೆಗೆದುಕೊಳ್ಳುತ್ತಲಿದ್ದಾರೆ. ಈ ವಿಮಾದಾರರು ಆದ ಸ್ಥಿತಿಯನ್ನು ಗಮನಕ್ಕೆ ತಂದುಕೊಂಡು ತಮ್ಮ ಕಂತಿನ ದರಗಳನ್ನು ಪುನಃ ಪರಿಶೀಲಿಸುವುದು ಯೋಗ್ಯ.

ದೂರುಗಳು

ಪಾಲಿಸಿದಾರರಿಂದ ವಿಮಾದಾರರ ವಿರುದ್ಧ ಬಂದ ಅನೇಕ ದೂರುಗಳನ್ನು ಟೀಕಿಸುತ್ತ, ವಿಮಾದಾರರು ಪಾಲಿಸಿದಾರರಿಗೆ ಸಲ್ಲತಕ್ಕದ್ದೆಲ್ಲವನ್ನೂ ಸಲ್ಲಿಸದಿರುವುದು ಸರಿಯಲ್ಲವೆಂದೂ ೩ ನೆಯವರಿಗಿಂತ ಮೊದಲನೆಯವರ ಸ್ವಾರ್ಥದ ಹೆಚ್ಚುಗಾರಿಕೆಯನ್ನು ಸಮರ್ಥಿಸಿಕೊಳ್ಳಬೇಕೆಂದೂ ಸೂಪರಿಂಟೆಂಡೆಂಟರು ಎಚ್ಚರಿಸಿದ್ದಾರೆ.

— ಬಿ. ಹೆ ಡಿ. (ಅಧಿಕೃತ ಪತ್ರದಿಂದ)

ಚಂದಾದಾರರಲ್ಲಿ ವಿನಂತಿ

ಯಾವದೇ ಪತ್ರವ್ಯವಹಾರ ಮಾಡುವಾಗ್ಗೆ ನಿಮ್ಮ ಚಂದಾ ನಂಬರನ್ನು ಅಂದರೆ ನಾವು ನಿಮ್ಮ ವಿಳಾಸದ ಪ್ರಾರಂಭಕ್ಕೆ ಸೇರಿಸಿದ ನಂಬರನ್ನು ಬರೆದರೆ ಮಾತ್ರ ನಿಮ್ಮ ಪತ್ರಕ್ಕೆ ಲಕ್ಷ್ಯಗೊಡಲಾಗುವದು. ಅವಧಿ ಮುಗಿಯುವ ಮುಂಚೆಯೇ ೧೫ ದಿನ ಪೂರ್ವದಲ್ಲಿ ವ್ಹಿ. ಪಿ. ಮಾಡಲಾಗುವದು. ವ್ಹಿ. ಪಿ. ಬೇಡಾದವರು ೧೫ ದಿನ ಮೊದಲೇ ನಮಗೆ ತಿಳಿಸಬೇಕು. ವ್ಹಿ. ಪಿ. ನಿರಾಕರಿಸಿ ಒಂದುಗಡೆ M. O. ಮಾಡಿದರೆ ವ್ಹಿ. ಪಿ. ಖರ್ಚು ಮುರಿಯಲಾಗುವದು.

ಕರ್ಮವೀರ ಚಂದಾ ವಿವರ

ಅಂಚೆ ವೆಚ್ಚ ಸಹಿತ(ಚಂದಾಹಣ ಮುಂಗಡ)

೧ ವರ್ಷ	೬-೪-೦
೬ ತಿಂಗಳಿಗೆ . . .	೩-೪-೦
೩ ,, ...	೧-೭೨-೦

ವ್ಹಿ. ಪಿ. ಯಿಂದ ತರಿಸಿಕೊಂಡಲ್ಲಿ ಪ್ರತಿಗೆ ೬ ಆಣೆ ಹೆಚ್ಚಿಗೆ ಬೀಳುವದು.

ಹರಿಜನ

ದೇವರನ್ನು ನಂಬಿ

'ಹರಿಜನ'ವನ್ನು ಸಂಪಾದಿಸುವ ಹೊಣೆಯನ್ನು ನಾನು ಕೇವಲ ನನಗಿರುವ ದೇವರಲ್ಲಿಯ ಶ್ರದ್ಧೆಯ ಬಲದಿಂದ ಅಂಗೀಕರಿಸುತ್ತೇನೆ. ಕುಶ್ರಾ ಪರಿಸ್ಥಿತಿ ನನಗೆ ಅನುಕೂಲವಾಗಿಲ್ಲ. ಎಲ್ಲದಕ್ಕೂ ದೊಡ್ಡ ಬಾಧೆ ತೊಂದರೆಯೋ ಎನಬಹುದೆ ಕೆಡುತ್ತಿರುವ ನನ್ನ ಆರೋಗ್ಯ; ಇದಲ್ಲದೆ, ನಾನು ಬಹುಭಾಷಾವಿದ ಮತ್ತು ಮುಂದಗತಿಯ ಬರಹಗಾರ. ಅದರಲ್ಲೂ ಇಂಗ್ಲೀಷಂತೂ ನನಗೆ ಅಷ್ಟಕ್ಕಷ್ಟೇ. ಇಂಗ್ಲೀಷು 'ಹರಿಜನ' ಹೊರಡಲೇ ಬೇಕಾಗಿದ್ದರೆ ಅದನ್ನು ಪ್ಯಾರೇಲಾಲರು ಸಂಪಾದಿಸಬೇಕಾಗಿತ್ತು. ಆದರೆ ಅವರು ನ್ಯಾಯವಾಗಿ ತಮ್ಮ ಶಕ್ತಿಯ ಅತ್ಯುತ್ತಮ ಭಾಗವನ್ನು ಗಾಂಧಿಯವರು ಜೀವಿಸಿದ್ದಾಗಲೇ ಪ್ರಾರಂಭಿಸಿದ್ದ ಅವರ ಜೀವನ ಚರಿತ್ರೆಗೆ ಅಗತ್ಯವಾದ ಸಾಮಗ್ರಿಗಳನ್ನು ಸಂಗ್ರಹಿಸುವ ಸೇವೆಗಾಗಿ ವ್ಯಯಮಾಡಲು ಬಯಸುತ್ತಾರೆ. ಅದಕಾರಣ ಅವರು ಈ ಹೆಚ್ಚಿನ ಹೊಣೆಯನ್ನು ಹೊರಲಾರರು. ಅದರೂ ಎಲ್ಲರವೆಂಬ ಐಕ್ಯತೆ ಹೆಚ್ಚಾಗಿ ಈ ಸಾಪ್ತಾಹಿಕಗಳು ಪ್ಯಾರೇಲಾಲರವೇ ಎನಿಸುವುದರಿಂದ ಆಗಾಗ ಅವರು ಲೇಖನಗಳನ್ನು ಇವಕ್ಕೆ ಕಳುಹಿಸುತ್ತಿರುತ್ತಾರೆ. ಉಳಿದೆಡೆ ವಿಫಲತ್ವ ಮುಖ್ಯವಾಗಿ ನವಜೀವನ ವಿಶ್ವಸ್ತಮಂಡಲವು ನನ್ನ ಶಕ್ತಿಯ ಮಿತಿಯನ್ನು ಅರಿತೂ ಈ ಭಾರ ಹೊರಲು ಒತ್ತಾಯ ಪಡಿಸಿದೆ.

ಇಂಗ್ಲೀಷು "ಹರಿಜನ"ವನ್ನು ಹೊರಡಿಸುವುದಗತ್ಯವೇನೆಂಬ ಒಂದು ಸುಸಂಬದ್ಧ ಪ್ರಶ್ನೆಯನ್ನು ಹಾಕಲಾಗಿದೆ. ತಮ್ಮ ಹಿಂದೀ ವಾಚಕರಿಗೆ ಗಾಂಧಿಯವರು ಇಂಗ್ಲೀಷಿನಲ್ಲಿ ಬರೆಯಲು ಇಷ್ಟವುಳ್ಳವರಾಗಿದ್ದಿಲ್ಲ. ಹಿಂದೀಯೇತರ ಪ್ರಾಂತಗಳಿಗೂ ಕೂಡ ಬೇಕಾದ ಸಂದೇಶವಿದ್ದ ಕಾರಣ ಅವರು ಇಂಗ್ಲೀಷಿನಲ್ಲಿ ಬರೆದರು. ಅವರಿಗೆ ಆ ಭಾಷೆಯ ಮೇಲಿದ್ದ ಪ್ರಭುತ್ವವು ಹಾಗೆ ಮಾಡಲು ಅವರಿಗೆ ಸುಲಭಮಾಡಿಕೊಟ್ಟಿತು. ಅದರೂ, ಒಬ್ಬ ಅವನ್ನು ಇಷ್ಟಪಟ್ಟರಲಿ ಪಡದಿರಲಿ, ಹಿಂದುಸ್ತಾನದಲ್ಲಿ ಆ ಇಂಗ್ಲೀಷು "ಹರಿಜನ"ವು ಹಿಂದೀ ಭಾಷೆಯ ಪ್ರತಿಗಳಷ್ಟೇ ಜನಪ್ರಿಯವಾಗಿತ್ತು. ವಸ್ತುಸ್ಥಿತಿಯನ್ನವಲೋಕಿಸಿದರೆ ಭಾರತದ ಒಮ್ಮಗದಲ್ಲಿ ಬಹುದೊಡ್ಡ ಭಾಗಕ್ಕೆ "ಹರಿಜನ"ದ ಉದ್ದೇಶವನ್ನು ಪರಿಚಯ ಮಾಡಿಕೊಳ್ಳಲು ಇಂಗ್ಲೀಷು ಪ್ರತಿಯೊಂದೇ ಅನುಕೂಲವಾದ ಮಾಧ್ಯಮವು ಎಂಬುದು ತಿಳಿದುಬರುತ್ತದೆ. ಅದುದರಿಂದ ತಾತ್ಕಾಲಿಕವಾಗಿ ಇಂಗ್ಲೀಷು "ಹರಿಜನ"ವನ್ನು ಕೂಡ ಮುಂದುವರಿಸಬೇಕೆಂದು ನಿರ್ಣಯಿಸಲಾಗಿದೆ. ವಾಚಕರು ಉಳಿಸಿದರೆ ಮಾತ್ರ ಅದು ಉಳಿಯುತ್ತದೆ. ಸ್ವಾವಲಂಬಿಯಲ್ಲವೆನಿಸಿದರೆ ಅದನ್ನು ಸಾಗಿಸಲು ಸಾಧ್ಯವಿಲ್ಲ. [illegible] ಈ ಪ್ರಪಂಚದ ಹೊರಗೇ.

ಈ ಕೆಲಸವನ್ನು ಕೈಗೊಳ್ಳಲು ೨ ಕಾರಣಗಳು ನನಗೆ ಪ್ರೋತ್ಸಾಹಿಸಿವೆ. ಮೊದಲನೆಯದೆಂದರೆ, ನಿಸರ್ಗವು ನನ್ನ ವಿರುದ್ಧವಿದ್ದರೂ ನನ್ನ ಅನರ್ಹತೆಯನ್ನು ಮೀರಿ ಸಮಾಜವು ನನಗೆ ಯಾವಾಗಲೂ ದಯೆದೋರಿದೆ ಎಂದು ಭಾವಿಸಿದ್ದೇನೆ. ನನ್ನ ಗೆಳೆಯರು ಮತ್ತು ಸಹೋದ್ಯೋಗಿಗಳು ನನಗೆ ಎಷ್ಟೋ ಮಾನಸಿಕ ಮತ್ತು ಬೌದ್ಧಿಕ ನ್ಯೂನತೆಗಳಿದ್ದರೂ ಅವನ್ನು ಪ್ರೀತಿ ಮತ್ತು ಸಹನೆಗಳಿಂದ ಹೊತ್ತು ಸಾಗಿಸ್ಯಾರೆ; ಎಂದ ಮೇಲೆ ಅವರ ಸಹಕಾರವನ್ನು ನಾನು ನಿರೀಕ್ಷಿಸಬಲ್ಲೆ. ಅಲ್ಲದೆ, ಹಿರಿಯರ ಆಶೀರ್ವಾದ, ಅವರವರ ರಾಜಕೀಯ, ಧಾರ್ಮಿಕ ಇಲ್ಲವೆ ಇತರ ಧ್ಯೇಯಗಳ ಸಂಬಂಧದಿಂದ ಅಸ್ಪಷ್ಟವಾದ ನಮ್ಮ ಪ್ರಮುಖ ಮುಖಂಡರ ಸಹಾಯ ಇವುಗಳು ನನಗಿರುವುದು ನನ್ನ ಭಾಗ್ಯವೇ ಸರಿ. ಇದು ದೇವರದಯೆಯ ಪ್ರಮಾಣವೆಂದು ತಿಳಿಯುತ್ತೇನೆ. ಆದರೆ ೨ ನೆಯದೂ ಮೊದಲಿನದಕ್ಕಿಂತ ಹೆಚ್ಚು ಶಕ್ತಿಯುತವಾದುದೂ ಎನಿಸಿದ ಕಾರಣವೆಂದರೆ ಮಾನವಕುಲೋದ್ಧಾರ ಬುದ್ಧಿ. ಅದಕ್ಕಾಗಿ ಗಾಂಧಿಯವರು ದುಡಿದು, ಬೆಂಬಲಿಸಿ, ಪ್ರಾಣಾರ್ಪಣ ಮಾಡಿದರು- ಅದಿನ್ನೂ ಮುಗಿದಿಲ್ಲ. ಅದನ್ನು ದೇವರ ಹೆಸರಿನಲ್ಲಿ ಕೈಕೊಂಡು ಅವರು ತಮ್ಮ ಜೀವಿತವನ್ನೇ ಅದಕ್ಕೆ ಆಹುತಿಯಾಗಿ ಕೊಟ್ಟರು. ನನಗೆ ಆ ಪ್ರಯತ್ನದಲ್ಲಿ ನಂಬಿಗೆಯಿದೆ; ಮತ್ತು ಅದರಲ್ಲಲ್ಲದೆ ಇನ್ನಾವುದರಲ್ಲೂ ನನ್ನಲ್ಲುಳಿದಿರುವ ಅಲ್ಪ ಶಕ್ತಿಯನ್ನು ಹೆಚ್ಚು ಉತ್ತಮರೀತಿಯಿಂದ ಬಳಸಲು ಸಾಧ್ಯವಿಲ್ಲವೆಂದು ನನಗನಿಸುತ್ತದೆ. ಈ ಸೇವಾ ಕಾರ್ಯದಲ್ಲೇ ನನ್ನ ದೇಹ ಒಡೆದು ಉರುಳಿ ಹೋದರೆ ಅದು ವ್ಯರ್ಥವೆನಿಸಲಾರದು. ಕೇವಲ ರಾಜಕೀಯ, ಸಾಮಾಜಿಕ, ಆರ್ಥಿಕ, ಶಾಸ್ತ್ರೀಯ ಇಲ್ಲವೆ ಧ್ಯೇಯ ಸಂಬಂಧಿಯಾದ ಸಮಸ್ಯೆಗಳಷ್ಟೇ ನಮ್ಮ ಮುಂದಿವೆ- ಕೇವಲ ಅವುಗಳ ಪರಿಶೀಲನದಿಂದ ಅಂಗೀಕರಿಸುವ ಉಪಾಯಗಳು ನಮ್ಮನ್ನು ಬಹಳ ಮುಂದಕ್ಕೆ ಒಯ್ಯುತ್ತವೆ ಎಂದು ನಾನು ತಿಳಿಯುವುದಿಲ್ಲ. ಕಟ್ಟಕಡೆಯಲ್ಲಿ ಮಾನವನ ಆಧ್ಯಾತ್ಮಿಕ ಮತ್ತು ನೈತಿಕ ಪುನರ್ಜನನವೇ ಅಗತ್ಯವಾಗಿ ಬೇಕಾದುದು. ನಮ್ಮ ಹೃದಯ ಸಿಂಹಾಸನದಿಂದ ನಾವು ದೇವರನ್ನು ಕೆಳಗುರುಳಿಸಿದ್ದೇವೆ; ಮತ್ತು ಆ ಸ್ಥಳದಲ್ಲಿ ಬರಿಯ ಜ್ಞಾನವನ್ನು ಸ್ಥಾಪಿಸಿ ಬಿಟ್ಟಿದ್ದೇವೆ. ಜೀವ, ಸತ್ಯಸಂಧತೆ, ಪ್ರಾಮಾಣಿಕತೆ, ವಯೋಮಾನ, ಸ್ತ್ರೀ ಮರ್ಯಾದೆ ಇವುಗಳಿಗೆ ಮನ್ನಣೆ ಕೊಡುವದು, ಶ್ರಮಗೌರವ ಮತ್ತು ಇತರ ನಾಗರಿಕತೆ ಮತ್ತು ಸಂಸ್ಕೃತಿಗಳ ಸ್ವಚ್ಛತೆಯ ಲಕ್ಷಣಗಳೆನಿಸುವ ಸದ್ಗುಣಗಳು ನಮ್ಮ ದಿನಬಳಕೆಯಲ್ಲಿ ಮಾಯವಾಗಿಬಿಟ್ಟಿವೆ. ಉದ್ದೇಶ ಸಾಧಿಸಲು ನಾವು ಯಾವ ಅಮಾನುಷ ಇಲ್ಲವೆ ಅನಾಗರಿಕ ಕೃತ್ಯವನ್ನು ಬೇಕಾದರೂ ಮಾಡಲು ಹಿಂಜರಿಯೆವು. ದೇವರೆಂದರೆ ಈ ಸದ್ಗುಣಗಳ ಸಂಕಲನವೆಂದು ನಾವು ತಿಳಿದರೆ ನಾವು ಖಂಡಿತವಾಗಿ ಅವನಿಂದ ದೂರ ಹೋಗಿದ್ದೇವೆ; ಮತ್ತು ಅವನನ್ನು ಭಕ್ತಿಗೌರವಗಳಿಂದ ಪುನಃ ಸಮೀಪಿಸದಿದ್ದರೆ, ಜ್ಞಾನೋತ್ಕರ್ಷ, ರಾಜಕೀಯ ಇಲ್ಲವೆ ಆರ್ಥಿಕ ಉನ್ನತಿ ಎಷ್ಟರಮಟ್ಟಿಗಾದರೂ ಅವು ನಮಗೆ ಸುಖವನ್ನು ಕೊಡಲಾರವು. ಈ ಮಾರ್ಗದಲ್ಲಿ ಜನರ ಚಿತ್ತವನ್ನು ಎಚ್ಚರಿಸುವದೇ ನನ್ನ ಪ್ರಯತ್ನ ಮತ್ತು ಅಕ್ಷರಶಃ ನಾನು ಒಂದು ಅಸಸ್ವರದ ಕಂತಿಯಂತಿದ್ದರೂ ದೇವರು ನನಗೆ ನನ್ನ ಈ ಪ್ರಯತ್ನದಲ್ಲಿ ನೆರವಾಗುವನೆಂದು ನಂಬುತ್ತೇನೆ.

ಪ್ರಾರಂಭದಲ್ಲೇ ಒಂದು ಸಂಗತಿಯನ್ನು ಸ್ಪಷ್ಟಪಡಿಸುವದು ಬಹಳ ಉತ್ತಮ. ನನ್ನ ಇಲ್ಲವೆ "ಹರಿಜನ"ಕ್ಕೆ ಬರೆವ ಇತರರ ಅಭಿಪ್ರಾಯಗಳನ್ನು ಗಾಂಧಿವಾದವೆಂದಾಗಲಿ, ಗಾಂಧಿತತ್ವದ ಅಧಿಕೃತ ವ್ಯಾಖ್ಯಾನವೆಂದಾಗಲಿ, ಓದುಗರು ತಿಳಿಯಕೂಡದು. ನಮ್ಮ ಅಂಕಿತದಲ್ಲಿರುವ ಬರಹಕ್ಕೂ ಗಾಂಧಿಯವರು ಹೇಳಿದ್ದಕ್ಕೂ ಏನಾದರೂ ಅವನಿಗೆ ವ್ಯತ್ಯಾಸ ಕಾಣಿಸಿದರೆ ಅವನು ಪ್ರತಿಯೊಂದನ್ನೂ ಅದರದರ ಯೋಗ್ಯತಾನುಸಾರ ಪರಿಶೀಲಿಸಿ ತನ್ನ ಮನೋಬುದ್ಧಿಗಳಿಗೆ ಹಿಡಿಸುವಂಥದನ್ನೇ ಸ್ವೀಕರಿಸಬೇಕು. ಅವನ ಅಭಿಪ್ರಾಯವನ್ನು ವಿವರಿಸುವ ಅಧಿಕಾರ ನನಗಿಲ್ಲ. ಪ್ರತಿಯೊಂದರಲ್ಲೂ ಅವನ ಮತದಂತೆ ನಾನು ಹೋಗದಿದ್ದಲ್ಲಿ ನನ್ನ ಕಾರ್ಯವನ್ನು ಅವನು ಸಹನೆಯಿಂದ ನೋಡಬೇಕು. ಮೊನ್ನೆ ಶ್ರೀ ವಿನೋಬಾ ಭಾವೆಯವರು ತಮ್ಮ ಬಗ್ಗೆ ಹೇಳಿಕೊಂಡದ್ದನ್ನು ನಾನೀಗ ನನಗೂ ಅನ್ವಯಿಸಿಕೊಳ್ಳುತ್ತೇನೆ. ನಾನು ಗಾಂಧಿಯವರಿಂದ ಬಹಳ ಸಂಗತಿಗಳನ್ನು ಅರಿತಿದ್ದೇನೆ. ಬಹುಶಃ ಉಳಿದವರಿಂದಲ್ಲೂ ಅಷ್ಟನ್ನು ಅರ್ಜಿಸಿರಲಾರೆ. ಆದರೂ ಇತರರಿಂದ ಕಲಿತದ್ದೂ ನನ್ನಲ್ಲಿ ಬಹಳ ಮಟ್ಟಿಗೆ ಇದೆ. ಅವೆಲ್ಲ ಸಮರಸ ಹೊಂದಿ ನನ್ನ [illegible] ಭಾಗವಾಗಿ ನಿಂತಿವೆ. ಅದುದರಿಂದ ನಾನು ಹೇಳುವದೆಲ್ಲ ಗಾಂಧಿಯವರು ಹೇಳಿದ್ದು ಇಲ್ಲವೆ ಹೇಳಬಹುದೆನಿಸುವುದು ಎನ್ನಲಾಗದು. ಅದು ಸತ್ಯ, ಪ್ರೀತಿ ಮತ್ತು ಶಾಂತಿಗಾಗಿ ಹೇಳಿದ್ದಾದರೆ ಅಷ್ಟೇ ಸಾಕು.

ವರ್ಧಾ, ೨೩-೩-೪೮ ....ಕಿ. ಜ. ಮಶ್ರೂವಾಲ

ರಾಷ್ಟ್ರೀಯ ಸಪ್ತಾಹ

ರಾಷ್ಟ್ರಪತಿ ರಾಜೇಂದ್ರಪ್ರಸಾದರು ನಾಳೆ ಬರುವ ರಾಷ್ಟ್ರೀಯ ಸಪ್ತಾಹದ ಆಚರಣೆಯ ಸಂಬಂಧದಲ್ಲಿ ಈ ಕೆಳಗಿನ ಬಿನ್ನಹವನ್ನು ಜನತೆಯ ಮುಂದಿಟ್ಟಿದ್ದಾರೆ:—

೬ ರಿಂದ ೧೩ ನೆಯ ಏಪ್ರಿಲ್ ವರೆಗೆ ನಾವು ರಾಷ್ಟ್ರೀಯ ಸಪ್ತಾಹವನ್ನು ಆಚರಿಸುತ್ತ ಬಂದು ಇಂದಿಗೆ ಸುಮಾರು ೩೦ ವರ್ಷವಾಯಿತು. ಈ ವಾರದಲ್ಲಿ ಗಾಂಧೀಜಿಯವರು ನಾಡಿನ ಉದ್ದಗಲ ಬಹು ದೊಡ್ಡ ಆಂದೋಲನವನ್ನು ಈ ನಾಡಿಗರ ಹಕ್ಕು ಸ್ವಾಭಿಮಾನ, ಸ್ವಾತಂತ್ರ್ಯಗಳ ಸ್ಥಾಪನೆಗಾಗಿ ಹೂಡಿದರು. ಸ್ವಾತಂತ್ರ್ಯ ಸಾಧನೆಗಾಗಿ ನಾವು ಅವರ ನೇತೃತ್ವದಲ್ಲಿ ಅನೇಕ ಸತ್ಯಾಗ್ರಹ ಚಳವಳಗಳಲ್ಲಿ ಹೋರಾಡಬೇಕಾಯಿತು. ನಾವು ಸತ್ಯಾಗ್ರಹ ಮಗ್ನರಾಗಿರದಾದ ಈ ವಾರವನ್ನು ರಚನಾತ್ಮಕ ಕಾರ್ಯಕ್ರಮದ ಯಾವುದಾದರೊಂದು ವಿಭಾಗವನ್ನು ಆಚರಣೆಗೆ ತರಲು ಬಳಸಿಕೊಳ್ಳಲಾಗುತ್ತಿತ್ತು. ಈಗ ಈ ವಾರಕ್ಕೆ ಭಿನ್ನವೂ ವಿಶಿಷ್ಟವೂ ಆದ ಪ್ರಾಮುಖ್ಯ ಬಂದಿದೆ. ಇದೊಂದು ಸ್ಮಾರಕವೂ ಪುನರರ್ಪಣಾತ್ಮಕವೂ ಆದ ಸಪ್ತಾಹವೆನಿಸಬೇಕಾಗಿದೆ. ಇದರ ಆಚರಣೆಗೆ [illegible] ಮಹತ್ವವುಂಟಾಗಿದೆ. ಆದುದರಿಂದ ಗಂಭೀರಭಾವದಿಂದಲೂ ಉತ್ಸಾಹದಿಂದಲೂ ಅದನ್ನು ಆಚರಿಸಬೇಕಾಗಿದೆ. ಎರಡು ಸಂಗತಿಗಳಿಗಾಗಿ ಈ ವಾರವನ್ನು ಬಳಸಬೇಕೆಂದು ನಾನು ಎಲ್ಲ ಕಾಂಗ್ರೆಸ್ ಸಂಸ್ಥೆಗಳನ್ನು ಕೇಳಿಕೊಳ್ಳುತ್ತೇನೆ. ಜಾತೀಯ ಶಾಂತಿ ಮತ್ತು ಪರಸ್ಪರ ಹೊಂದಿಕೆಗಳಿಗಾಗಿ ನಾಡಿನಲ್ಲೆಲ್ಲ ಚಳವಳವಾಗಬೇಕು. ಇದನ್ನು ಮುಖ್ಯತಃ ಹಿಂದು, ಮುಸಲ್ಮಾನ ಮತ್ತು ಶೀಖರಲ್ಲಿ ತೊಂದರೆಗೆ ಕಾರಣವಾದ ಸ್ಥಳೀಯ ಪ್ರಶ್ನೆಗಳನ್ನು ಕಿತ್ತು ಹಾಕಿ ಪರಸ್ಪರ ಭ್ರಾತೃಭಾವವುಂಟಾಗುವಂತೆ ಪ್ರಚಾರ ಮಾಡುವುದರಿಂದ ಸಾಧಿಸಬಹುದಾಗಿದೆ.

ಈ ವಾರವನ್ನು ಗಾಂಧಿ ರಾಷ್ಟ್ರೀಯ ಸ್ಮಾರಕ ನಿಧಿಗಾಗಿಯೂ ಬಳಸಬೇಕು. ಕೇಂದ್ರ ಸಮಿತಿಯು ಆಗಲೇ ಪ್ರಾಂತೀಯ ಮತ್ತು ಸಂಸ್ಥಾನಿಕ ಸಮಿತಿಗಳನ್ನು ನಿಯಮಿಸಿ ಬಿಟ್ಟಿದೆ. ಅವು ವಾರಾರಂಭದ ಹೊತ್ತಿಗೆ ಸ್ಥಳೀಯ ಸಮಿತಿ ಮತ್ತು ಅಧಿಕಾರಿಗಳನ್ನು ನಿಯಮಿಸಿಬಿಟ್ಟಿರುತ್ತವೆಂದು ನಂಬಲಾಗಿದೆ.

ಕೊನೆಯ ಪಕ್ಷ ೧೦ ದಿನಗಳ ಆದಾಯವನ್ನು ನಿಧಿಗೆ ಅರ್ಪಿಸಬೇಕೆಂದು ಕೇಂದ್ರ ಸಮಿತಿಯು ಎಲ್ಲರನ್ನೂ ಪ್ರಾರ್ಥಿಸಿಕೊಂಡಿದೆ. ದೇಶವ್ಯಾಪಕವಾಗಿ ವ್ಯಕ್ತಿಗಳಿಂದ ಈ ವಂತಿಗೆಯನ್ನು ಕಲೆಹಾಕಲು ತಕ್ಕ ಕ್ರಮವನ್ನು ಕೈಕೊಳ್ಳಬೇಕು. ರಶೀದಿ ಕೊಟ್ಟ ಹೊರತು ಹಣ ಕೊಡಬಾರದು ಮತ್ತು ಅಧಿಕೃತ ಒಟ್ಟುಗಾರರಿಗಲ್ಲದೆ ಅನ್ಯರಿಗೆ ಕೊಡಕೂಡದು. ಹೆಸರಿಸಲಾದ ಅಧಿಕೃತ ಬ್ಯಾಂಕಿನಲ್ಲಿ ಸಮಿತಿಗಳೂ ಒಟ್ಟುಗಾರರೂ ದಿನದಿನ ಕಲೆಹಾಕಿದ ಹಣವನ್ನು ತೇವಿಡಬೇಕು. ಈ ವಾರದೊಳಗೆ ಕೊಡಲು ಇಚ್ಛಿಸುವ ಎಲ್ಲರನ್ನೂ ಸಮೀಪಿಸಲು ಕೆಲಸಗಾರರಿಗೆ ಸಾಧ್ಯವಾಗದೆಂಬ ಹೆದರಿಕೆಯಿದೆ. ಆದುದರಿಂದ ಕಾಲಾವಧಿಯನ್ನು ಹೆಚ್ಚಿಸಬಹುದು ಮತ್ತು ರಾಷ್ಟ್ರೀಯ ವಾರದ ಬದಲು ರಾಷ್ಟ್ರೀಯ ಪಕ್ಷವನ್ನು ಇಟ್ಟುಕೊಂಡು ಹೆಚ್ಚು ಕೆಲಸ ಮಾಡಬಹುದು. ಒಟ್ಟುಹಾಕುವುದು ಈ ಪಕ್ಷದಲ್ಲಿ ಮುಗಿಯಲಾರದಾದರೂ ಅದೊಂದು ಪ್ರಾರಂಭ ಹಾಕಿಕೊಟ್ಟಂತಾಗುವುದೆಂದು ನಂಬಲಾಗಿದೆ.

ಸಂಯುಕ್ತ ಪ್ರಾಂತದಲ್ಲಿ ಕೃಷಿಪುನರುದ್ಧಾರ

ಸಂಯುಕ್ತ ಪ್ರಾಂತದಲ್ಲಿ ಕೃಷಿ ಪುನರುದ್ಧಾರದ ಬಗ್ಗೆ 'ಗಂಗಾ ಖದಿರ ಮತ್ತು ನಯಿನೀತಲ ತಾರಾಯಿ' ಎಂಬ ಬೃಹದ್ಯೋಜನೆಯೊಂದನ್ನು ಮಾಡಲಾಗಿದೆ. ಗಂಗಾ ಖದಿರ ಮತ್ತು ತಾರಾಯಿ ಪ್ರದೇಶಗಳಲ್ಲಿ ಭೂಮಿಯನ್ನು ನೇಗಿಲಿಂದ ಉಳಲು ಯೋಗ್ಯವನ್ನಾಗಿ ಮಾಡಬೇಕಾದರೆ ಅನುಕ್ರಮವಾಗಿ ೨ ಮತ್ತು ೫ ವರ್ಷಗಳ ವರೆಗೆ ಟ್ರ್ಯಾಕ್ಟರಿನಿಂದ ಮಣ್ಣನ್ನು ಹದಗೊಳಿಸಬೇಕಾಗುತ್ತದೆ. ಈ ವರ್ಷದ ನಡುಮಳೆಗಾಲ ಬರುವುದರೊಳಗೆ ೧೦ ಸಾವಿರ ಎಕರೆ ಜಮೀನನ್ನು ಒಕ್ಕಲಿಗರಿಗೆ ಒಪ್ಪಿಸಲಾಗುವುದು. ೪ ಸಾವಿರ ಎಕರೆಗೆ ಒಂದು ಹಳ್ಳಿಯೆಂದು ಕರೆಯಲಾಗುತ್ತದೆ. ಅವುಗಳಲ್ಲಿ ಸುಮಾರು ೧ ಸಾವಿರ ಎಕರೆಯಷ್ಟು ನೆಲ, ಮನೆ, ರಸ್ತೆ, ತೋಟ ಬಯಲು, ಹುಲ್ಲುಗಾವಲು, ಕಟ್ಟಿಗೆ, ನಾಟ ಇತ್ಯಾದಿಗಳಿಗಾಗಿ ಮೀಸಲಾಗುತ್ತದೆ. ಉಳಿದ ೩ ಸಾವಿರ ಎಕರೆಗಳನ್ನು ೭೫೦ ಎಕರೆಗಳ ನಾಲ್ಕು ಗದ್ದೆಗಳನ್ನಾಗಿ ವಿಭಜಿಸಲಾಗುತ್ತದೆ. ಆ ಪ್ರತಿಯೊಂದು ಗದ್ದೆಯನ್ನೂ ಮತ್ತೆ ಹತ್ತು ಎಕರೆಗಳ ಹಾಳೆಗಳನ್ನಾಗಿ ವಿಂಗಡಿಸುವ ಯೋಜನೆಯಿದೆ. ಅಂಥ ಒಂದೊಂದು ಹಾಳೆ ಒಬ್ಬೊಬ್ಬ ಒಕ್ಕಲಿಗನಿಗೆ ಇದಲ್ಲದೆ ಅವನಿಗೆ ಮನೆ, ಹಿತ್ತಲ, ಹುಲ್ಲುಗಾವಲು, ಕಟ್ಟಿಗೆ ನಾಟ ಇತ್ಯಾದಿಗಳನ್ನು ಜಮೀನಿನ ಪ್ರಮಾಣದಂತೆ ಕೊಡಲಾಗುವುದು. ಸಮ ಪ್ರಮಾಣದ ಮನೆಗಳನ್ನು ವಾಸಮಾಡ ಬರುವವರಿಗೆ ಕಟ್ಟಿಸಿಕೊಟ್ಟು ನಿಧಾನವಾಗಿ ಅವರಿಂದ ಸಾಲ ವಾಪಸು ಪಡೆದುಕೊಳ್ಳಬೇಕೆಂದು ಸೂಚನೆ ಇದೆ.

ಈ ಯೋಜನೆಗೆ ಒಟ್ಟು ೧॥ ಕೋಟಿ ರೂಪಾಯಿಗಳು ಅಗತ್ಯ. ಅದನ್ನು ಪ್ರಾಂತ ಮತ್ತು ಕೇಂದ್ರ ಸರಕಾರಗಳು ಪೂರೈಸುವುದಾಗಿ ಒಪ್ಪಿವೆ. ಈ ಯೋಜನೆ ಪೂರ್ಣವಾದಲ್ಲಿ ಇದರಿಂದ ವರ್ಷಕ್ಕೆ ೫॥ ಲಕ್ಷ ಮಣ ಆಹಾರ ಧಾನ್ಯಗಳನ್ನೂ ೮೦ ಲಕ್ಷ ಮಣ ಕಬ್ಬನ್ನೂ ಬೆಳೆಯಬಹುದೆಂದು ಹೇಳಲಾಗುತ್ತದೆ.

ಇಷ್ಟಲ್ಲದೆ ಒಕ್ಕಲಿಗರ ಸೌಕರ್ಯವನ್ನು ಹೆಚ್ಚಿಸಲು ಮಲೇರಿಯ ನಿವಾರಕ ಯೋಜನೆ, ಕೊಳೆನೀರನ್ನು ತೆಗೆದು ಹಾಕುವುದು, ಕಾಲುವೆ ತೋಡಿಸುವುದು, ಕುಡಿಯುವ ನೀರಿನ ವ್ಯವಸ್ಥೆ, ಕಾಡುಗಳನ್ನು ಕಡಿದು ಬಯಲು ಮಾಡುವುದು, ಹಳ್ಳಿಗಳ ಸ್ಥಳ ನಿಶ್ಚಯಿಸುವದು ಮುಂತಾದ ಹಲವು ಕಾರ್ಯಕ್ರಮಗಳನ್ನು ಸರಕಾರವು ದೃಷ್ಟಿಯಲ್ಲಿಟ್ಟುಕೊಂಡಿದೆ. ಅಲ್ಲದೆ, ಹಂದಿ, ಆನೆ ಮೊದಲಾದ ಪ್ರಾಣಿಗಳು ಬಂದು ಫಸಲನ್ನು ಹಾಳುಮಾಡದಂತೆ ಕಲ್ಲಿನ ಮತ್ತು ಮುಳ್ಳುತಂತಿಯ ಬೇಲಿಗಳನ್ನು ಹಾಕಲಾಗುತ್ತದೆ. ಮತ್ತು ಒಕ್ಕಲಿಗರಿಗೆ ಬಂದೂಕು ಲೈಸೆನ್ಸನ್ನು ಯಥೇಚ್ಛವಾಗಿ ಕೊಡಬೇಕೆಂದು ಸೂಚಿಸಲಾಗಿದೆ. ಮಳೆ ಬರದಿದ್ದರೆ ಬೇಸಾಯಕ್ಕೆ ನೀರಿನ ತೊಂದರೆಯಾಗಬಾರದೆಂದು ಪಂಪಿನ ಬಾವಿಗಳನ್ನು ಹೆಚ್ಚು ಹೆಚ್ಚಾಗಿ ತೋಡಿಸಲಾಗುವುದು.

ಮೇಲೆ ಹೇಳಿದ ಸೌಕರ್ಯಗಳಲ್ಲದೆ ಗೋರಕ್ಷಣ, ಹಾಲು ಹೈನಗಳ ತಯಾರಿಕೆ, ಮಿಶ್ರ ಕೃಷಿ, ಕೋಳಿ ಸಾಕುವುದು, ಮೀನುಗಾರಿಕೆ ಮನೆಕೈಗಾರಿಕೆ, ಕಟ್ಟಿಗೆ ನಾಟಗಳಿಗಾಗಿ ಗಿಡ ಹಚ್ಚುವುದು ಮುಂತಾದ ಹಲವಾರು ಜೀವನ ಸಾಧನಗಳನ್ನು ಒಕ್ಕಲಿಗರಿಗೆ ಒದಗಿಸಿಕೊಡಲಾಗುವದು. ಕೊನೆಯದಾಗಿ, ವಿದ್ಯೆ ಮತ್ತು ಔಷಧಗಳನ್ನು ಕೂಡ ಪುಕ್ಕಟೆ ಹಂಚುವ ವ್ಯವಸ್ಥೆಯನ್ನು ಮಾಡಲಾಗುವುದು.

ಸಂಯುಕ್ತ ಪ್ರಾಂತದ ಸರಕಾರವಿಟ್ಟ ಈ ಮುನ್ನಡೆ ಉಳಿದ ಪ್ರಾಂತಗಳಿಗೊಂದು ಮಾದರಿಯಾಗಿದೆ. ಮುಂಬಯಿ ಪ್ರಾಂತಕ್ಕೆ ಸೇರಿದ ಉತ್ತರ ಕನ್ನಡ ಮೊದಲಾದ ಜಿಲ್ಲೆಗಳಲ್ಲಿ ಹಾಳುಬಿದ್ದ ಗದ್ದೆಗಳು ಹೇರಳವಾಗಿವೆ. ಅವುಗಳನ್ನು ಯಾರೂ ಕೂಡ ಮೂಸಿ ನೋಡುವುದಿಲ್ಲ. ಆಹಾರ ಧಾನ್ಯದ ಬೆಳೆಯನ್ನು ಹೆಚ್ಚಿಸಿರಿ ಎಂದು ಕೂಗುವುದರ ಬದಲು ನಿರಾಶ್ರಿತರನ್ನು ನಿರುದ್ಯೋಗಿಗಳನ್ನೂ ಭಿಕ್ಷುಕರನ್ನೂ, ಯುದ್ಧ ನಿವೃತ್ತ ಶಿಪಾಯಿಗಳನ್ನೂ ಕಳಿಸಿ ಅಂಥ ಹಾಳು ಭೂಮಿಗಳನ್ನು ಸಾಗುವಳಿ ಮಾಡಲು ತೊಡಗಿಸಬಾರದೇಕೆ? — '[illegible]'

ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಸಮಿತಿಯ ಸರ್ವಸದಸ್ಯರ ವಿಶೇಷ ಸಭೆ

ಕ. ಪ್ರಾಂ. ಕಾಂ. ಸಮಿತಿಯ ಸರ್ವ ಸದಸ್ಯರ ವಿಶೇಷ ಸಭೆಯು ಹುಬ್ಬಳ್ಳಿಯಲ್ಲಿ ತಾ. ೨೮ ರಂದು ನೆರೆದಿತು. ಹೈದ್ರಾಬಾದ ಸಂಸ್ಥಾನದ ಪರಿಸ್ಥಿತಿಯ ಬಗ್ಗೆ ದೀರ್ಘ ಚರ್ಚೆ ನಡೆದು ಕೇಂದ್ರ ಮತ್ತು ಸಂಬಂಧಪಟ್ಟ ಪ್ರಾಂತಿಕ ಸರಕಾರಗಳು ಕೂಡಲೆ ಕ್ರಮ ಕೈಕೊಳ್ಳಬೇಕು. ಗಡಿಯ ಮೇಲಿನ ಒಕ್ಕೂಟದ ಜನರಿಗೆ ಸೈನ್ಯ ಶಿಕ್ಷಣ ಕೊಟ್ಟು ಶಸ್ತ್ರಾಸ್ತ್ರ ಪೂರೈಸಬೇಕು ಎಂದು ಸಭೆಯು ಠರಾಯಿಸಿತು. ಅಲ್ಲದೆ, ಗಡಿ ಸಂಧಾನ ಸಮಿತಿ, ಮಹಾತ್ಮರ ನಿಧನದ ನಂತರ ಸಂಭವಿಸಿದ ಗಲಭೆಗಳ ಬಗ್ಗೆ ಸಭೆ ಮಹತ್ವದ ನಿರ್ಣಯ ಮಾಡಿತು.

ಈ ಸಭೆಗೆ ಮೈಸೂರು, ಕೊಡಗು ಇವುಗಳ ಕಾಯದೆಮಂಡಲಗಳ ಕರ್ನಾಟಕ ಸದಸ್ಯರು, ಘಟನಾ ಸಮಿತಿಯ ಕರ್ನಾಟಕದ ಸದಸ್ಯರು ಆಮಂತ್ರಿತರಾಗಿದ್ದರು. ಶ್ರೀಗಳಾದ ರಂಗನಾಥ ದಿವಾಕರ, ಜಿನರಾಜ ಹೆಗಡೆ, ತಿ. ರು. ನೇಶ್ವಿ, ಎಚ್. ಕೆ. ವೀರನಗೌಡರು, ಅಂದಾನೆಪ್ಪ ದೊಡ್ಡಮೇಟಿ, ಎಫ್. ಡಿ. ಫೋಂಡೇಕರ್, ಎಸ್. ಸೋಮಣ್ಣ ಮೊದಲಾದವರು ಸಭೆಗೆ ಬಂದಿದ್ದರು.

ಪ್ರಾಂತಾಧ್ಯಕ್ಷರಾದ ಶ್ರೀ ನಿಜಲಿಂಗಪ್ಪನವರು ಅಧ್ಯಕ್ಷಸ್ಥಾನದಲ್ಲಿದ್ದರು. ಮಹಾತ್ಮರ ನಿಧನದ ದುಃಖಸೂಚಕ ಗೊತ್ತುವಳಿಯಾಗಿ ಸಭೆ ಎರಡು ನಿಮಿಷ ಮೌನವಾಗಿ ಎದ್ದು ನಿಂತು ಶ್ರದ್ಧಾಂಜಲಿ ಸಮರ್ಪಿಸಿತು. ಕ. ಪ್ರಾಂ. ಕಾಂ. ಸಮಿತಿಯ ಆರ್ಥಿಕ ಪರಿಸ್ಥಿತಿಯನ್ನು ಭದ್ರಪಡಿಸಲು ಶ್ರೀ ಫೋಂಡಕೆ (ಎಂ. ಎಲ್. ಸಿ.) ಶ್ರೀ ಬಿ. ಡಿ. ಜತ್ತಿ, ಶ್ರೀ ಅಂದಾನೆಪ್ಪ ದೊಡ್ಡಮೇಟಿ, ಶ್ರೀ ಕಲ್ಲಿ ತಿಪ್ಪಣ್ಣ ಶಾಸ್ತ್ರಿ (ಸಮಿತಿಯ ಆಮಂತ್ರಕರು) ಇವರನ್ನೊಳಗೊಂಡ ಒಂದು ಸಮಿತಿಯನ್ನು ರಚಿಸಲಾಯಿತು. ೨೦ ಸಾವಿರದ ವರೆಗೆ ನಿಧಿ ಕೂಡಿಸುವ ಹೊಣೆಯನ್ನು ಈ ಸಮಿತಿಗೆ ಒಪ್ಪಿಸಲಾಗಿದೆ.

ಪಾಲಿಸ್ತಾನದಲ್ಲಿ ಅಮೇರಿಕ

(೬ ನೇ ಪುಟದಿಂದ ಮುಂಬರಿದುದು)

ಕೆಲಸಕ್ಕೆ ಕೈಹಾಕಲಿಲ್ಲ. ಇದೂ ಅದರಂತೆಯೇ ತನಗೆ ಲಾಭವಾಯಿತೆನಿಸಿದ ನೀತಿಯನ್ನು ಮುಂದಿಟ್ಟುಕೊಂಡು ಪರೋಪಕಾರಕ್ಕೆಂದು ಸಾರಿ ಆಂಗ್ಲೋ—ಅಮೇರಿಕನ್ನರು ಜಗದುದ್ಧಾರಕ್ಕೆ (ಒಮ್ಮೊಮ್ಮೆ ಅನಿಮಂತ್ರಿತರಾಗಿ ಕೂಡ) ತೊಡಗುವ ದೃಶ್ಯವು ಇತಿಹಾಸದಲ್ಲಿ ಅಪೂರ್ವವಲ್ಲ. ಬ್ರಿಟಿಶರು ಪಾಲಿಸ್ತಾನದಿಂದ ನಿರ್ಗಮಿಸುವುದಾದರೂ ಸ್ವಾರ್ಥಕ್ಕಾಗಿಯೇ ಎಂಬುದನ್ನು ಹಿಂದೆಯೇ ನಾವು ವಿಶದಪಡಿಸಿದ್ದೇವೆ. ಅರಬ ರಾಷ್ಟ್ರಗಳ ಮಿತ್ರತ್ವವನ್ನೂ ಅಲ್ಲಿಯ ಎಣ್ಣೆಯ ಸವಲತ್ತನ್ನೂ ಕಳೆದುಕೊಳ್ಳಬಾರದೆಂಬುದು ಬ್ರಿಟಿಶ ಮತ್ತು ಅಮೇರಿಕನ್ನರಿಬ್ಬರ ಅಂತರಿಕ ಅಪೇಕ್ಷೆಯೆಂಬುದೊಂದು ಪ್ರಸಿದ್ಧ ರಹಸ್ಯ. ಇನ್ನು ಬಂಡವಾಳಿಗರು, ಕುಶಲರು, ಬಿಳಿಯರು ವ್ಯಕ್ತಿಸಿದ ಯಹೂದಿಗಳನ್ನು ತೀರ ಕೈಬಿಡುವಂತಿಲ್ಲ. ಇಬ್ಬರ ಸ್ನೇಹವೂ ಸ್ವಾರ್ಥ ಸಾಧನೆಗೆ ಅಗತ್ಯವೆನಿಸಿದ್ದೊಂದು ಕಾರಣ ಮತ್ತು ಒಮ್ಮೆ ತಮಗೆ ಲಾಭವಿಲ್ಲದಿದ್ದರೂ ಶತ್ರುವಿಗೆ ಲಾಭವಾಗಕೂಡದು ಎಂಬ ದೃಷ್ಟಿ ಇನ್ನೊಂದು ಕಾರಣ. ಅಮೇರಿಕದಲ್ಲಿ ನಾಳಿನ ಚುನಾವಣೆಯಲ್ಲಿ ಯಹೂದಿಗಳ ಮತವನ್ನು ಕಳೆದುಕೊಳ್ಳದೆ, ರಶಿಯಕ್ಕೆ ಪಾಲಿಸ್ತಾನದಲ್ಲಿ ಹಸ್ತಕ್ಷೇಪ ಮಾಡಗೊಡದೆ, ಜನಸ್ಕೊಳಕ ಅದನ್ನು ಕೆರಳಿಸಿ ಅದು ಉಗ್ರ ಟೀಕೆ ಮಾಡುವಂತೆ ಮಾಡಿ, ಪುನಃ ರಶಿಯದ ವಿರುದ್ಧ ಹೆಚ್ಚುಹೆಚ್ಚಾಗಿ ಯುದ್ಧಸಿದ್ಧತೆ ಮಾಡಿ, ಮುಖಾವಕಾಶಗಳ ಅಧ್ಯಕ್ಷಸ್ಥಾನ ಭದ್ರತೆ ಸಾಧಿಸಿಕೊಳ್ಳುವ ಟ್ರೂಮನ್ನರ ಚಾಣಕ್ಯತಂತ್ರವನ್ನು ಕಾಣದ ರಾಜನೀತಿಜ್ಞನು ಯಥಾಜಾತನೇ ಸರಿ.

ಹಿರಿಯೋಲಗದ ಚಟುವಟಿಕೆಗಳು

ತಾ. ೧೮ ರಂದು ಹಿರಿಯೋಲಗದಲ್ಲಿ ದ. ಆಫ್ರಿಕೆಯ ಹಿಂದೀಯರ ಸತ್ಯಾಗ್ರಹದ ಬಗ್ಗೆ ಗೋವೆಯ ಬಗ್ಗೆ ಪ್ರಶ್ನೋತ್ತರ ನಡೆದವು. ಮುಖ್ಯಮಂತ್ರಿ ಜವಾಹರಲಾಲರು ಪ್ರಶ್ನೆಗಳಿಗೆ ಉತ್ತರ ಕೊಟ್ಟರು. ಗೋವೆಯ ಜನರು ಹಿಂದೀ ಒಕ್ಕೂಟದಲ್ಲಿ ಸೇರಬಯಸುತ್ತಾರೆ. ಅದನ್ನು ತಿಳಿಯಲು ಹಿಂದುಸ್ಥಾನ ಸರಕಾರವೇಕೆ ಸಾರ್ವತ್ರಿಕ ಮತಗಣನೆ ನಡೆಸಬಾರದು ಎಂಬ ಪ್ರಶ್ನೆಗೆ ಉತ್ತರ ಕೊಡುತ್ತ ಪಂಡಿತ ಜವಾಹರಲಾಲರು ಅಂತರ್ದೇಶೀಯ ರಾಜಕೀಯ ನೀತಿಗೆ ಅನುಗುಣವಾಗಿಯೇ ಹಿಂದುಸ್ಥಾನ ಸರಕಾರವು ನಡೆದುಕೊಳ್ಳುವದು. ಕಾರಣ ಗೋವೆಯ ಸಮಸ್ಯೆಯಲ್ಲಿ ಕೈಹಾಕಿ ಸಾರ್ವತ್ರಿಕ ಮತಗಣನೆ ನಡೆಸಕೂಡದು ಎಂದು ಸ್ಪಷ್ಟಪಡಿಸಿದರು.

ನಿರಾಶ್ರಿತ ಮಂತ್ರಿಗಳ ಪರವಾಗಿ ಉತ್ತರ ಕೊಡುತ್ತ ಶ್ರೀ. ಎನ್. ವ್ಹಿ. ಗಾಡಗೀಳರು ಹೀಗೆ ಹೇಳಿದರು. ಕಾಶ್ಮೀರ ಜಮ್ಮೂಗಳಿಂದ ದಾಳಿಗಾರರು ಎಷ್ಟು ಸ್ತ್ರೀಯರನ್ನೂ ಮಕ್ಕಳನ್ನೂ ಅಪಹರಿಸಿದ್ದಾರೆಂಬುದು ನಿಶ್ಚಿತ ತಿಳಿದಿಲ್ಲ. ಆದರೆ ಈ ವರೆಗೆ ಪಾಕಿಸ್ತಾನದಲ್ಲಿ ೪೮೪ ಸ್ತ್ರೀಯರು ಮತ್ತು ೪೧೫ ಮಕ್ಕಳು ಸಿಕ್ಕಿರುವರು ಎಂದು ಹೇಳಿದರು. ಅಪಹೃತ ಸ್ತ್ರೀಯರನ್ನು ಪಾಕಿಸ್ತಾನದಲ್ಲಿ ಮಾರುತ್ತಾರಂತೆ ನಿಜವೇ ಎಂದು ಕೇಳಿದ್ದಕ್ಕೆ ಹಾಗೆ ಆರೋಪಗಳಿವೆ ಆದರೆ ಪಾಕಿಸ್ತಾನ ಸರಕಾರ ಅವನ್ನು ನಿರಾಕರಿಸುವದು ಎಂದರು.

ತಾ. ೧೯ ರಂದು ಹಿರಿಯೋಲಗದಲ್ಲಿ, ಅರ್ಥಸಚಿವ ಶ್ರೀ ಷಣ್ಮುಖಂ ಚೆಟ್ಟಿಯಾರರು ಸಂಸ್ಥಾನ ಮಂತ್ರಿಗಳಾದ ಸರದಾರರ ಪರವಾಗಿ ಕೆಲ ಪ್ರಶ್ನೆಗಳಿಗೆ ಉತ್ತರ ಕೊಟ್ಟರು. ಆಗ ಅವರು, ಹೈದರಾಬಾದದ ಗಡಿಯಲ್ಲಿ ನಡೆದ ಅನಾಹುತಗಳ ಬಗ್ಗೆ ಮತ್ತು ಸಂಸ್ಥಾನದಲ್ಲಿ ನಡೆದ ದಬ್ಬಾಳಿಕೆಯ ಬಗ್ಗೆ ಹೀಗೆ ನುಡಿದರು. ಈ ವಿಷಯಗಳಲ್ಲಿ ಹಿಂದುಸ್ಥಾನ ಸರಕಾರದ ಸಹನೆಗೆ ಒಂದು ಮಿತಿ ಇರುವದೆಂಬ ಮಾತು ನಿಜಾಮರಿಗೂ ಅಲ್ಲಿಯ ಅಧಿಕಾರಿಗಳಿಗೂ ತಿಳಿದಿದೆ. ಜನೇವರಿ ಮತ್ತು ಫೆಬ್ರುವರಿ ತಿಂಗಳುಗಳಲ್ಲಿ ಕೂಡಿ ಹಿಂದುಸ್ಥಾನದ ಗಡಿಯಲ್ಲಿ ೧೬ ದಾಳಿಗಳಾಗಿವೆ. ಪರಿಸ್ಥಿತಿ ವಿಕೋಪಕ್ಕೆ ಹೋದಲ್ಲಿ ಹೈದರಾಬಾದದ ಗಡಿಯ ಒಕ್ಕೂಟದ ಪ್ರಜೆಗಳಿಗೆ ಶಸ್ತ್ರಾಸ್ತ್ರಗಳ ಉಪಯೋಗಕ್ಕೆ ಅಪ್ಪಣೆ ಕೊಡಲಾಗುವದು. ಎರಡೂ ಸರಕಾರಗಳ ನಡುವೆ ಶಿಷ್ಟಸಮ್ಮತ ಬಾಂಧವ್ಯವುಂಟಾಗುವಂತೆ ಹಿಂದುಸ್ಥಾನ ಸರಕಾರವು ಶಕ್ಯವಿದ್ದ ಎಲ್ಲ ಪ್ರಯತ್ನವನ್ನೂ ಮಾಡುವದು ಎಂದು ನೊದಲಾಗಿ ಅರುಹಿದರು.

ಇನ್ನೊಂದು ಸಂದರ್ಭದಲ್ಲಿ ಅರ್ಥಸಚಿವರು ಮಾತನಾಡುತ್ತ ಮಹಾತ್ಮಾಗಾಂಧಿಯವರ ಭಾವಚಿತ್ರದ ಅಚ್ಚೊತ್ತಿದ ೧ ರೂಪಾಯಿ ನೋಟುಗಳನ್ನು ಬೇಗ ಪ್ರಸಿದ್ಧಿಸಲಾಗುವದೆಂದು ಹೇಳಿದರು.

ಆದಾಯಕರ ವಿಚಾರಣಾ ಸಮಿತಿಯ ಮಸೂದೆಗೆ ಅರ್ಥಸಚಿವರು ಒಂದು ತಿದ್ದುಪಡಿ ಮಂಡಿಸಿದರು. ಮಸೂದೆಯನ್ನು ವಿಚಾರಣೆಗೆ ತೆಗೆದುಕೊಳ್ಳಬೇಕೆಂದು ನಿಶ್ಚಯವಾಗಿ ಸಭೆಯು ಸೋಮವಾರ ತಾ. ೨೨ ರ ವರೆಗೆ ಮುಂದರಿಯಿತು.

ತಾ. ೨೨ ರಂದು ೪ ಮಹತ್ವದ ಮಸೂದೆಗಳು ಮಂಡಿಸಲ್ಪಟ್ಟವು ಅವು ಹೀಗಿವೆ. (೧) ವಿಮಾನ ಸಾರಿಗೆ ಕಾನೂನು (೧೯೩೪) ತಿದ್ದುಪಡಿ ಮಸೂದೆ (೨) ಹಿಂದುಸ್ಥಾನ ನೌಕಾ ನಿಯಂತ್ರಣ ಕಾನೂನು (೧೯೪೭) ತಿದ್ದುಪಡಿ ಮಸೂದೆ (೩) ಬ್ಯಾಂಕಿಂಗ ಕಂಪನಿಗಳ ಕಾನೂನು ಕ್ರೋಢೀಕರಿಸುವ ಹಾಗೂ ತಿದ್ದುಪಡಿ ಮಾಡುವ ಮಸೂದೆ (೪) ಹಿಂದುಸ್ಥಾನ ಪ್ರಾಂತಗಳಲ್ಲಿದ್ದ ಆಸ್ತಿಯ ಮೇಲೆ ಕರ ಹೇರುವ ಹಾಗೂ ಕರ ವಸೂಲ ಮಾಡುವ ಬಗ್ಗೆ ಮಸೂದೆ.

ತಜ್ಞ ಸಮಿತಿಯಿಂದ ಪರಿಶೋಧಿತವಾದ ಆದಾಯಕರ ತಿದ್ದುಪಡಿ ಮಸೂದೆಯನ್ನು ಕೆಲ ಮಹತ್ವದ ಶಾಬ್ದಿಕ ಮಾರ್ಪಾಟನೊಂದಿಗೆ ಇಂದೇ ಸ್ವೀಕರಿಸಲಾಯಿತು.

ತಾ. ೨೩ ರಂದು ಪಂಡಿತ ಜವಾಹರಲಾಲರು ಅಣು ಶಕ್ತಿಯ ಸಂಶೋಧನೆ ಮತ್ತು ಅದರಿಂದ ಮಾನವ ಕುಲದ ಕಲ್ಯಾಣ ಈ ಬಗ್ಗೆ ಸರಕಾರಕ್ಕೆ ಅಧಿಕಾರ ಕೊಡಬೇಕೆಂಬ ಮಸೂದೆ ಮಂಡಿಸಿದರು. ಅಣು ಶಕ್ತಿಯ ಸಂಶೋಧನೆಯ ಬಗ್ಗೆ ಗೌಪ್ಯವನ್ನು ಕಾದಿಡಲಾಗುವದಿಲ್ಲವಾದರೂ ಪರರಾಷ್ಟ್ರಗಳೊಡನೆ ವ್ಯವಹರಿಸುವಾಗ ಕೆಲ ಕರಾರು ಹಾಕಬಹುದೆಂದು ಪಂಡಿತರು ಹೇಳಿದರು.

ಹೈದ್ರಾಬಾದದಲ್ಲಿ ಶಸ್ತ್ರಾಸ್ತ್ರ ಮದ್ದು ಗುಂಡುಗಳ ತಯಾರಿಕೆಗೆ ನಿಜಾಮ ಸರಕಾರದ ಬೆಂಬಲವಿದೆಯೆಂಬುದು ತಿಳಿದಿದೆಯಾಗಿ ಮುಖ್ಯ ಮಂತ್ರಿಗಳು ಹೇಳಿದರು. ಈ ಬಗ್ಗೆ ನಿಜಾಮ ಸರಕಾರದೊಡನೆ ಚರ್ಚೆ ನಡೆದಿದೆಯಂತೆ.

ಕಳ್ಳಮಾರ್ಗಗಳಿಂದ ಪಾಕಿಸ್ತಾನಕ್ಕೆ ಹಿಂದುಸ್ಥಾನದ ಸರಕು ಹೋಗದಂತೆ ೯೩ ಹೊಸ ಸುಂಕದಕಟ್ಟೆಗಳನ್ನು ಸ್ಥಾಪಿಸಿರುವದಾಗಿಯೂ ಗಸ್ತಿದಳ ನೇಮಿಸಿರುವದಾಗಿಯೂ ಅರ್ಥಸಚಿವರು ತಿಳಿಸಿದರು.

ದಲಿತ ವರ್ಗದವರಿಂದ ಶಿಷ್ಯವೃತ್ತಿಗಾಗಿ ೧೨೨೫ ಅರ್ಜಿ ಬಂದಿದ್ದು ೫೯೦ ಜನಕ್ಕೆ ಶಿಷ್ಯವೃತ್ತಿ ಕೊಡಲಾಗಿದೆಯೆಂದು ಶಿಕ್ಷಣ ಮಂತ್ರಿ ಮೌ. ಅಝಾದರು ಅರುಹಿದರು. ರಶಿಯ ಮತ್ತು ಇತರ ದೇಶಗಳ ಶಿಕ್ಷಣ ಪದ್ಧತಿಗಳನ್ನು ಅಭ್ಯಸಿಸಲು ಶಿಷ್ಟಮಂಡಲ ಕಳಿಸುವ ವಿಚಾರವನ್ನು ಖಂಡಿತ ಮಾಡಲಾಗುವದೆಂದೂ ಅಝಾದರು ತಿಳಿಸಿದರು.

ಹೋಳಿ ಹಬ್ಬದ (ಈಸ್ಟರ) ನಿಮಿತ್ತ ಸ್ಥಗಿತವಾಗಿದ್ದ ಓಲಗವು ಮತ್ತೆ ತಾ ೨೮ ಕ್ಕೆ ಪ್ರಾರಂಭವಾಯಿತು.

ಈ ಸಲದ ಮುಂಗಡ ಪತ್ರಿಕೆಯನ್ನು ಪರಿಶೀಲನಾ ಸಮಿತಿಯು ನೋಡಿ ಮಾಡಿರುವ ಸೂಚನೆಗಳನ್ನು ಅಂಗೀಕರಿಸಿದರೆ ಮತ್ತೆ ೧೦೪ ಲಕ್ಷ ರೂ. ಗಳ ಕೊರತೆಯಾಗುವದು ಎಂಬುದಾಗಿ ಹೇಳಿ ಅರ್ಥಸಚಿವರು ಪರಿಶೀಲನಾ ಸಮಿತಿಯ ವರದಿಯನ್ನು ಓಲಗದಲ್ಲಿ ಮಂಡಿಸಿದರು.

ವರದಿಯಲ್ಲಿ ಚಹಾಕಾಫಿಗಳ ಮೇಲಿನ ಕರವನ್ನು ಒಂದು ಪೌಂಡಿಗೆ ಒಂದು ಆಣೆಯೆಂದು ಹೇಳಲಾಗಿದೆ. ಇದರಿಂದ ೧೦೫ ಲಕ್ಷ ರೂ. ಆದಾಯ ಕಡಮೆ ಯಾಗುವದು. ಇದರಂತೆ ವನಸ್ಪತಿ ತುಪ್ಪಕ್ಕೆ ಒಂದು ಹಂಡ್ರೆಡ್ವೇಟಿಗೆ ೨॥ ರೂ. ಗಳಿಂದ ೨ ರೂ. ಗಳಿಗೆ ಇಳಿಸಿದ್ದರಿಂದ ೮ ಲಕ್ಷ ರೂ. ಆದಾಯ ಕರಗಿತು. ಎಣ್ಣೆ ನಿರ್ಯಾತದ ಕರ ಒಂದು ಟನ್ನಿಗೆ ೨೦೦ ರೂ. ಇದ್ದುದನ್ನು ೧೬೦ ಕ್ಕೆ ಇಳಿಸಬೇಕೆಂದಿರುವದರಿಂದ ೩೩ ಲಕ್ಷ ರೂ. ಗಳ ಹಾನಿಯಾಗಿದೆ. ೬ ದಾಯದ ಕರ ೨೫೦೦ ರೂ. ಗಳ ಉತ್ಪನ್ನದ ಮೇಲಿದ್ದುದನ್ನು ೩೦೦೦ ರೂ ಗಳ ಆದಾಯಕ್ಕೆ ಏರಿಸಿದ್ದರಿಂದ ೫೨ ಲಕ್ಷ ರೂ. ಹಾನಿಯಾಗುವದು ಈ ಪರಿಶೀಲನಾ ಸಮಿತಿಯ ವರದಿಯ ಮೇರೆಗೆ ಒಟ್ಟು ಹಾನಿ ೨೦೪ ಲಕ್ಷ ರೂ. ಮತ್ತು ಆದಾಯ ೧೫೦ ಲಕ್ಷ ರೂ. ಆಗುವದರಿಂದ ಒಟ್ಟಿನ ಮೇಲೆ ೫೪ ಲಕ್ಷ ರೂ. ಗಳ ಹಾನಿಯಾದಂತಾಯಿತು. ಮತ್ತು ಆದಾಯಕರದಲ್ಲಿ ೫೦ ಲಕ್ಷ ರೂ. ಗಳನ್ನು ಪ್ರಾಂತಗಳಿಗೆ ಕೊಡಬೇಕಾಗುವ ಕಾರಣ ಈ ಹಾನಿಯಲ್ಲಿ ಈ ಹಣವನ್ನೂ ಸೇರಿಸಬೇಕಾಗುವದು. ಹೀಗಾಗಿ ಒಟ್ಟಿಗೆ ೧೦೪ ಲಕ್ಷ ರೂ. ಗಳ ಕೊರತೆಯಾದಂತಾಯ್ತು ಎಂದು ಮೊದಲಾಗಿ ಅರ್ಥ ಸಚಿವರು ನಿರೂಪಿಸಿದರು.

ಇಂದಿನ ಚರ್ಚೆಗೆ ಉತ್ತರಕೊಡುತ್ತ ಅರ್ಥಸಚಿವರು ಹೀಗೆ ನುಡಿದರು

ಅತಿಪ್ರಸರಣವನ್ನು ತಡೆದು ದೇಶವನ್ನು ಗಂಡಾಂತರದಿಂದ ಪಾರು ಮಾಡಲು ತಾವು ಗ್ರಾಮೋದ್ಯೋಗಗಳಿಗೆ ಮೊರೆ ಹೋಗಬೇಕು. ಸರಕಾರಕ್ಕೆ ಸಾಲಬೇಕಾದಾಗ ಈ ಮೊದಲು ಸಿರಿವಂತರನ್ನೂ ಬ್ಯಾಂಕುಗಳನ್ನೂ ಆಶ್ರಯಿಸಲಾಗುತ್ತಿತ್ತು. ಇನ್ನು ಮೇಲೆ ಮಧ್ಯಮ ವರ್ಗದವರಿಂದ ಸಾಲ ದೊರೆವ ವ್ಯವಸ್ಥೆ ಮಾಡಿ ತನ್ನ ಆರ್ಥಿಕ ತಳಹದಿಯನ್ನು ಭದ್ರಗೊಳಿಸಬೇಕೆಂದು ಇಂದಿನ ಸರಕಾರ ಎಣಿಕೆ ಹಾಕುತ್ತಿದೆ.

ಸರಕಾರಕ್ಕೆ ಕರಕೊಟ್ಟು ಲಕ್ಷಾಧೀಶರಾರೂ ಆಗಿರುವದಿಲ್ಲ. ಸರಕಾರವನ್ನು ವಂಚಿಸಿ ವಾಮಮಾರ್ಗದಿಂದಲೇ ನಮ್ಮ ದೇಶದಲ್ಲಿ ಅನೇಕರು ಲಕ್ಷಾಧೀಶರಾಗಿದ್ದಾರೆ. ಯಾಕಂದರೆ ಒಂದು ಲಕ್ಷ ಆದಾಯವಿದ್ದವನಿಂದ ಸರಕಾರವು ೪೮,೩೪೪ ರೂ. ಕರ ಹೀರುತ್ತೇವೆ. ಹತ್ತು ಲಕ್ಷ ಆದಾಯವಿದ್ದವನು ೮.೯೯ ಲಕ್ಷ ರೂ. ಕರ ಕೊಡಬೇಕಾಗುತ್ತದೆ. ೩೦ ಲಕ್ಷ ರೂ. ಆದಾಯವಿದ್ದವನು, ೨೪.೩೭ ಲಕ್ಷ ರೂ. ಗಳ ಕರಕೊಡಬೇಕಾಗುವದು ಹೀಗಿರುವದರಿಂದ ಕರವನ್ನು ಸಲ್ಲಿಸಿದವರು ಸಿರಿವಂತರಾಗುವದು ಸಾಧ್ಯವೇ ಇಲ್ಲ. ಆದರೂ ಸರಕಾರವನ್ನು ವಂಚಿಸಿ ನವಕೋಟಿ ನಾರಾಯಣರಾಗುತ್ತಲೇ ಇದ್ದಾರೆ. ಇದನ್ನು ತಪ್ಪಿಸಲು ನಾವೆಲ್ಲ ದಾರಿ ಹುಡುಕುವಾ. ಗ್ರಾಮೋದ್ಯೋಗಕ್ಕೆ ಪ್ರೋತ್ಸಾಹಕೊಟ್ಟು ಜನರ ಕೊಳ್ಳುವ ಶಕ್ತಿಯನ್ನು ಹೆಚ್ಚಿಸಬೇಕೆಂಬುದೇ ನಮ್ಮ ಗುರಿ. ಹೀಗೆಲ್ಲ ಹೇಳಿ ಪರಿಶೀಲನಾ ಸಮಿತಿಯ ವರದಿಯನ್ನು ಓಲಗ ಒಪ್ಪಬೇಕೆಂದು ಅರ್ಥಸಚಿವರು ಬೇಡಿದರು. ಈ ಮಸೂದೆ ಈ ದಿನ ಸ್ವೀಕೃತವಾಯ್ತು.

ಪ್ರಶ್ನೋತ್ತರಗಳ ಕಾಲಕ್ಕೆ ಈ ದಿನ ಈ ಕೆಳಗಿನ ಅಂಶಗಳು ತಿಳಿದು ಬಂದವು.

ಪಾಕಿಸ್ತಾನದಿಂದ ಬಂದ ೫೨ ಸಾವಿರ ರೇಲ್ವೆ ನೌಕರರನ್ನು ರೇಲ್ವೆ ಕೆಲಸದಲ್ಲಿ ತೆಗೆದುಕೊಳ್ಳಲಾಗಿದೆ.

೧೯೪೮ ಜನೆವರಿಯಿಂದ ಮಾರ್ಚದ ವರೆಗೆ ೮ ಲಕ್ಷ ೮೬ ಸಾವಿರ ಟನ್ ಆಹಾರ ಧಾನ್ಯ ಹಿಂದುಸ್ಥಾನಕ್ಕೆ ಬಂದಿದ್ದು ಇವರಲ್ಲಿ ೭ ಲಕ್ಷ ೩೨ ಸಾವಿರ ಟನ್ ಧಾನ್ಯವನ್ನು ಪ್ರಾಂತಗಳಿಗು ಸಂಸ್ಥಾನಗಳಿಗೂ ಹಂಚಿಕೊಡಲಾಗಿದೆ. ಪರದೇಶಗಳ ಅಕ್ಕಿಗೆ ಪ್ರತಿಯಾಗಿ ೨೪ ಸಾವಿರ ಟನ್ ಧಾನ್ಯಕೊಟ್ಟಿದೆ ಮತ್ತು ಕೇಂದ್ರ ಸರಕಾರದ ಕಡೆಗೆ ೧ ಲಕ್ಷ ೨೦ ಸಾವಿರ ಟನ್ ಧಾನ್ಯ ಕಾಪಿ ಇಡಲಾಗಿದೆ.

ಜಪಾನಕ್ಕೆ ೩೦ ಸಾವಿರ ಟನ್ ಕಲ್ಲಿದ್ದಲಿ ಕೊಟ್ಟು ೧ ಲಕ್ಷ ಕವರುಗಳನ್ನು ಪಡೆದುಕೊಳ್ಳುವ ಬಗ್ಗೆ ನಡೆದ ಮಾತುಕತೆ ಯಶಸ್ವಿಯಾಗಿದ್ದು ಕವರು ಕೊಳ್ಳುವವರು ಇದರ ಲಾಭ ಪಡೆಯಬಹುದಾಗಿದೆ.

ತಾ. ೩೦ ರಂದು ಹಿಂದುಸ್ಥಾನದ ಮುಖ್ಯ ಮಂತ್ರಿಗಳಾದ ಜವಾಹರಲಾಲರು ಓಲಗದಲ್ಲಿ ಒಂದು ಪ್ರಶ್ನೆಗೆ ಉತ್ತರ ಕೊಡುತ್ತ, ಯೋಗ್ಯ ಸಮಯ ಬಂದಾಗ ಹಿಂದುಸ್ಥಾನವು ಪಾಕಿಸ್ತಾನದೊಡನೆ ಸಂಯುಕ್ತ ಸಂರಕ್ಷಣೆಯ ಪ್ರಶ್ನೆಯನ್ನು ಸಂತೋಷದಿಂದ ವಿಚಾರಿಸುವದು ಎಂದು ನುಡಿದರು.

ಹೈದರಾಬಾದದಿಂದ ಬಂದ ನಿರಾಶ್ರಿತರ ಯೋಗಕ್ಷೇಮದ ಬಗ್ಗೆ ಕೇಳಲಾದ ಪ್ರಶ್ನೆಗೆ ಉತ್ತರಕೊಡುತ್ತ ಅದು ಪ್ರಾಂತಿಕ ಸರಕಾರದ ಅಧಿಕಾರದಲ್ಲಿ ಬರುವದರಿಂದ ಕೇಂದ್ರ ಸರಕಾರವು ಆ ವಿಷಯದಲ್ಲಿ ಕೈಹಾಕಿಲ್ಲವೆಂದು ಮುಖ್ಯ ಮಂತ್ರಿಗಳು ಹೇಳಿದರು.

ಪೂರ್ವ ಮತ್ತು ಪಶ್ಚಿಮ ಪಂಜಾಬಗಳ ನಿರಾಶ್ರಿತರ ಆಸ್ತಿಯ ಬಗ್ಗೆ ಕೇಳಿದ ಪ್ರಶ್ನೆಗೆ ಉತ್ತರ ಕೊಡುತ್ತ ಶ್ರೀ ನಿಯೋಗಿಯವರು, ಪಾಕಿಸ್ತಾನ ಹಿಂದುಸ್ಥಾನ ಈ ಎರಡೂ ಪಕ್ಷಕಾರರಲ್ಲಿಯು ನಿರಾಶ್ರಿತರ ಆಸ್ತಿಯ ಬೆಲೆ ಮಾಡಿ ಲೆಕ್ಕಾಚಾರ ತೀರಿಸುವ ಬಗ್ಗೆ ಒಪ್ಪಂದವಾಗುವ ಲಕ್ಷಣಗಳಿವೆ ಎಂದು ಹೇಳಿದರು. ಇನ್ನೊಂದು ಪ್ರಶ್ನೆಗೆ ಉತ್ತರ ಕೊಡುತ್ತ ಕೂಲಿಕಾರ ಖಾತೆಯ ಮಂತ್ರಿ ಶ್ರೀ ಜಗಜೀವನರಾಮರು, ಸರಕಾರದವರು ಔದ್ಯೋಗಿಕ ಶಾಂತಿಯ ಗೊತ್ತುವಳಿಯನ್ನು ಅಮಲಿನಲ್ಲಿ ತರುವ ಬಗ್ಗೆ ಘೋಷಣೆ ಮಾಡಲಿದ್ದಾರೆ. ದಿಲ್ಲಿಯಲ್ಲಿ ಎಪ್ರಿಲ ೧೯ ಕ್ಕೆ ಸೇರಲಿರುವ ಹಿಂದೀ ಕೂಲಿಕಾರರ ಪರಿಷತ್ತಿಗೆ ಹಿಂದುಸ್ಥಾನದ ಎಲ್ಲ ಕೂಲಿಕಾರ ಸಂಘಗಳ ಪ್ರತಿನಿಧಿಗಳೂ ಕಾರಖಾನೆಯೊಡೆಯರ ಪ್ರತಿನಿಧಿಗಳೂ ಬರಲಿದ್ದಾರೆ. ಆಗ ಔದ್ಯೋಗಿಕ ಶಾಂತಿಯ ಗೊತ್ತುವಳಿಯು ಚರ್ಚೆಗೆ ಬರುವದು ಎಂದು ಮೊದಲಾಗಿ ಹೇಳಿದರು.

ಮುಖ್ಯ ಮಂತ್ರಿ ಪಂಡಿತ ನೆಹರು ಅವರು ಸಂಪಿನ ಮಾತೆತ್ತಿ, ಸಂಪಿನಲ್ಲಿ ಸೇರುವ ಸರಕಾರದ ನೌಕರರು ಜನತಾ ದ್ರೋಹಿಗಳೆಂದೂ ಅವರ ಕೃತಿಯ ಬಗ್ಗೆ ಉಗ್ರ ಕ್ರಮ ಕೈಕೊಳ್ಳಲಾಗುವದೆಂದೂ ಗುಡುಗಿದರು. ಈ ಸಂಪುಗಳಲ್ಲಿ ರಾಜಕೀಯ ಸಂಧಿ ಸಾಧಕರ ಕೈವಾಡವಿರುವದಾಗಿ ಹೇಳಿದರು.

ತಾ ೩೧ ರಂದು ಪರಿಶೀಲನಾ ಸಮಿತಿಯು ಒಪ್ಪಿಸಿದ ಆರ್ಥಿಕ ಸೂಚನೆಗಳ ಮಸೂದೆ ಸ್ವೀಕೃತವಾಯಿತು.

ರೇಲ್ವೆ, ಆರೋಗ್ಯ ಹಾಗೂ ಆರ್ಥಿಕ ಖಾತೆಯ ಲೆಕ್ಕ ತಪಾಸಣೆಯ ಬಗ್ಗೆ ಬೇರೆ ಬೇರೆ ಸಮಿತಿಗಳನ್ನು ನೇಮಿಸತಕ್ಕದ್ದೆಂಬ ನಿರ್ಣಯವೂ ಅಂಗೀಕೃತವಾಯಿತು.

ಈ ಬಗ್ಗೆ ಚರ್ಚೆ ನಡೆದಾಗ ಕಡ್ಡೀಪೆಟ್ಟಿಗೆಯ ಮಾತೆತ್ತಿ ಅರ್ಥಸಚಿವರು, ಕ್ವೀನ್ಸ ನಂತೆ ಕಡ್ಡೀಪೆಟ್ಟಿಗೆಗಳನ್ನೂ ಅಂಚೀ ಕಚೇರಿಗಳ ಮೂಲಕವೇ ಮಾರಾಟ ಮಾಡಬಹುದೇನೆಂಬುದನ್ನು ವಿಚಾರಿಸುತ್ತಿದ್ದೇನೆ ಎಂದು ಹೇಳಿದರು.

ತ್ರಿಪುರಾ ಸಂಸ್ಥಾನದ ಮೇಲೆ ಪಾಕಿಸ್ತಾನಿಗಳ ದಾಳಿಯಾದ ಬಗ್ಗೆ ಮತ್ತು ಕಾಶ್ಮೀರ ಸಂಸ್ಥಾನದಲ್ಲಿ ಅಧಿಕಾರಿಗಳ ಕೊಲೆ ಮತ್ತು ತಿಜೋರಿಯ ಲೂಟಿ ಆದ ಬಗ್ಗೆ ಇಂದಿನ ಓಲಗದಲ್ಲಿ ಚರ್ಚೆ ನಡೆದಿತು. ಇವುಗಳ ಬಗ್ಗೆ ಉತ್ತರಕೊಡುತ್ತ ಮುಖ್ಯಮಂತ್ರಿಗಳು, ಇವುಗಳ ಬಗ್ಗೆ ವಿಚಾರಣೆ ನಡೆದಿದ್ದು ಹೆಚ್ಚಿನ ವಿವರಗಳನ್ನು ಸಭಾಸದರ ಅವಗಾಹನೆಗೆ ಕೊಡಲಾಗುವದೆಂದು ನುಡಿದರು.

ಪೆಟ್ರೋಲು ದೀಪ ಮತ್ತು ಕೆಂಪು ಚಿಮಣಿ ಎಣ್ಣೆ ಮತ್ತು ನಾಲ್ಕು ಗ್ಯಾಲನ್ನಿನ ಚಿಮಣಿ ಎಣ್ಣೆಯ ಡಬ್ಬಿಗಳ ಮುಖ್ಯ ಬಂದರದಲ್ಲಿಯ ಮಾರಾಟದ ದರಗಳ ಮೇಲಿನ ಹದ್ದುಬಸ್ತಿನ ನಿಯಂತ್ರಣಗಳನ್ನು ಎಪ್ರಿಲ ೧ ರಿಂದ ತೆಗೆಯಬೇಕೆಂದು ಹಿಂದುಸ್ಥಾನ ಸರಕಾರವು ಗೊತ್ತುಪಡಿಸಿದೆ.

ಮೈಸೂರ ಕಾಂಗ್ರೆಸಿನ ವಿಶೇಷ ಅಧಿವೇಶನ

ಮೈಸೂರ ಕಾಂಗ್ರೆಸ್ಸಿನ ವಿಶೇಷ ಅಧಿವೇಶನವು ಶ್ರೀ. ಸಿದ್ಧಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ತಾ ೩೦ ಕ್ಕೆ ಪ್ರಾರಂಭವಾಯಿತು. ಅಧಿವೇಶನಕ್ಕೆ ಕ. ಪ್ರಾಂ. ಕಾಂ ಸಮಿತಿಯ ಅಧ್ಯಕ್ಷರಾದ ಶ್ರೀ ನಿಜಲಿಂಗಪ್ಪನವರು, ಹೈದರಾಬಾದ ಕಾಂಗ್ರೆಸ ಕ್ರಿಯಾ ಸಮಿತಿಯ ಸದಸ್ಯರಾದ ಶ್ರೀ ಜನಾರ್ದನರಾವ ದೇಸಾಯಿಯವರು ಸಂಸ್ಥಾನ ಮಂತ್ರಿಮಂಡಲದ ಸದಸ್ಯರು ಆಗಮಿಸಿದ್ದರು. ಸ್ವಾಗತಾಧ್ಯಕ್ಷರು ಎಲ್ಲರನ್ನು ಸ್ವಾಗತಿಸುತ್ತ ಹೊಸ ಘಟನೆಯಲ್ಲಿ ನಾಗರಿಕರಿಗೆಲ್ಲ ವಾಕ್ ವಿಚಾರ ಸ್ವಾತಂತ್ರ್ಯಗಳು ದೊರಕುವವು ಎಂದು ಹೇಳಿದರು.

ಅಧ್ಯಕ್ಷ ಶ್ರೀ ಸಿದ್ಧಲಿಂಗಯ್ಯನವರು ಸತ್ಯಾಗ್ರಹ, ಸತ್ಯ, ಅಹಿಂಸೆಗಳು ಕೊನೆಯವರೆಗೆ ಬೇಕೆಬೇಕು. ಮೈಸೂರ ಘಟನಾಸಮಿತಿಯು ಜನಪ್ರತಿನಿಧಿಗಳದೇ ಇದ್ದು ತಕ್ಕ ಘಟನೆಯನ್ನು ಸಿದ್ಧಪಡಿಸುವರು ಅವರನ್ನೇ ಕೇಳಬೇಕಿದೆ ಎಂದು ಮೊದಲಾಗಿ ಹೇಳಿದರು.

ಮಹಾತ್ಮರ ನಿಧನದ ಬಗ್ಗೆ ದುಃಖ ಸೂಚನೆಯ ಗೊತ್ತುವಳಿ ಹೈದರಾಬಾದ ಸರಕಾರವು ಜನರಕ್ಷಣೆಗೆ ಅಸಮರ್ಥವಿದೆ, ಮೈಸೂರವರು ಹೈದರಾಬಾದ ಪ್ರಜೆಗಳಿಗೆ ಬೆಂಬಲ ನೀಡಬೇಕೆಂಬ ಗೊತ್ತುವಳಿ, ಮೈಸೂರ ಜನರ ಆಂದೋಲನಕ್ಕೆ ಯಶಸಿಕ್ಕ ಬಗ್ಗೆ ಅವರನ್ನೂ ಅಭಿನಂದಿಸುವ, ಘಟನೆಯಲ್ಲಿ ಎಲ್ಲ ವರ್ಗದವರಿಗೂ ಸಮಾನ ಹಕ್ಕು ಬಾಧ್ಯತೆಗಳು ಮತ್ತು ಅಲ್ಪ ಸಂಖ್ಯಾಕರಿಗೆ ರಕ್ಷಣೆಯ ಆಶ್ವಾಸನ ಕೊಡುವ ಗೊತ್ತುವಳಿ ಇವೇ ಮೊದಲಾದವು. ಅಂಗೀಕೃತವಾದವು ಅನೇಕರಿಂದ ಅನೇಕ ಗೊತ್ತುವಳಿಗಳು ಮಂಡಿಸಲ್ಪಟ್ಟು ದೀರ್ಘ ಚರ್ಚಾನಂತರ ಅವೆಲ್ಲ ಹಿಂತೆಗೆದು ಕೊಳ್ಳಲ್ಪಟ್ಟವು.

ಕರ್ನಾಟಕದ ಏಕೀಕರಣಕ್ಕೆ ಸಂಪೂರ್ಣ ಬೆಂಬಲ ಮತ್ತು ಸಹಕಾರ ನೀಡಬೇಕೆಂಬ ಗೊತ್ತುವಳಿಯು ಮಾತ್ರ ಯಾವ ಚರ್ಚೆಯೂ ಇಲ್ಲದೆ ಸರ್ವಾನುಮತದಿಂದ ಸ್ವೀಕೃತವಾಯಿತು ಸಂಸ್ಥಾನದಲ್ಲಿ ಕಾಂಗ್ರೆಸ ಸೇವಾದಲಗಳನ್ನು ಸಂಘಟಿಸಬೇಕೆಂದೂ ನಿರ್ಣಯವಾಯಿತು.

ಸಿಕ್ಕ ಸ್ವಾತಂತ್ರ್ಯವನ್ನು ರಕ್ಷಿಸಿ ಕೊಂಡು ಹೋಗುವ ಹೊಣೆ ಸರ್ವರನ್ನೂ ಸೇರಿದ್ದು ಸರ್ವರೂ ಶಕ್ತಿಮೀರಿ ಈ ಬಗ್ಗೆ ಪ್ರಯತ್ನಿಸಬೇಕೆಂದು ಅಧ್ಯಕ್ಷರು ಸಮಾರೋಪ ಭಾಷಣದಲ್ಲಿ ನುಡಿದರು. ಅಧಿವೇಶನವು ಎರಡು ದಿನ ನಡೆದು ತಾ ೩೧ ರಾತ್ರಿ ಮುಕ್ತಾಯವಾಯಿತು.

ವರ್ತಕರು ಲಾಭಬಡಕರಾಗಕೂಡದು

ಹುಬ್ಬಳ್ಳಿಯ ಗಿರಣಿ ಬಟ್ಟೆಯ ವರ್ತಕರ ಸಂಘದ ಅಧ್ಯಕ್ಷರಾದ ಶ್ರೀ. ಪಿ. ಪಿ. ಜವಳಿ ಅವರು ಒಂದು ಪ್ರಕಟನೆ ತೆಗೆದು ಅದರಲ್ಲಿ ವರ್ತಕರು ದೇಶದ್ರೋಹಿಗಳಾಗಬಾರದೆಂದೂ ವರ್ತಕರು ಕೊಟ್ಟ ವಚನಕ್ಕನುಸಾರ ನಿಯಂತ್ರಣ ತೆಗೆಯಲಾಗಿದ್ದು ಈಗ ಮತ್ತೆ ಅವರು ಲಾಭಬಡಕರಾಗಿ ಜನತೆಯ ವಿಶ್ವಾಸವನ್ನು ಕಳೆದುಕೊಳ್ಳುತ್ತಿರುವದು ನಾಚಿಕೆಗೇಡೆಂದೂ ಹೇಳಿದ್ದಾರೆ. ಅವರು ಇನ್ನೂ ಹೇಳಿದ್ದರ ಸಾರ ಹೀಗಿದೆ.

ವರ್ತಕರು ಕೊಟ್ಟ ವಚನವನ್ನು ನಂಬಿ ಕೇಂದ್ರ ಮತ್ತು ಪ್ರಾಂತಿಕ ಸರಕಾರಗಳು ನಿಯಂತ್ರಣಾಜ್ಞೆ ಹಿಂತೆಗೆದುಕೊಂಡರು. ಉತ್ಪಾದಕರೂ ವರ್ತಕರೂ ಲಾಭೈಕ ದೃಷ್ಟಿಯಿಂದ ವ್ಯಾಪಾರ ಮಾಡಬಾರದೆಂದು ಎಚ್ಚರ ಕೊಟ್ಟಿದ್ದರು. ನಿಯಂತ್ರಣ ತೆಗೆದರೆ ಬಟ್ಟೆಬರೆಗಳ ಬೆಲೆ ಇಳಿಯುವವೆಂದೂ ಹೆಚ್ಚು ಲಾಭದ ಆಸೆ ಮಾಡುವದಿಲ್ಲವೆಂದೂ ವರ್ತಕರು ಹೇಳಿದ್ದರು. ಆದರೆ ಇಂದಿನ ಪರಿಸ್ಥಿತಿಯನ್ನು ನೋಡಿದರೆ ತದ್ವಿರುದ್ಧವಾಗಿದೆ. ಈ ಬೆಲೆಗಳ ಏರಿಕೆಗೆ ಉತ್ಪಾದಕರಿಗಿಂತ ಚಿಲ್ಲರೆ ಮಾರಾಟಗಾರರೇ ಹೆಚ್ಚಾಗಿ ಕಾರಣರಾಗಿದ್ದಾರೆ.

ಹುಬ್ಬಳ್ಳಿಯ ಮಟ್ಟಿಗೆ ಹೇಳುವದಾದರೆ ಇಲ್ಲಿಯ ಚಿಲ್ಲರೆ ವರ್ತಕರೆಂದು ನಟಿಸಿದವರೇ ಇಂದು ಎಲ್ಲರಿಗಿಂತ ಲಾಭಬಡಕರಾಗಿರುವದು ಕಂಡುಬರುತ್ತದೆ. ಇದಕ್ಕಾಗಿ ಇಡೀ ವರ್ತಕ ಸಮಾಜವೇ ನಾಚಿಕೆಯಿಂದ ತಲೆ ಕೆಳಗೆ ಹಾಕುವ ಪ್ರಸಂಗ ಬಂದಿದೆ. ಈ ದುರ್ವ್ಯಾಪಾರ ನಿಲ್ಲಲಿ. ಈ ಹೀನ ಮನೋವೃತ್ತಿಯ ವ್ಯಾಪಾರಿಗಳಿಗೆ ಕೊಡಬಾರದೆಂದು ಮುಂಬಯಿ ಗಿರಣಿ ಒಡೆಯರ ಸಂಘದವರು ಮತ್ತು ಬಿನ್ನಿ ಕಂಪನಿಯವರು ನಿರ್ಧರಿಸಿದ್ದಾರೆ. ಜನರು ವರ್ತಕ ವ್ಯವಹಾರವನ್ನು ಶಪಿಸುತ್ತಿದೆ. ಇಂಥ ಹೊತ್ತಿನಲ್ಲಿ ವರ್ತಕರು ಲಾಭಬಡಕತನ ಬಿಟ್ಟು ಸರ್ಕಾರಕ್ಕೆ ನೆರವಾಗಬೇಕು ಎಂದು ಮೊದಲಾಗಿ ಹೇಳಿದ್ದಾರೆ.

ಸಂಚಾಲದ ಅಕ್ಸಿವಿಭಜನಾ ಮಂಡಲದ ತೀರ್ಪು

[illegible]

ಮುದ್ರಾಸ ಶಾಸನ ಸಭೆಯಲ್ಲಿ ಮುಂಗಡ ಪತ್ರಿಕೆಯ ಸ್ವೀಕಾರ

ಬರಗಾಲಕ್ಕೆ ಬೆದರಬೇಕಾಗಿಲ್ಲ

ಮಂತ್ರಿಗಳ ಆಶ್ವಾಸನ

ಮುದ್ರಾಸ ಶಾಸನ ಸಭೆಯು ಮುಂಗಡ ಪತ್ರಿಕೆಯಲ್ಲಿನ ಎಲ್ಲ ಬೇಡಿಕೆಗಳನ್ನು ಸ್ವೀಕರಿಸಿತು [illegible] ಮುಕ್ತಾಯ ಹೊಂದಿತು. ಈ ಸಲದ ಮುಂಗಡ ಪತ್ರಿಕೆಯಲ್ಲಿ [illegible] ರೂಪಾಯಿಗಳನ್ನು ತೆಗೆದುಕೊಂಡಿದ್ದ [illegible] ರೂಪಾಯಿಗಳ ಉಳಿತಾಯದ ಮುಂಗಡ ಪತ್ರಿಕೆಯೆಂದು ಕರೆಯಲು ಮಂತ್ರಿಗಳಿಗೆ ಸಾಧ್ಯವಾಗಿದೆ. ಮುದ್ರಾಸ ಬರಗಾಲ ನಿಧಿಯು ಈಗ [illegible] ಲಕ್ಷ ರೂಪಾಯಿಗಳಿಂದ [illegible] ಲಕ್ಷಕ್ಕೆ ಇಳಿದಿದೆ. [illegible] ಲಕ್ಷ ರೂಪಾಯಿಗಳ ಸಹಾಯ [illegible] ಶಾಸನ ಸಭೆಯಲ್ಲಿ ಚರ್ಚೆ ನಡೆಯಿತು. [illegible] ಪ್ರದೇಶಗಳಲ್ಲಿ ನೀರಾವರಿ ಯೋಜನೆಯನ್ನು ಕೈಕೊಳ್ಳಲು ಈ ಹಣವನ್ನು ಉಪಯೋಗಿಸಲಾಗುವದು. [illegible] ಮಂತ್ರಿಗಳಾದ ಶ್ರೀ [illegible] ರಾಯರು ಈ ಚರ್ಚೆಯನ್ನು ಮುಗಿಸುತ್ತ ಬರಗಾಲ ನಿಧಿಯಲ್ಲಿ ಈಗ ಕೇವಲ [illegible] ಲಕ್ಷ ರೂಪಾಯಿಗಳಿರುವದರಿಂದ ಯಾರೂ ಅಂಜಬೇಕಾಗಿಲ್ಲ; ಬರಗಾಲ ಪರಿಹಾರ ಕೆಲಸ ಪ್ರಾರಂಭಿಸಲು [illegible] ಯೋಜನೆಗಳನ್ನು ನಡೆಯಿಸಿ [illegible] ಸಹಾಯ ಮಾಡಲಾಗುವದು. [illegible]

ಗಡಿಯಲ್ಲಿಯ ದುರ್ಘಟನೆ

[illegible]

ಸಾರ್ವಜನಿಕ ಸುರಕ್ಷಿತತೆ ತಿದ್ದುಪಡಿ ಮಸೂದೆ ದುರುಪಯೋಗವಾಗದಂತೆ ನೋಡಿಕೊಳ್ಳುವ ಆಶ್ವಾಸನ

ಮುಂಬಯಿ ಶಾಸನ ಸಭೆಯ ಕಾರ್ಯಕಲಾಪ

ಮುಂಬಯಿ ಸರಕಾರದ ಗೃಹಮಂತ್ರಿಗಳು ಶಾಸನ ಸಭೆಯಲ್ಲಿ ಕಳೆದ ಸೋಮವಾರ [illegible] ಸಿದ್ಧ ಸುರಕ್ಷಿತತೆ ಕಾಯಿದೆ ತಿದ್ದುಪಡಿ ಮಸೂದೆಯು [illegible] ನೇ ತಾರೀಕಿನ ದಿನ ಶಾಸನ ಸಭೆಯಲ್ಲಿ ಸ್ವೀಕೃತವಾಯಿತು. ಸದ್ಯಕ್ಕೆ ಜಾರಿಯಲ್ಲಿದ್ದ ಈ ಕಾಯಿದೆಯು [illegible] ವಿಸ್ತರಿಸಿ [illegible] ದೊರೆಯುವಂತೆ ಮಾಡುವದೇ ಈ ತಿದ್ದುಪಡಿಯ ಉದ್ದೇಶವಾಗಿದೆ. [illegible]

[illegible]

ಮನೋಹರ ಗ್ರಂಥಮಾಲೆಯ ಶತಗ್ರಂಥೋತ್ಸವ ಸ್ಪರ್ಧೆಗಳ ಪರಿಣಾಮ

ಈ ಗ್ರಂಥಮಾಲೆಯ ಸಂಪಾದಕರಾದ ಶ್ರೀ. ಜಿ. ಬಿ. ಜೋಶಿಯವರು ಶತಗ್ರಂಥೋತ್ಸವದ ನಿಮಿತ್ತ ಸಾಹಿತ್ಯ ಸ್ಪರ್ಧೆಯನ್ನು ಏರ್ಪಡಿಸಿದ್ದರು. ಇಲ್ಲಿ ಕೆಳಗೆ [illegible] ಬಹುಮಾನಗಳು ದೊರೆತಿರುವದಾಗಿ [illegible] ಸಂಪಾದಕರು ತಿಳಿಸಿದ್ದಾರೆ.

೧. ಕಾದಂಬರಿ ಸ್ಪರ್ಧೆ ೨ ನೆಯ ಬಹುಮಾನ, ೨೦೦ ರೂಪಾಯಿ "[illegible]" ಲೇ: ಶ್ರೀ. ಕೆ. ಎ. ಎಸ್. ರಾವ, ಬನಾರಸ.

೩. ನಾಟಕ ಸ್ಪರ್ಧೆ ೨ ನೆಯ ಬಹುಮಾನ, ೨೦೦ ರೂಪಾಯಿ "ಮಗು" ಲೇ: ಶ್ರೀ. ಕೆ. ಎ. ಎಸ್. ರಾವ್, ಬನಾರಸ.

೩. ಸಣ್ಣ ಕತೆಗಳ ಸ್ಪರ್ಧೆ ೨ ನೆಯ ಬಹುಮಾನ ೫೦ ರೂಪಾಯಿ "ಭಕ್ತನ ಕನಸು" ಲೇ: ಶ್ರೀ. ಕೆ. ಎ. ಎಸ್. ರಾವ್, ಬನಾರಸ. ೩ ನೆಯ ಬಹುಮಾನ ೨೫ ರೂಪಾಯಿ "[illegible]" ಲೇ: ಶ್ರೀ. ಕೆ. ಬಿ. ಪಾಟೀಲ, ಬೆಳಗಾವಿ.

೪. ಏಕಾಂಕ ನಾಟಕ ಸ್ಪರ್ಧೆ ೨ನೆಯ ಬಹುಮಾನ ೫೦ ರೂಪಾಯಿ "ತ್ಯಾಗ" ಲೇ: ಶ್ರೀ. ಎಚ್. ಆರ್. ಸುಬ್ರಹ್ಮಣ್ಯ, ಮೈಸೂರು. ೩ ನೆಯ ಬಹುಮಾನ ೨೫ ರೂಪಾಯಿ "ಹಂಚಿಕೆ" ಲೇ: ಶ್ರೀ. ಕೆ. ಎ. ಎಸ್. ರಾವ್, ಬನಾರಸ.


೫. ವ್ಯಕ್ತಿಚಿತ್ರ ಸ್ಪರ್ಧೆ ೧ ನೆಯ ಬಹುಮಾನ, ೨೫ ರೂಪಾಯಿ "ವಿವಾಸ್ಯರು" ಲೇ: ಶ್ರೀ. ಕೆ. ಎ. ಎಸ್. ರಾವ್, ಬನಾರಸ.

೬. ಪ್ರಬಂಧ ಸ್ಪರ್ಧೆ ಬರೆಹಗಳು ಸಾಕಷ್ಟು ಬಾರದ್ದರಿಂದ ನಡೆದಿಲ್ಲ.

೭. ಕಾವ್ಯ ಸ್ಪರ್ಧೆ "ಪುಷ್ಪವಿಶ್ವೇಶ" (ಕಾವ್ಯಸಂಗ್ರಹ) ೫೦ ರೂಪಾಯಿ ಲೇ: ಶ್ರೀ. ಎಚ್. ಆರ್. ಸುಬ್ರಹ್ಮಣ್ಯ, ಮೈಸೂರು. "ನಮಯುಷ್ಪ" (ಖಂಡಕಾವ್ಯ) ೩೦ ರೂಪಾಯಿ ಲೇ: ಶ್ರೀ. ಕೆ. ಎ. ಎಸ್. ರಾವ್, ಬನಾರಸ.

ಅಗ್ಗ ಪ್ರಕಾರವನ್ನು ತೆಗೆದುಕೊಳ್ಳುವರು. ಅಲ್ಲಲ್ಲಿ ಅಗ್ಗದರದ ಅಂಗಡಿಗಳನ್ನು ತೆರೆದು ಬೆಲೆಗಳು ಇಳಿಯುವಂತೆ ನೋಡಿಕೊಳ್ಳುವರೆಂದೂ ಹೇಳಿದರು.

ಹುಬ್ಬಳ್ಳಿ ಶಾಖೆ—ಕೊಪ್ಪೀಕರ ರೋಡ. ಹುಬ್ಬಳ್ಳಿ.



ಹೊಸದಿಲ್ಲಿಯಲ್ಲಿ ಮೈಸೂರಿನ ಮುಖ್ಯ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಹಿಂದುಸ್ಥಾನದ ಸ[illegible]ರಿಗೆ ಮಂತ್ರಿ ಡಾ[illegible] ಜಾನ ಮಥಾಯಿಯೊಡನೆ.



[illegible] ಪೈಕಮಿಶನ್ನರಾಗಿ ಬಂದ ಶ್ರೀ [illegible]



ವ್ಯಾಪಾರ ಪ್ರಪಂಚ

ಮುಂಬಯಿ ಪೇಟೆ ಧಾರಣೆ

ಮುಂಬಯಿ ತಾ. [illegible]

ಬಂಗಾರ	
ಹಯಾರಿ	[illegible]
ಹಯಾರಿ	[illegible]
ಬೆಳ್ಳಿ	
ಹಯಾರಿ	[illegible]
ಡೀಂಬರ	[illegible]
ಸಾವನಿನ	[illegible]
ಎಣ್ಣೆ ಕಾಳುಗಳು	
ಶೇಂಗಾ	[illegible]
ಹೊಸ ಬೆಳೆ	[illegible]
ಅಗಸಿ	[illegible]
ಅಗಸಿ ಎಣ್ಣೆ	[illegible]
ಟೆಕ್ಸಟಾಯಿಲ್ಸ	
ಅಹಮ್ಮದಾಬಾದ ಅಡ್ವಾನ್ಸ	[illegible]
ಮುಂಬಯಿ ಡಾಯಿಂಗ	[illegible]
ಸೆಂಟ್ರಲ ಇಂಡಿಯಾ	[illegible]
ಸೆಂಚುರಿ	[illegible]
ಕುಲಾಬಾ ಲ್ಯಾಂಡ	[illegible]
ಗೋಕಾಕ	[illegible]
ಇಂಡಿಯನ್ ಬ್ಲೀಚಿಂಗ	[illegible]
ಕೋಹಿನೂರು	[illegible]
ಸೊಲಾಪುರ	[illegible]
ಸಿಂಪ್ಲೆಕ್ಸ	[illegible]
ಸ್ವದೇಶಿ	[illegible]
ವಿಷ್ಣು	[illegible]
ಟಾಟಾ ಪವರ	[illegible]
ಟಾಟಾ ಹೈಡ್ರೊ	[illegible]
ಟಾಟಾ ಸ್ಟೀಲ ಡೆಫರ್ಡ್ಸ	[illegible]
ಟಾಟಾ ಸ್ಟೀಲ ಆರ್ಡಿನರಿ	[illegible]
ಪ್ರಿಮಿಯರ ಕನ್‌ಸ್ಟ್ರಕ್ಶನ	[illegible]
ಇಂಡಿಯನ ಆಯರ್ನ	[illegible]
ಬರ್ಮಾ ಕಾರ್ಪೋರೇಶನ	[illegible]
ಇಂಡಿಯನ್ ಕಾಪರ	[illegible]
[illegible] ಇನ್ಶ್ಯುರನ್ಸ	
ನ್ಯೂ ಇಂಡಿಯಾ ಇನ್‌ಶುರನ್ಸ	[illegible]
ಬ್ಯಾಂಕುಗಳು	
ಸೆಂಟ್ರಲ	[illegible]
ಇಂಪಿರಿಯಲ (ಅಂಶತಃ)	[illegible]
ಇಂಪೀರಿಯಲ (ಪೂರ್ಣ)	[illegible]
ಇಂಡಿಯಾ	[illegible]

ಕೊಲ್ಹಾಪುರ ಪೇಟೆ

[illegible]

ಬೆಲ್ಲದಚ್ಚು	[illegible]	[illegible]
ಬೆಲ್ಲದ [illegible]	[illegible]	[illegible]
ನೆಲಗಡಲೆ [illegible]	[illegible]	[illegible]
ನೆಲಗಡಲೆ [illegible]	[illegible]	[illegible]

[illegible]

ಶಿವಮೊಗ್ಗ

[illegible]

ಬೆಳಗಾಂವ ಜಿಲ್ಲೆಯ ಕಾಯಿಪಲ್ಲೆಗಳ ಬೆಳೆಯ ಪ್ರದರ್ಶನ

ಡೆಪ್ಯುಟಿ ಕಮಿಶನರ [illegible]

[illegible]

[illegible] ಅಗ್ರಿಕಲ್ಚರಲ್ ಅಧಿಕಾರದಾರ ಶ್ರೀ [illegible] ದವೆ, ಶ್ರೀ ಎನ್. ಸಿ. ಪಾಟೀಲರು, [illegible] ಎನ್. ಕರಡಿ, ಶ್ರೀ ಆರ್. ಎಸ್. [illegible] ಶೆಟ್ಟಿ, ವಕೀಲ, ಶ್ರೀ ರಣಗಟ್ಟಿಕರ [illegible] ಕಾಮಗಾರ ಬೆಳವಡಿ ಮೊದಲಾದವರು [illegible] ನದ ಉದ್ದೇಶ ಒಕ್ಕಲತನದ ಸುಧಾರಣೆ, [illegible] ಗಳೆದ [illegible], [illegible] ಭೂ ಸುಧಾರಣೆಯ ಪದ್ಧತಿ, ರೈತರ ಹುಟ್ಟುವಳಿಯ ಲಾಭದಾಯಕ ಮಾರಾಟಗಳ ಯೋಜನೆಗಳ ಬಗೆ ಮಾತನಾಡಿದರು.

[illegible] ಒಕ್ಕಲತನದ [illegible] ಧನೆ ಮತ್ತು ಪ್ರಯೋಗ ದೃಷ್ಟಿಯಿಂದ ಮಾಡಿದ ಶೇಂಗಾ, [illegible] ಕಬ್ಬು, ಬಿಳೇ ಮುಲ್ಲಂಗಿ [illegible] ಜೋಳ, [illegible] ಪತ್ತಿ ಇವುಗಳ ಮಹತ್ವವನ್ನೂ ಆಹಾರ [illegible] ಜೀವನ ಸತ್ವವನ್ನು [illegible] ಸುವ ದೇಶಿ ಮತ್ತು ವಿದೇಶಿ ಕಾಯಿಪಲ್ಲೆಗಳನ್ನು ಬೆಳೆಯುವ ಮಹತ್ವವನ್ನು [illegible] ತಿಳಿಸಿ ಹೇಳಿದರು.

ಕಾಯಿಪಲ್ಲೆ ವಿಭಾಗದ ಅಸಿಸ್ಟಂಟರಾದ ಶ್ರೀ ಆರ್. ಎಸ್. [illegible] ಫಾರ್ಮಿಂಗ ಅಮಲದಾರರು, ಅರಭಾವಿ ಒಕ್ಕಲತನದ ಶಾಲೆಯ ವಿದ್ಯಾರ್ಥಿಗಳು ಬಂದು ಪ್ರದರ್ಶನಕ್ಕೆ ಮತ್ತಿಷ್ಟು ಶೋಭೆಯನ್ನುಂಟು ಮಾಡಿದರು.

[illegible]

ರಾಷ್ಟ್ರಪತಿ ರಾಜೇಂದ್ರ ಪ್ರಸಾದರು

[illegible]

[illegible]

ಹಿಂದುಸ್ಥಾನ

ಮುಂಬಯಿ

ಮಹಾರಾಷ್ಟ್ರ, ಗುಜರಾತ, ಮತ್ತು ಕರ್ನಾಟಕಗಳಲ್ಲಿ ವಾಚನಾಲಯಗಳ ಮೇಲ್ವಿಚಾರಣೆಗಾಗಿ ಮೂರು ಪ್ರಾದೇಶಿಕ ಸಲಹಾ ಮಂಡಲಗಳು ರಚಿಸಲ್ಪಡುವವೆಂದು ಮುಂಬಯಿ ಸರಕಾರದ ಪ್ರಸಿದ್ಧಿ ಖಾತೆಯು ಪತ್ರಿಕೆಗಳಿಗೆ ತಿಳಿಸುತ್ತದೆ. ಸಲಹಾ ಮಂಡಲದಲ್ಲಿ ಕೆಳಗಿನಂತೆ ಸದಸ್ಯರನ್ನು ಸೇರಿಸಿಕೊಳ್ಳಲಾಗುವದು.

ಕೇಂದ್ರ ಸಲಹಾ ಮಂಡಲದ ಪ್ರತಿನಿಧಿ (೧) ಸರಕಾರದ ಪ್ರತಿನಿಧಿಗಳು (೪) ಪ್ರಾದೇಶಿಕ ವಾಚನಾಲಯಗಳ ಸಂಘ ಮತ್ತು ವಾಚನಾಲಯಗಳ ಪ್ರತಿನಿಧಿಗಳು (೩) ಪ್ರಾದೇಶಿಕ ವಾಚನಾಲಯಕ್ಕೆ ಒಂದು ಸಾವಿರ ರೂ. ಧನ ಸಹಾಯ ಕೊಟ್ಟವರ ಪ್ರತಿನಿಧಿಗಳು, ಪ್ರಾದೇಶಿಕ ಪ್ರೌಢ ಶಿಕ್ಷಣ ಸಮಿತಿಯ ಪ್ರತಿನಿಧಿ (೧) ಮಂಡಲದ ಅಧಿಕಾರದ ಅವಧಿ ೩ ವರ್ಷ. ಮಂಡಲವು ಮತ್ತೆ ಇಬ್ಬರು ಸದಸ್ಯರನ್ನು ನೇಮಿಸಿಕೊಳ್ಳಬಹುದು.

ಪಾಕಿಸ್ತಾನದಿಂದ ಬಂದ ನಿರಾಶ್ರಿತ ವಿಧವೆಯರಿಗಾಗಿ ಕುರ್ಲಾದಲ್ಲಿ ಒಂದು ಉದ್ಯೋಗಿಕ ಆಶ್ರಮವನ್ನು ಪ್ರಾರಂಭಿಸಲಾಗುತ್ತಿದೆ. ಇದಕ್ಕಾಗಿ ಮುಂಬಯಿ ನಗರಾಧ್ಯಕ್ಷರ ಪರಿಹಾರ ನಿಧಿಯಿಂದ ೬೫ ಸಾವಿರ ರೂ. ಧನ ಸಹಾಯ ಕೊಡಲಾಗಿದೆ. ಇದರಲ್ಲಿ ೫ ಸಾವಿರ ವಿಧವೆಯರಿಗೆ ಆಶ್ರಯಕೊಡುವ ವ್ಯವಸ್ಥೆ ಮಾಡಲಾಗುವದು. ಆಶ್ರಮವಾಸಿಗಳು ಸ್ವಾವಲಂಬಿಯಾಗುವಂತೆ ಅವರಿಗೆ ಕಚ್ಚಾ ಮಾಲು ಪೂರೈಸಿ ಪಕ್ಕಾ ಮಾಲು ತಯಾರಿಸಲು ಶಿಕ್ಷಣ ಕೊಡಲಾಗುವದಲ್ಲದೆ ಅವರು ಸಿದ್ಧಪಡಿಸಿದ ಮಾಲುಗಳಿಗೆ ತಕ್ಕ ಪ್ರತಿಫಲ ಕೊಡಲಾಗುವದು.

ಪಶ್ಚಿಮ ಬಂಗಾಲ ಸರಕಾರವು ಕಮ್ಯುನಿಸ್ಟ ಸಂಸ್ಥೆಯನ್ನು ಅಕ್ರಮ ಕೂಟವೆಂದು ಸಾರಿದುದರಿಂದ ಉಳಿದ ಪ್ರಾಂತಿಕ ಸರಕಾರಗಳೂ ಕಮ್ಯುನಿಸ್ಟರ ವಿರುದ್ಧ ಇದೇ ಕ್ರಮ ಕೈಕೊಳ್ಳಲಿವೆಯೆಂದು ತಿಳಿಯುತ್ತದೆ. ಈ ವಿಷಯು ಬೇಗ ಚರ್ಚಿತವಾಗಿ ಕೊನೆಯ ನಿರ್ಧಾರ ಮಾಡಲಾಗುವದು.

ಸುರತದ ಬೀಡಿಯ ಕೆಲಸಗಾರರು ನಡೆಸಿದ ಸಂಪು ಹೊಸ ರೂಪ ತಾಳಿದೆ. ಅವರು ತಾವೇ ಬೀಡಿಗಳನ್ನು ತಯಾರಿಸಿ ಸಾರ್ವಜನಿಕರಿಗೆ ಮಾರಬೇಕೆಂದು ಗೊತ್ತು ಮಾಡಿದ್ದಾರೆ. ಕೂಲಿಯ ದರದಲ್ಲಿ ಹೆಚ್ಚಳವಾಗಬೇಕೆಂದು ಅವರ ಬೇಡಿಕೆಯಿದೆ.

ಸಮತಾವಾದಿ ಪಕ್ಷದ ವಕ್ತಾರರಾದ ಶ್ರೀ. ಅಶೋಕ ಮೆಹ್ತಾರು ಒಂದು ಪ್ರಕಟನೆ ಹೊರಡಿಸಿ ಪಶ್ಚಿಮ ಬಂಗಾಲ ಸರಕಾರದವರು ಕಮ್ಯುನಿಸ್ಟ ಪಕ್ಷವನ್ನು ಅಕ್ರಮ ಸಂಸ್ಥೆಯೆಂದು ಸಾರಿದ್ದು ಸರಕಾರದ ದೊಡ್ಡ ತಪ್ಪೆಂದು ಹೇಳಿದ್ದಾರೆ.

ಗೋಧ್ರಾದಲ್ಲಿ ತಾ. ೨೫ರ ಬೆಳಿಗ್ಗೆ ದೊಂಬಿ ಸಂಭವಿಸಿ ನಾಲ್ವರು ಮಡಿದಿದ್ದು ಎಂಟು ಜನರಿಗೆ ಗಾಯಗಳಾಗಿವೆ. ಕೂಡಲೇ ಕರ್ಫ್ಯೂ ಆಜ್ಞೆಯನ್ನೂ ೫ ಜನಕ್ಕಿಂತ ಹೆಚ್ಚು ಜನ ನೆರೆಯಬಾರದೆಂಬ ಆಜ್ಞೆಯನ್ನೂ ಜಾರಿಯಲ್ಲಿ ತರಲಾಯಿತು. ಹೆಚ್ಚಿನ ಪೋಲಿಸ ಸಹಾಯ ಮತ್ತು ಅಹಮದಾಬಾದದಿಂದ ಸೈನಿಕ ಸಹಾಯ ಗಲಭೆಯ ಸ್ಥಳಕ್ಕೆ ಕಳುಹಿಸಲಾಯಿತು. ಪರಿಸ್ಥಿತಿ ಹಿಡಿತದಲ್ಲಿರುವದಾಗಿ ಮುಂಬಯಿ ಪ್ರಕಟನಾಧಿಕಾರಿಗಳು ಪ್ರಕಟನೆ ತೆಗೆದಿದ್ದಾರೆ.

ಈ ಬಗ್ಗೆ ಆ ಮೇಲೆ ಬಂದ ವಿವರ ಹೀಗಿದೆ: ಗೋಧ್ರಾದಲ್ಲಿ ಮಾರ್ಚ ೨೫ಕ್ಕೆ ನಿರಾಶ್ರಿತರು ಮೆರವಣಿಗೆ ತೆಗೆದಿದ್ದರು. ಆ ಕಾಲಕ್ಕೆ ಗಲಭೆ ಮತ್ತು ಇರಿತಗಳು ಸಂಭವಿಸಿದವು ಪೋಲೀಸರು ವ್ಯವಸ್ಥೆ ಕಾಯಲು ಯತ್ನಿಸಿದರು. ಮರುದಿನ ಬೆಂಕಿಯ ಪ್ರಕೋಪ ಪ್ರಾರಂಭವಾಯಿತು. ಬರೋಡಾ ಮತ್ತು ಮುಂಬಯಿಯ ಅಗ್ನಿಶಾಮಕ ದಳಗಳು ಕೆಲಸ ಮಾಡಿದವು ಮುಂಬಯಿ ಸರಕಾರದ ಗೃಹ ಮಂತ್ರಿ ಶ್ರೀ ಮುರಾರಜಿ ದೇಸಾಯಿಯವರು ತಾ. ೨೭ಕ್ಕೆ ರಾತ್ರಿ ಗೋಧ್ರಾಕ್ಕೆ ಪರಿಸ್ಥಿತಿ ಕಣ್ಣಾರೆ ನೋಡಲು ಪ್ರಯಾಣ ಬೆಳಸಿದರು. ಒಟ್ಟು ೧೬ ಜನ ಸತ್ತಿದ್ದು ೧೫ ಜನರಿಗೆ ಗಾಯಗಳಾಗಿವೆ. ನಿರಾಶ್ರಿತರು ಶಾಂತಿ ರಕ್ಷಣೆಯಲ್ಲಿ ಸಹಕರಿಸುತ್ತಿರುವದಿಲ್ಲವಾಗಿ ತಿಳಿಯುತ್ತದೆ. ಹಿಂದು ಮುಸಲ್ಮಾನರಿಬ್ಬರಿಗೂ ಹಾನಿಯಾಗಿದೆ. ಊರ ಹೊರಗೆ ರಕ್ಷಣೆ ಪಡೆಯುತ್ತಿದ್ದವರ ಮೇಲೆ ನಿರಾಶ್ರಿತರು ದಾಳಿ ಮಾಡಿದ್ದರು. ಈ ತಿಕ್ಕಾಟದಲ್ಲಿ ೭ ಜನ ಮರಣಹೊಂದಿದ್ದು ೧೨ ಜನರಿಗೆ ಗಾಯಗಳಾಗಿವೆ.

ಅಹಮದಾಬಾದಕ್ಕೆ ಹೊರಟ ಗುಜರಾತ ಮೇಲಿನಲ್ಲಿ ೨ನೇ ವರ್ಗದ ಡಬ್ಬಿಯಲ್ಲಿ ಪ್ರಯಾಣ ಮಾಡುತ್ತಿದ್ದ ಇಬ್ಬರು ಸ್ತ್ರೀಯರ ಮೇಲೆ ತಾ. ೨೮ ರಂದು ಬೀಗಾಂ ಮುಂಬಜನೆ ಯಾರೋ ಹಲ್ಲೆ ಮಾಡಿ ಅವರ ಆಭರಣಗಳನ್ನು ದೋಚಿಕೊಂಡರು. ಹೋಜದ ಒಬ್ಬಳಿಗೆ ತೀವ್ರ ಗಾಯಗಳಾಗಿವೆ. ಪೋಲೀಸರು ವಿಚಾರಣೆ ನಡೆಸಿದ್ದಾರೆ.

ತಾ ೨೭ ರ ಸಂಜೆ ಮಾತುಂಗದ ಮುಂಬಯಿ ಕನ್ನಡ ಸಂಘದಲ್ಲಿ ಮುಂಬಯಿಯ ಕನ್ನಡ ಬರಹಗಾರರು ಸಾಹಿತ್ಯ ಕೂಟ ಒಂದನ್ನು ಏರ್ಪಡಿಸಿದ್ದರು. ಶ್ರೀಯುತರಾದ ಶ್ರೀರಂಗರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು.

ಡಿಸೆಲ್ ಆಯಿಲ್ ಹಾಗೂ ಪಾವರ ಕೆರೋಸಿನ ಎಣ್ಣೆಗಳ ಕೊರತೆಯಾಗಿರುವದರಿಂದ ಒಕ್ಕಲತನಕ್ಕೆ ಉಪಯೋಗಿಸುವ ಎಂಜಿನು ಹಾಗೂ ಟ್ರಾಕ್ಟರುಗಳಿಗೆ ಬೇಕಾಗುವ ಈ ಎಣ್ಣೆಗಳ ಬಗ್ಗೆ ಪ್ರತಿ ತಿಂಗಳು ಎಷ್ಟು ಎಣ್ಣೆ ಅವಶ್ಯವೆಂಬುದನ್ನು ರೈತರು ತಮ್ಮ ಜಿಲ್ಹಾ ಕಲೆಕ್ಟರರಿಗೆ ತಿಳಿಸಬೇಕು. ಹೀಗೆ ಎಣ್ಣೆಯ ಬಗ್ಗೆ ಬೇಡಿಕೆ ಕಳಿಸುವಾಗ ಎಂಜಿನದ ಹಾರ್ಸ ಪಾವರ, ಎಷ್ಟು ಕ್ಷೇತ್ರ ಎಂಜಿನಿಂದ ಸಾಗುವಳಿ ಆಗುತ್ತದೆ. ಅದರಿಂದ ಬೆಳೆಯುವ ಆಹಾರ ಧಾನ್ಯದ ಅಂದಾಜು ಉತ್ಪತ್ತಿ ಈ ವಿವರಗಳನ್ನು ಅವಶ್ಯ ತಿಳಿಸಬೇಕು ಎಂದು ಮುಂಬಯಿ ಸರಕಾರದವರು ಪ್ರಕಟನೆ ಹೊರಡಿಸಿದ್ದಾರೆ.

ಕಲಕತ್ತಾ

ಹೋಳಿಯ ಪುಂಡಾಟಿಕೆಯಲ್ಲಿ ಭಾಗವಹಿಸಿದ ಆಪಾದನದ ಮೇಲೆ ನೂರಕ್ಕಿಂತ ಹೆಚ್ಚು ಜನರು ತಾ ೨೮ ರಂದು ಕಲಕತ್ತಾ ಸಿಟಿ ಮ್ಯಾಜಿಸ್ಟ್ರೇಟರ ಎದುರಿಗೆ ಹಾಜರ ಮಾಡಲ್ಪಟ್ಟರು. ಅವರಲ್ಲಿ ಅನೇಕರಿಗೆ ೫ ರಿಂದ ೧೦ ರೂ. ದಂಡ ಕಟ್ಟಲಾಯಿತು. ಹಬ್ಬಗಳು ಜಾತಿಜಾತಿಗಳಲ್ಲಿ ಸೌಹಾರ್ದ ಹುಟ್ಟಿಸುವ ಪ್ರಸಂಗಗಳಾಗಬೇಕಲ್ಲದೆ ಅವು ಸ್ವೈರಾಚಾರ ಪುಂಡಾಟಿಕೆಗಳಿಗೆ ಉಪಯೋಗಿಸಲ್ಪಡಬಾರದೆಂದು ಪಶ್ಚಿಮ ಬಂಗಾಲದ ಮುಖ್ಯ ಮಂತ್ರಿ ಡಾ. ರಾಯರು ಈ ಸಾರೆಯ ಹೋಳಿಯ ಹಬ್ಬದ ದುರ್ಘಟನೆಗಳ ಬಗ್ಗೆ ವಿಷಾದ ವ್ಯಕ್ತಪಡಿಸಿದ್ದಾರೆ.

ಪಶ್ಚಿಮ ಬಂಗಾಲದ ಶಾಂತತೆ ಮತ್ತು ಸುವ್ಯವಸ್ಥೆಗಳಿಗೆ ಭಂಗ ತರುವಂತಹ ಚಟುವಟಿಕೆಗಳನ್ನು ಕಾಮ್ಯುನಿಸ್ಟರು ಇತ್ತೀಚಿನ ಕೆಲವು ತಿಂಗಳಿಂದ ನಡೆಸಿದ್ದರಿಂದ ಅವರ ಸಂಸ್ಥೆಯನ್ನು ಅಕ್ರಮ ಕೂಟವೆಂದು ಸಾರಿ ಅವರ ಮುಖಂಡರನ್ನು ಬಂಧಿಸ ಬೇಕಾಯಿತು ಎಂದು ಪಶ್ಚಿಮ ಬಂಗಾಲದ ಗೃಹ ಮಂತ್ರಿ ಶ್ರೀ ಕಿರಣ ಶಂಕರ ರಾಯರು ತಾ. ೨೭ಕ್ಕೆ ಒಂದು ಪ್ರಕಟನೆ ಹೊರಡಿಸಿದ್ದಾರೆ.

ಪಶ್ಚಿಮ ಬಂಗಾಲ ಶಾಸನ ಸಭೆಯ ಸಭಾಸದರಾದ ಶ್ರೀ. ಜ್ಯೋತಿ ಬಸು ಮತ್ತು ಬಂಗಾಲ ಕಮ್ಯುನಿಸ್ಟ ಪಕ್ಷದ ಹಿಂದಿನ ಕಾರ್ಯದರ್ಶಿಗಳಾದ ಶ್ರೀ. ಭವಾನಿ ಸೇನರನ್ನೂ ಬಂಧಿಸಲಾಗಿದೆ. ತಾ. ೨೬ ರಂದು ಪೋಲೀಸರು ಒಟ್ಟು ೫೮ ಜನ ಕಮ್ಯುನಿಸ್ಟರನ್ನು ಬಂಧಿಸಿದ್ದಾರೆ. ಇದರಲ್ಲಿ ಸುಮಾರು ೪೦ ಜನರು ಕಲಕತ್ತೆಯವರಿದ್ದಾರೆ.

ಕಲಕತ್ತಾ ಟ್ರಾಮವೇ ಕೂಲಿಕಾರ ಸಂಘದ ಕಾರ್ಯದರ್ಶಿಗಳಾದ ಶ್ರೀ ಧೀರೇನ್ ಮುಜುಮದಾರರನ್ನು ಬಂಧಿಸಿದ ಕೆಲಹೊತ್ತಿನಲ್ಲಿಯೇ ನಗರದಲ್ಲಿಯ ಕೆಲಭಾಗಗಳಲ್ಲಿಯ ಟ್ರಾಮ ಓಡಾಟವು ಬಂದಾಯಿತು.

ಮದ್ರಾಸ

ಸಮತಾವಾದಿ ಪಕ್ಷದ ಕಾರ್ಯದರ್ಶಿಗಳಾದ ಶ್ರೀ ಜಯಪ್ರಕಾಶ ನಾರಾಯಣರು ತಮ್ಮ ಪತ್ನಿ ಹಾಗೂ ಪರಿವಾರದೊಂದಿಗೆ ತಾ ೨೭ ರಂದು ಮಧ್ಯಾಹ್ನ ಮದ್ರಾಸಕ್ಕೆ ವಿಮಾನದಿಂದ ಬಂದಿಳಿದರು ಅವರ ಕೈಯಲ್ಲಿ ಚರಕಾ ಇದ್ದಿತು. ವಿಮಾನ ನಿಲ್ದಾಣದಲ್ಲಿ ಅಪೂರ್ವಸ್ವಾಗತ ನೀಡಲಾಯಿತು. ಸಂಯುಕ್ತ ಕರ್ನಾಟಕದ ಪ್ರತಿನಿಧಿಯು ಅವರನ್ನು ಕಂಡು, ನಾಶಿಕ ಗೊತ್ತಿಗೆ ಜನರ ಪ್ರತಿಕ್ರಿಯೆ ಏನು ಎಂದು ಕೇಳಲು ಜನ ಸಾಮಾನ್ಯರಿಗೆ ಆ ಗೊತ್ತುವಳಿಯ ಮರ್ಮ ತಿಳಿದಿಲ್ಲ. ಅದನ್ನು ಜನಕ್ಕೆ ತಿಳಿಸಲು ವೃತ್ತಪತ್ರಿಕೆಗಳ ನೆರವು ಬೇಕಾಗಿದೆ ಎಂದು ಮೊದಲಾಗಿ ಅವರು ಹೇಳಿದರು.

ಮದ್ರಾಸ ಸರಕಾರದ ಗೃಹಮಂತ್ರಿಗಳಾದ ಡಾ. ಪಿ. ಸುಬ್ಬರಾಯನ್ನರು ಒಂದು ಹೇಳಿಕೆಯಲ್ಲಿ ಜಾತೀಯ ಹಾಗೂ ಪ್ರಾಂತೀಯ ಭಾವನೆಯನ್ನು ಖಂಡಿಸಿದರು.

ಹೊಸದಿಲ್ಲಿ

ಜಮ್ಮು ಮತ್ತು ಕಾಶ್ಮೀರ ರಣಾಂಗಣದಲ್ಲಿ ಹೋರಾಡುತ್ತಿದ್ದ ಸೈನಿಕರಿಗಾಗಿ ಹಿಂದೀ ಚಿತ್ರಪಟಗಳನ್ನು ತೋರಿಸುವ ವ್ಯವಸ್ಥೆಯನ್ನು ಮಾಡಲಾಗಿದೆ. ಯಾರಾದರೂ ತಮ್ಮ ಚಿತ್ರಪಟಗಳನ್ನು ಕಡಕೊಟ್ಟರೆ ಅಥವಾ ಯೋಗ್ಯ ಬೆಲೆಗೆ ಮಾರಿದರೆ ಅವುಗಳನ್ನು ಕೃತಜ್ಞತಾ ಪೂರ್ವಕವಾಗಿ ಸ್ವೀಕರಿಸಲಾಗುವದೆಂದು ದಕ್ಷಿಣಭಾಗದ ಸೇನಾಪತಿಗಳು ತಿಳಿಸುತ್ತಾರೆ. ಚಿತ್ರಪಟಗಳು ೧೬ ಮಿ. ಮಿ. ಇರಬೇಕು. ಇವನ್ನು, ಬ್ರಿಗೇಡಿಯರ ಇನ್ ಚಾರ್ಜ, ಲಾಂಟರ್ನ ಕಮಾಂಡ ನ್ಯೂದಿಲ್ಲಿ ಈ ವಿಳಾಸಕ್ಕೆ ಕಳಿಸಬೇಕೆಂದು ಅವರು ಬಿನ್ನವಿಸುತ್ತಾರೆ.

ಹಿಂದುಸ್ತಾನ ಸರಕಾರದ ಆಹಾರ ಸಚಿವರಾದ ಶ್ರೀ ಜಯರಾಮದಾಸ ದೌಲತರಾಮರು ತಾ ೨೭ ರಂದು ಒಕ್ಕಲತನ ಸಂಶೋಧನಾ ಸಂಸ್ಥೆಯಲ್ಲಿ ಭಾಷಣ ಮಾಡುತ್ತ, ಈ ಸಂಸ್ಥೆಯಲ್ಲಿ ಪ್ರತಿವರ್ಷ ೧೦೦ ಜನರನ್ನು ತರಬೇತು ಮಾಡಲಾಗುತ್ತಿದೆ. ೩೫ ಕೋಟಿ ಜನರ ಉದ್ಧಾರಕ್ಕಾಗಿ ಈ ಒಂದೇ ಒಂದು ಕೇಂದ್ರ ಸಂಸ್ಥೆ ಸಾಲದು ಪ್ರತಿವರ್ಷ ಸಹಸ್ರಾರು ಜನ ತರಬೇತಿಹೊಂದಿ ಹೊರಬೀಳಬೇಕು ಎಂದು ಮೊದಲಾಗಿ ನುಡಿದರು.

ಹಿಂದುಸ್ತಾನ ಸಂಸ್ಥಾನ ಖಾತೆಯಕಾರ್ಯದರ್ಶಿ ಶ್ರೀ ಮೆನನ್ನರು ತಾ ೨೭ ರಂದು ಹೈದರಾಬಾದದ ಬಗ್ಗೆ ಉತ್ತರ ಕೊಡುತ್ತ, ನಿಜಾಮರೊಡನೆ ಪತ್ರವ್ಯವಹಾರ ನಡೆದಿದ್ದು ಇನ್ನು ಒಂದೆರಡು ವಾರಗಳಲ್ಲಿ ಈ ಸಂಸ್ಥಾನದ ಭವಿತವ್ಯವು ನಿರ್ಧರಿಸಲ್ಪಡುವದು ಎಂದು ಮೊದಲಾಗಿ ಹೇಳಿದರು.

ಹೊಸದಿಲ್ಲಿಯಲ್ಲಿ ತಾ ೨೮ಕ್ಕೆ ಸೇರಿದ ಪ್ರಾಂತ ಮತ್ತು ಸಂಸ್ಥಾನಗಳ ಆಹಾರ ಅಧಿಕಾರಿಗಳ ಸಭೆ ಸೇರಿತ್ತು ಅಲ್ಲಿ ಮಾತನಾಡುತ್ತ ಆಹಾರ ಮಂತ್ರಿಗಳಾದ ಶ್ರೀ ಜಯರಾಮದಾಸ ದೌಲತರಾಮರು ಹಿಂದುಸ್ತಾನದ ಆಹಾರ ಪರಿಸ್ಥಿತಿಯನ್ನು ಸುಧಾರಿಸಲು ಒಕ್ಕಟ್ಟಿನಿಂದ ಕೆಲಸ ಮಾಡಬೇಕೆಂದು ಬಿನ್ನವಿಸಿದರು ಈ ಸಭೆಯಲ್ಲಿ ೧೯೪೮ ಎಪ್ರಿಲ, ಮೇ, ಜೂನ ತಿಂಗಳಿಗಾಗಿ ಆಹಾರ ಧಾನ್ಯದ ಹಂಚುವಿಕೆಯ ಬಗ್ಗೆ ಚರ್ಚೆ ನಡೆಯಿತು.

ಆಹಾರದ ಕಳ್ಳ ಸಂಗ್ರಹಗಾರರನ್ನು ಉಗ್ರ ಶಿಕ್ಷೆಗೆ ಗುರಿಪಡಿಸಲಾಗುವದೆಂದು ಆಹಾರ ಮಂತ್ರಿಗಳಾದ ಶ್ರೀ ಜಯರಾಮದಾಸ ದೌಲತರಾಮರು ತಾ. ೨೮ ರಂದು ಹೇಳಿದರು.

ಹಿಂದೀ ಸಂಸ್ಥಾನ

ರಾಜಕೋಟದ ಹಿಂದೂ ಮಹಾಸಭೆಯ ಕಾರ್ಯಕರ್ತರಾದ ಶ್ರೀ ನಾರಾಯಣದಾಸ ಪಾವುನ್ನ ಇವರು ಮಾರ್ಚ ೧೭ನೇ ತಾರೀಖಿನಿಂದ ಉಪವಾಸ ಕೈಕೊಂಡಿದ್ದರು ತಾ ೨೬ಕ್ಕೆ ಅವರು ಉಪವಾಸ ಮುರಿದರು ಮಹಾತ್ಮರ ಕೊಲೆಯ ನಂತರ ಇವರು ಸ್ಥಾನಬದ್ಧತೆಯಲ್ಲಿದ್ದರು ಸೌರಾಷ್ಟ್ರ ಸರಕಾರದವರು ಅವರನ್ನು ಕೂಡಲೆ ನ್ಯಾಯ ವಿಚಾರಣೆಗೆ ಹಾಜರ ಮಾಡುವ ಆಶ್ವಾಸನ ಕೊಟ್ಟದ್ದರಿಂದ ಶ್ರೀ ನಾರಾಯಣದಾಸರು ಉಪವಾಸ ಮುಕ್ತಾಯ ಗೊಳಿಸಿದರು.

ಹಿಂದುಸ್ತಾನ ಸರಕಾರದವರು ಒಂದು ಪ್ರಕಟನೆ ಹೊರಡಿಸಿ ಇದುವರೆಗೆ ಹಿಂದುಸ್ತಾನದಲ್ಲಿ ಲೀನವಾದ ಅಥವಾ ಒಕ್ಕೂಟ ರಚಿಸಿಕೊಂಡ ಸಂಸ್ಥಾನ ಮತ್ತು ಜಹಾಗೀರುಗಳ ಸಂಖ್ಯೆಯು ೪೭೪ ಇರುವವೆಂದು ಹೇಳಿದ್ದಾರೆ. ಈ ಎಲ್ಲ ಸಂಸ್ಥಾನಗಳ ಕ್ಷೇತ್ರವು ೧,೮೬,೯೯೮ ಚೌ ಮೈಲು ಇದ್ದು ಜನಸಂಖ್ಯೆ ೨,೩೯,೧೩,೦೦೦ ಉತ್ಪನ್ನವು ೨೦,೪೬,೭೧,೦೦೦ ರೂ ಇರುತ್ತದೆ ಇವುಗಳಲ್ಲಿ ಮುಂಬಯಿ ಪ್ರಾಂತದಲ್ಲಿ ಲೀನವಾದ ಗುಜರಾತ ಸಂಸ್ಥಾನಗಳ ಸಂಖ್ಯೆ ೨೪೯ ಮತ್ತು ಸೌರಾಷ್ಟ್ರದಲ್ಲಿ ಸೇರಿದ ಸಂಸ್ಥಾನಗಳ ಸಂಖ್ಯೆ ೪೪೯ ಇದೆ. ೩೭೨ ಸಂಸ್ಥಾನಗಳು ಪ್ರಾಂತದಲ್ಲಿ ಲೀನವಾಗಿದ್ದು ೪೯೭ ಒಕ್ಕೂಟಗಳಲ್ಲಿ ಕೂಡಿವೆ

ಸುಮಾರು ೯ ಸಾವಿರ ಬಡೋದಾ ಸಂಸ್ಥಾನ ಸರಕಾರದ ನೌಕರರು ತಾ ೨೭ರಂದು ಸಂಪು ಹೂಡಿ ಕೆಲಸಕ್ಕೆ ಹೋಗದೆ ಮನೆಯಲ್ಲಿ ಕುಳಿತಿರುವರು ಈ ಸಂಪಿನಲ್ಲಿ ಸಂಸ್ಥಾನದ ಕೆಳಗಿನ ದರ್ಜೆಯ ನೌಕರರೂ ಶಿಪಾಯಿಗಳೂ ಹೆಚ್ಚಾಗಿದ್ದಾರೆ ಬಡೋದಾ ಸಂಸ್ಥಾನ ನೌಕರ ಸಂಘದವರ ಆದೇಶದಂತೆ ಈ ಸಂಪನ್ನು ಹೂಡಲಾಗಿದೆ.

ಹಿಂದುಸ್ತಾನ ಸರಕಾರದ ಆರೋಗ್ಯಖಾತೆಯ ವರಿಷ್ಠಾಧಿಕಾರಿ ಡಾ. ಜೀವರಾಜ ಮೆಹತಾರವರು ಗುಜರಾತ ಕಾಠೇವಾಡ ದ್ವಿತೀಯ ಆರೋಗ್ಯ ಪರಿಷತ್ತಿನ ಉದ್ಘಾಟನೆ ಮಾಡುತ್ತ ರಾಜಕೋಟದಲ್ಲಿ, ದೇಶದ ಎಲ್ಲ ವರ್ಗದವರ ಆರೋಗ್ಯಾಭಿವೃದ್ಧಿಯ ಹೊಣೆಯನ್ನು ಸರಕಾರವೇ ವಹಿಸಿಕೊಳ್ಳಬೇಕೆಂಬ ಸೂಚನೆಯನ್ನು ಸರಕಾರವು ಅಂಗೀಕರಿಸಿದರೆ ಸ್ವತಂತ್ರವಾಗಿ ವೈದ್ಯಕೀಯ ವ್ಯವಸಾಯ ಸಾಗಿಸುವುದನ್ನು ನಿಲ್ಲಿಸಲೇ ಬೇಕಾಗುವದು ಎಂದು ಮೊದಲಾಗಿ ಹೇಳಿದರು.

ಕಾಶ್ಮೀರದ ಜನತೆಯ ಪರವಾಗಿ ಕಾಶ್ಮೀರದ ಮುಖ್ಯ ಮಂತ್ರಿಗಳಾದ ಶೇಖ ಅಬ್ದುಲ್ಲಾರು, ಹಿಂದುಸ್ತಾನದ ಜನರು ಎಂದಿನಂತೆ ಬೇಸಿಗೆಯ ಕಾಲದಲ್ಲಿ ಕಾಶ್ಮೀರದ ಸೃಷ್ಟಿ ಸೌಂದರ್ಯ ನೋಡಲು ಬರಬೇಕೆಂಬುದಾಗಿ ಆಮಂತ್ರಣ ಕೊಟ್ಟಿದ್ದಾರೆ. ಪಾಕಿಸ್ತಾನ ದಾಳಿಗಾರರಿಂದ ಕಾಶ್ಮೀರವು ಪೀಡಿತವಾಗಿದ್ದರೂ ಹಿಂದುಸ್ತಾನ ಬಾಂಧವರನ್ನು ಸ್ವಾಗತಿಸುವದಾಗಿ ಮಂತ್ರಿಗಳು ಹೇಳಿದ್ದಾರೆ.

ಕೊಲ್ಹಾಪುರ ಸಂಸ್ಥಾನದ ಹಿಂದಿನ ಮಂತ್ರಿಗಳಾದ ಶ್ರೀ ಡಿ. ಎಸ್. ಖಾಂಡೇಕರ ಮತ್ತು ಶ್ರೀ ಎಸ್. ವ್ಹಿ. ಸರನಾಯಕ ಇವರನ್ನು ತಾ ೩೦ ರಂದು ಪೋಲೀಸರು ಕೊಲ್ಹಾಪುರ ಸುರಕ್ಷಿತತೆ ಕಾಯಿದೆಯನ್ವಯ ಬಂಧಿಸಿದರು. ಶ್ರೀ ಸರನಾಯಕರವರ ಮನೆಯನ್ನು ಶೋಧಿಸಲಾಯಿತು. ಗಲಭೆಯ ವಿಷಯಕ ವಿಚಾರಣೆಯನ್ನು ಪೋಲೀಸರು ಬಹು ಜೋರಿನಿಂದ ನಡೆಸಿದ್ದು ಈ ವರೆಗೆ ಎರಡು ನೂರಕ್ಕಿಂತ ಹೆಚ್ಚು ಜನರು ಬಂಧಿಸಲ್ಪಟ್ಟಿದ್ದಾರೆ.

ನಿಜಾಮ ಸರಕಾರವು ಹೈದರಾಬಾದ ಸಂಸ್ಥಾನದಲ್ಲಿ ನಾಣ್ಯಚಲಾವಣೆಯ ಬಗ್ಗೆ ಸಂಸ್ಥಾನದ ನಾಣ್ಯದ ಹೊರತಾಗಿ ಯಾವ ನಾಣ್ಯವನ್ನೂ ಉಪಯೋಗಿಸಬಾರದೆಂದು ೧೯೪೭ ಡಿಸೆಂಬರದಲ್ಲಿ ಹೊರಡಿಸಿದ ನಿರ್ಬಂಧಕಾಜ್ಞೆಯನ್ನು ತಿದ್ದುಪಡಿಗೊಳಿಸಿದೆ. ತಿದ್ದಿದ ಆಜ್ಞೆಯ ಮೇರೆಗೆ ಹೊರಗಿನ ಪ್ರವಾಸಿಕರು ತಮ್ಮ ಆವಶ್ಯಕತೆಗಳಿಗಾಗಿ ಹಿಂದೀ ನಾಣ್ಯಗಳನ್ನು ಉಪಯೋಗಿಸಬಹುದಾಗಿದೆ.

ಪಾಕಿಸ್ತಾನ

ಸಿಂಧ ಪ್ರಾಂತದ ಮುಖ್ಯ ಮಂತ್ರಿ ಎಂ. ಎ. ಖುಹ್ರೋ ಅವರು ಒಂದು ಹೇಳಿಕೆ ಹೊರಡಿಸಿ, ಸಿಂಧ ಪ್ರಾಂತದಲ್ಲಿ ಒಕ್ಕಲತನದಲ್ಲಿ ಕೆಲಸಮಾಡಬಲ್ಲ ೫೦ ಸಾವಿರ ನಿರಾಶ್ರಿತರನ್ನು ಸ್ವಾಗತಿಸಲಾಗಿದೆ ಇದಲ್ಲದೆ ನಗರದಲ್ಲಿ ಕೆಲಸ ಮಾಡಬಲ್ಲ ೨೦ ಸಾವಿರ ನಿರಾಶ್ರಿತರಿಗೂ ಸಿಂಧ ಸರಕಾರವು ವಸತಿಕಲ್ಪಿಸಿ ಕೊಟ್ಟಿದೆ. ಒಕ್ಕಲತನದಲ್ಲಿ ಕೆಲಸ ಮಾಡಬಲ್ಲ ಇನ್ನೂ ೫೦ ಸಾವಿರ ಜನಕ್ಕೆ ಅನುವುಗೊಡಲಾಗುವದು. ಸಿಂಧದಿಂದ ಗುಳೇಹೋದ ಜನರ ಭೂಮಿಯನ್ನು ನಿರಾಶ್ರಿತರ ಒಂದು ಕುಟುಂಬಕ್ಕೆ ೧೨ ಎಕರೆಯಂತೆ ಕೊಡುವ ವಿಚಾರವನ್ನು ಸರಕಾರವು ನಡೆಸಿದೆ ಎಂದು ಮೊದಲಾಗಿ ಹೇಳಿದ್ದಾರೆ.

ಹೈದರಾಬಾದ ನಿಜಾಮರ ಘಟನಾ ಸಲಹೆಗಾರರಾದ ಸರ ವಾಲ್ಟರ ಮಾಂಕ್ಟನ್ನರು ಪತ್ನೀ ಸಮೇತರಾಗಿ ಲಂಡನದಿಂದ ಹೈದರಾಬಾದಕ್ಕೆ ಹೋಗಲು ಕರಾಚಿಗೆಬಂದು ತಾ. ೨೭ಕ್ಕೆ ವಿಶೇಷ ವಿಮಾನದಿಂದ ಹೈದರಾಬಾದಕ್ಕೆ ಪ್ರಯಾಣ ಬೆಳೆಸಿದರು.

ಸಿಂಧದಲ್ಲಿ ಭಾರತದ ವಿಭಜನೆಯನಂತರ ನಡೆದ ನಿರಂತರ ಘಟನೆಗಳನ್ನು ನಿರೀಕ್ಷಿಸಿದರೆ ಪಾಕಿಸ್ತಾನವು ಅಲ್ಪಸಂಖ್ಯಾಕರ ಸಂರಕ್ಷಣೆಯ ಬಗ್ಗೆ ಕೊಟ್ಟ ತನ್ನ ವಚನವನ್ನು ಪಾಲಿಸುತ್ತಿಲ್ಲವೆಂಬುದು ಎದ್ದು ಕಾಣುತ್ತದೆ. ಈಗ ಸಹ ಸಿಂಧದಲ್ಲಿ ಅಲ್ಪಸಂಖ್ಯಾಕರು ಮನೆಬಿಟ್ಟು ಹೊರಬಿದ್ದರೆ, ಮಾನಹಾನಿ, ಪ್ರಾಣಭಯ ಇವೇ ಕಾದಿರುತ್ತವೆ ಎಂದು ಮೊದಲಾಗಿ ಸಿಂಧ ಪ್ರಾಂತ ಕಾಂಗ್ರೆಸ ಕಮಿಟಿಯ ಅಧ್ಯಕ್ಷರಾದ ಡಾ. ಚೊಯಿತರಾಮ ಗಿಡ್ವಾನಿಯವರು ಪ್ರಕಟನೆ ಹೊರಡಿಸಿದ್ದಾರೆ.

ಪಾಕಿಸ್ತಾನದ ಗವ್ಹರ್ನರಜನರಲ್ಲರಾದ ಕಾಯದೆ ಆಝಮ ಜಿನ್ನಾರವರು ಸರಹದ್ದ ಪ್ರಾಂತಕ್ಕೆ ಭೆಟ್ಟಿ ಕೊಡಲಿದ್ದು ಎಪ್ರಿಲ ೧೧ಕ್ಕೆ ಪೇಶಾವರಕ್ಕೆ ಆಗಮಿಸ ಬಹುದೆಂದು ನಿರೀಕ್ಷಿಸಲಾಗಿದೆ.

ತಾ. ೨೨-೩-೪೮ ರ ಕರ್ಮವೀರದ ಸಂಚಿಕೆಯಲ್ಲಿ ಪ್ರಕಟವಾದ ‘ಕಾಳಿದೊರೆಯಿತು’ ಎಂಬ ಕಥೆಯ ಲೇಖಕರ ಹೆಸರು ಕನ್ನಡಿಗರ ವಿಜಾಪೂರ ಎಂದು ಅಚ್ಚಾಗಿದೆ. ವಿಜಾಪೂರ ಎಂಬಲ್ಲಿ ಕೊಡಗು ಎಂದು ಓದಬೇಕಾಗಿ ಓದುಗರಲ್ಲಿ ಬಿನ್ನಹ.

ಧಾರವಾಡ

ರೋಣ ತಾಲೂಕಿನ ಹನುಮನ ಹಳ್ಳಿ ಗ್ರಾಮವು ನಿಜಾಮ ಹದ್ದಿನ ಸಮೀಪದಲ್ಲಿದ್ದುದರಿಂದ ಗ್ರಾಮಸಂರಕ್ಷಣೆಗಾಗಿ ಸ್ಥಳೀಯ ೫೦ ಹುಡುಗರು ಸೈನ್ಯ ಶಿಕ್ಷಣ ಪಡೆಯ ಬರಬೇಕಾಗಿದ್ದಾರೆ ಈ ಗೃಹರಕ್ಷಕ ದಳದವರಿಗೆ ಸರಕಾರದವರು ಶಸ್ತ್ರಾಸ್ತ್ರಗಳನ್ನು ಕೊಟ್ಟು ಗಡಿರಕ್ಷಣೆಗೆ ಅನುಕೂಲತೆಯನ್ನು ಮಾಡಿಕೊಡಬೇಕೆಂದು ಮುಂಚಾಗಿ ಗ್ರಾಮ ಕಾಂಗ್ರೆಸ ಸಮಿತಿಯವರು ಸರಕಾರಕ್ಕೆ ಬಿನ್ನವಿಸಿಕೊಂಡಿರುವರು.

ಶನಿವಾರ ೨೦ ನೆಯ ತಾರೀಕು ಕೋಡದಲ್ಲಿ ಹುಲ್ಲು ಬಣವೆಗೆ ಬೆಂಕಿ ಬಿದ್ದು ಊರೆಲ್ಲ ವ್ಯಾಪಿಸಿ ಉಗ್ರಸ್ವರೂಪ ತಾಳಿತು. ೩೦೦ ಬಣವೆಗಳು ಮತ್ತು ೧೩೦ ಮನೆಗಳು ಸುಟ್ಟವು. ಸಾವಿರಾರು ಜನರು ನಿರಾಶ್ರಿತರಾಗಿರುವರು. ಮತ್ತೆ ೨೪ನೆಯ ತಾರೀಕಿಗೆ ಬಣವೆಗಳಿಗೆ ಬೆಂಕಿ ಹತ್ತಿ ೧೭ ಬಣವೆಗಳು ಸುಟ್ಟುಹೋದವು. ೪ ಲಕ್ಷ ರೂ. ಹಾನಿಯಾಗಿದೆ. ನಿರಾಶ್ರಿತರಿಗೆ ಪರಿಹಾರ ಕೊಡುವ ವ್ಯವಸ್ಥೆ ಮಾಡಿದೆ.

ಅಬ್ಬಿಗೇರಿಯಲ್ಲಿ ೨೪ ನೆಯ ತಾರೀಖ ಹರಿಜನ ಕೇರಿಯಲ್ಲಿ ಸಭೆ ಸೇರಿ ಹರಿಜನರ ಸುಧಾರಣೆಗೆ ಅಡ್ಡಿಯಾಗಿರುವದುಷ್ಟ ಪದ್ಧತಿಗಳಾದ ಹೊಲೆತನ ಅಸ್ಪೃಶ್ಯತೆ, ಕುಡುಕತನ ಮತ್ತು ಮಾಂಸಾಹಾರ ಮೊದಲಾದವುಗಳನ್ನು ಬಿಡುವದರ ಬಗ್ಗೆ ಭಾಷಣಗಳಾದವು.

ಇಪ್ಪತ್ನಾಲ್ಕು ಮತ್ತು ಅದಕ್ಕಿಂತ ಹೆಚ್ಚು ಜನರಿಗೆ ಊಟಕ್ಕೆ ಹಾಕಬಾರದೆಂಬ ನಿರ್ಬಂಧ ಮುಂಬಯಿ ಪ್ರಾಂತದಲ್ಲೆಲ್ಲ ಈಗಲೂ ಜಾರಿಯಲ್ಲಿದ್ದು ಸಾರ್ವಜನಿಕರೆಲ್ಲ ಇತ್ತ ಗಮನಿಸಬೇಕಾಗಿ ಧಾರವಾಡ ಜಿಲ್ಲಾ ಕಲೆಕ್ಟರರು ಪ್ರಕಟನೆಯ ಮೂಲಕ ಸಾರಿದ್ದಾರೆ.

ಯಮನೂರಲ್ಲಿ ಕಳೆದ ತಿಂಗಳು ೨೭ ರಿಂದ ಪ್ರಾರಂಭವಾಗಿ ಎಪ್ರಿಲ ೧೦ ರ ವರೆಗೆ ನಡೆಯುವ ಉರುಸಿನಲ್ಲಿ ಪ್ರಾಣಿವಧೆಯನ್ನು ಮಾಡಬಾರದೆಂದೂ ಇಲ್ಲವೆ ಜಾತೀಯ ಉತ್ಸವದಲ್ಲಿ ಭಾಗವಹಿಸಬಾರದೆಂದೂ ೧೪೪ ನೆಯ ಕಲಮಿನನ್ವಯ ನಿರ್ಬಂಧಿಸಲಾಗಿದೆ.

ಲಕ್ಷ್ಮೇಶ್ವರದಲ್ಲಿ ಇದೇ ಮೇ ೧ ರಿಂದ ಸೇವಾದಲ ಶಿಕ್ಷಣಶಿಬಿರ ಪ್ರಾರಂಭವಾಗುವದು. ಒಂದು ತಿಂಗಳ ವರೆಗೆ ಈ ಶಿಬಿರವು ನಡೆಯುವದು.

ನಿರಜಿ ಪೋಲೀಸರಿಂದ ಕಿತ್ತುಕೊಂಡಿದ್ದ ಆರು ಖಡ್ಗಗಳು, ಒಂದು ಬಂದೂಕು ಒಂದು ಪಿಸ್ತೂಲು, ಆರು ಮದ್ದಿನ ಕೋಟೆಗಳು, ಎರಡು ತುಬಾಕಿ ಮತ್ತು ಒಂದು ಟಾರ್ಚನ್ನು ಪೋಲೀಸರು ಮೂಳಗಾಂವದಲ್ಲಿ ವಶಪಡಿಸಿಕೊಂಡಿರುವರು. ಸಾರ್ವಜನಿಕ ಸುರಕ್ಷಿತತೆ ಕಾಯದೆಯನ್ವಯ ಈರ್ವರನ್ನು ಬಂಧಿಸಿದ್ದಾರೆ.

ಧಾರವಾಡ ತಾಲೂಕಿನ ನಿಗದಿಯಲ್ಲಿ ೨೯ ಕ್ಕೆ ರಾತ್ರಿ ೮ ಗಂಟೆ ಸುಮಾರಿಗೆ ಯಲ್ಲಪ್ಪಾ ಹಣಮಂತಪ್ಪಾ ಅಳಗೋಡಿಯೆಂಬವನು ಕೊಡ್ಲಿಯಿಂದ ತನ್ನ ತಂದೆ ಮಲತಾಯಿ ಇಬ್ಬರು ಮಲತಮ್ಮಂದಿರು ಮತ್ತು ಮಲತಂಗಿಯನ್ನು ಅಮಾನುಷರೀತಿಯಿಂದ ಕೊಲೆ ಮಾಡಿ ಧಾರವಾಡ ನಗರ ಫೌಜದಾರರ ಕಡೆಗೆ ಕೊಡ್ಲಿ ಸಹಿತ ತಾನಾಗಿ ಹಾಜರಾಗಿರುವನು.

ಗದಗ ಪೌರಸಭೆಯವರು ತಮ್ಮ ಎಲ್ಲ ನೋಕರರಿಗೆ ಎರಡು ಜೋಡು ಹಾಗೂ ಸರಕಾರದ ಜಿ. ಆರ್. ಪ್ರಕಾರ ತುಟ್ಟಿ ಭತ್ಯ ಕೊಡಬೇಕೆಂದು ನಿರ್ಣಯಿಸಿರುವರು.

ಧಾರವಾಡ ತಾಲೂಕಿನ ಬ್ಯಾಹಟ್ಟಿಯಲ್ಲಿ ಇಬ್ಬರು ಅಣ್ಣ ತಮ್ಮಂದಿರಲ್ಲಿ ಹೊಡೆದಾಟವಾಗಿ ಒಬ್ಬರು ಮರಣಹೊಂದಿರುವರು.

ಧಾರವಾಡ ತಾಲೂಕಿನ ಮಂಗಳಗಟ್ಟಿ ಗ್ರಾಮದಲ್ಲಿ ವ್ಯಭಿಚಾರ ಮಾಡಿದ ಓರ್ವ ಹೆಣ್ಣುಮಗಳ ಸಂಬಂಧದಲ್ಲಿ ಎರಡು ಬಣಗಳಲ್ಲಿ ತಿಕ್ಕಾಟನಡೆದು ಇಬ್ಬರು ಅಲ್ಲಿಯೆ ಸತ್ತರಲ್ಲದೆ ಗಾಯಗೊಂಡ ಮತ್ತೊಬ್ಬನು ಧಾರವಾಡ ಆಸ್ಪತ್ರೆಯಲ್ಲಿ ಸತ್ತನು. ಈ ಸಂಬಂಧದಲ್ಲಿ ೭ ಜನರನ್ನು ಸೆರೆಹಿಡಿದಿದ್ದು ಇನ್ನೊಬ್ಬನು ಪರಾರಿಯಾಗಿರುವನು.

ಧಾರವಾಡ ರೇಲ್ವೆ ಸ್ಟೇಶನ ಮಾಸ್ತರರಾದ ಶ್ರೀ ಎಲ್. ಎಸ್ ಅಯ್ಯರರು ಲಂಚದ ಪ್ರಕರಣದಲ್ಲಿ ಸಿಕ್ಕಿದ್ದು ಪೋಲೀಸರು ೨೯ ಕ್ಕೆ ಅವರ ಮನೆ ಝಡತಿ ಮಾಡಲಾಗಿ ಲಂಚವೆಂದು ಕೊಟ್ಟ ಹಣ ದೊರೆಕಿದೆಯೆಂದು ತಿಳಿಯುತ್ತದೆ.

ದಕ್ಷಿಣ ಕನ್ನಡ

ಮಂಗಳೂರು ನಗರ ಸಭೆಯವರು ನಗರದಲ್ಲಿ ಪಟುಕ್ಕತ್ತ ಮೂರು ಶಿಕ್ಷಣ ಕೇಂದ್ರಗಳನ್ನು ತೆರೆಯಬೇಕೆಂದು ನಿರ್ಣಯಿಸಿರುವರು. ಮುನಿಸಿಪಾಲಿಟಿಯ ಕೆಳ ತರಗತಿಯ ನೌಕರರಿಗೆ ಮನೆ ಬಾಡಿಗೆ ಕೊಡಬೇಕೆಂದು ನಿರ್ಣಯಿಸಲಾಯಿತು.

ಮುದ್ರಾಣ ಸರಕಾರದ ಈಗಿನ ನೀತಿಯನ್ನು ಖಂಡಿಸಲು ಮಂಗಳೂರಿನ ಎಲ್ಲ ಮುದ್ರಕರೂ ೨೪ ರಂದು ತಾತ್ಕಾಲಿಕ ರೀತಿಯ ಮುಷ್ಕರ ಹೂಡಿದ್ದರು.

ಕರ್ನಾಟಕ

ಬೆಳಗಾವಿ

ಗೋಕಾವಿಯಲ್ಲಿ ಸೆರೆ ಹಿಡಿಯಲ್ಪಟ್ಟ ಆರ್. ಎಸ್. ಎಸ್. ಕಾರ್ಯಕರ್ತರಲ್ಲಿ ಶ್ರೀ ಕೇಶವ ವಕೀಲರೊಬ್ಬರನ್ನು ಬಿಟ್ಟು ಉಳಿದವರೆಲ್ಲರನ್ನು ಬಿಡುಗಡೆ ಮಾಡಲಾಗಿದೆ.

ಗೋಕಾವಿ ಮುಸಲ್ಮಾನ ಬಾಂಧವರೆಲ್ಲರೂ ಕೂಡಿ ಮುಸ್ಲಿಂ ಲೀಗನ್ನು ವಿಸರ್ಜಿಸಬೇಕೆಂದು ಈ ಮೊದಲು ನಿರ್ಣಯ ಮಾಡಿದ್ದು ೨೬ ನೆಯ ತಾರೀಕಿನ ದಿನ ಕೂಡಿದ ಸಭೆಯಲ್ಲಿ ಮುದ್ರಾಸು ಮುಸ್ಲಿಂ ಲೀಗಿನ ಠರಾವನ್ನು ವಿಚಾರಿಸಿ ಇನ್ನು ಮುಂದೆ ಹಿಂದುಸ್ಥಾನದಲ್ಲಿ ಮುಸ್ಲಿಂ ಲೀಗನ್ನು ವಿಸರ್ಜಿಸಬೇಕೆಂದು ಅಭಿಪ್ರಾಯಪಡಲಾಯಿತು.

ಬೆಳಗಾವಿ ಜಿಲ್ಲಾ ಆಹಾರ ಸಲಹೆ ಸಮಿತಿಯ ಸಭೆ ಕಳೆದ ವಾರ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಸೇರಿದ್ದಿತು. ಜಿಲ್ಲೆಯ ಹೊರಗೆ ಧಾನ್ಯ ಹೋಗದಂತೆ ಪ್ರತಿಬಂಧಿಸಬೇಕು. ಅದರ ಮತ್ತೆ ನಿಯಂತ್ರಣವನ್ನು ಹೇರಬಾರದೆಂದು ಅಭಿಪ್ರಾಯಪಡಲಾಯಿತು.

ಚಿಕ್ಕೋಡಿ ತಾಲೂಕಿನ ಅಂಕಲಿಯೊಳಗಿನ ಹೊಟೇಲ ಒಡೆಯರಾದ ಶ್ರೀ ಬಸಪ್ಪಾ ಕುರೋಳಿಯವರು ಪೋಲೀಸರಿಂದ ಬಂಧಿಸಲ್ಪಟ್ಟಿದ್ದಾರೆ. ಮಹಾತ್ಮರ ಕೊಲೆಯ ನಂತರ ಸಂಭವಿಸಿದ ಕೊಳ್ಳೆ ಲೂಟಿಗಳ ಸಂಬಂಧದಲ್ಲಿ ಇವರ ಬಂಧನವಾಗಿದೆಯೆಂದು ತಿಳಿದಿದೆ. ಇವರು ಜಿಲ್ಲಾ ಕಾಂಗ್ರೆಸ ಸದಸ್ಯರಿದ್ದು ಮದ್ಯಪಾನ ಪ್ರತಿಬಂಧ ಸಮಿತಿಯ ಸದಸ್ಯರೂ ಇರುವರು.

ಶ್ರೀ ಶಾಂತಿನಾಥ ಇಂಗಳೆ ಮತ್ತು ಚನ್ನಯ್ಯ ಮೂರ್ತಿ ಓಂಕಾರಮಠ ಇವರು ಆರು ತಿಂಗಳ ವರೆಗೆ ಭಾಷಣ ಮಾಡಬಾರದೆಂದು ಬೆಳಗಾವಿ ಜಿಲ್ಲಾ ಮ್ಯಾಜಿಸ್ಟ್ರೇಟರು ವಿಧಿಸಿರುವರೆಂದು ವಿಶ್ವಸನೀಯವಾಗಿ ತಿಳಿಯುತ್ತದೆ. ಇವರ ಭಾಷಣಗಳಿಂದ ಜಾತಿ ಜಾತಿಗಳಲ್ಲಿ ದ್ವೇಷ ಹುಟ್ಟುವ ಸಂಭವವಿದೆಯೆಂದು ಕಾರಣ ತೋರಿಸಲಾಗಿದೆ.

ಮುಂಬಯಿ ಶಾಸನಸಭೆಯ ಸದ್ಯದ ಅಧಿವೇಶನ ಮುಕ್ತಾಯವಾದ ನಂತರ ಮುಂಬಯಿ ಸರಕಾರದ ಮುಖ್ಯ ಪಾರ್ಲಿಮೆಂಟರಿ ಸೆಕ್ರೆಟರಿಗಳಾದ ಶ್ರೀ ಕುಂಟೆಯವರು ಬೆಳಗಾವಿ ಜಿಲ್ಲೆಯಲ್ಲಿ ಸಂಚಾರ ಕೈಕೊಳ್ಳಲಿರುವರು. ಮಹಾತ್ಮರ ಮರಣದ ನಂತರ ಸಂಭವಿಸಿದ ಗಲಭೆಗಳ ಸಂಬಂಧದ ಪರಿಸ್ಥಿತಿಯನ್ನು ಪ್ರತ್ಯಕ್ಷ ತಿಳಿದುಕೊಳ್ಳುವದೆ ಅವರ ಸಂಚಾರದ ಉದ್ದೇಶ.

ಈ ಗಲಭೆಗಳ ಸಂಬಂಧದಲ್ಲಿ ಚಿಕ್ಕೋಡಿ ತಾಲೂಕಿನ ಬೇಡಕಿಹಾಳದಲ್ಲಿ ೩೬ ಜನರನ್ನು ಸೆರೆ ಹಿಡಿಯಲಾಗಿದೆ.

ಕರ್ನಾಟಕ ವಿಶ್ವವಿದ್ಯಾಲಯ ಸಮಿತಿ ಕಳೆದ ೨೭ ರಿಂದ ಮೂರು ದಿನಗಳ ವರೆಗೆ ಸಭೆ ಸೇರಿ ವರದಿಯ ಕರಡನ್ನು ಪರಿಶೀಲಿಸಿತು. ವಿಶ್ವವಿದ್ಯಾಲಯದ ಕಟ್ಟಡದ ಸ್ಥಳವನ್ನು ನಿರ್ಣಯಿಸುವದಕ್ಕಾಗಿ ಒಂದು ಸಮಿತಿಯನ್ನು ನೇಮಿಸಲಾಯಿತು. ಈ ಸಮಿತಿಯ ಕೊನೆಯ ಸಭೆ ಇದೇ ೨೭ ಕ್ಕೆ ಮುಂಬಯಿಯಲ್ಲಿ ಕೂಡುವದು.

ನಿರಜಿ ಸಂಸ್ಥಾನ ಪ್ರಜಾ ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ಶ್ರೀ ಜಿ. ಡಿ. ಪಾಟೀಲರನ್ನು ಸೆರೆ ಹಿಡಿಯಲಾಗಿದೆ.

ಬೆಂಗಳೂರು—ಮೈಸೂರು

ಬರುವ ಯುಗಾದಿಯಿಂದ ಬೆಂಗಳೂರಿನಲ್ಲಿ ಪ್ರಗತಿ ಎಂಬ ಹೊಸ ವಾರಪತ್ರಿಕೆ ಹೊರಡುವದು. ಶ್ರೀ ಎಂ. ಎಸ್. ಭಾರದ್ವಾಜರು ಸಂಪಾದಕರಾಗಿರುವರು.

ಮೈಸೂರಿನಲ್ಲಿ ವಾಣೀ ವಿಲಾಸ ಮಾರ್ಕೆಟಿನ ಹತ್ತರ ಹೊಸದಾಗಿ ನಿರ್ಮಿತವಾದ ಶ್ರೀ ಮೃತ್ಯುಂಜಯೇಶ್ವರ ಸ್ವಾಮಿ ಹಾಗು ಶ್ರೀ ನವಗ್ರಹಸ್ವಾಮಿ ದೇವಸ್ಥಾನದ ಆರಂಭೋತ್ಸವ ಮೈಸೂರ ಸಂಸ್ಥಾನ ಕಂದಾಯ ಮಂತ್ರಿ ಮಾನ್ಯ ಸಿದ್ದಯ್ಯನವರ ಹಸ್ತದಿಂದ ೨೯ ಕ್ಕೆ ಜರುಗಿತು. ಮೈಸೂರಿನಲ್ಲಿ ಹರಿಜನರಿಗೆ ಮುಕ್ತದ್ವಾರವಾದ ಮೊಟ್ಟಮೊದಲನೆ ಖಾಸಗಿ ದೇವಾಲಯವೆಂದರೆ ಇದೇ ದೇವಾಲಯ.

ಅಖಿಲ ಕರ್ನಾಟಕ ಆಯುರ್ವೇದ ಮಂಡಳದ ಹಿಂದಿನ ಅಧ್ಯಕ್ಷರಾದ ಡಾ. ಪಾರ್ಥಸಾರಥಿಯ ಅಯ್ಯಂಗಾರರು ಮುಂದಿನ ತಿಂಗಳು ಅಮೇರಿಕೆಯಲ್ಲಿ ಕೂಡುವ ಮಲೇರಿಯಾ ನಿವಾರಣಾ ಸಮ್ಮೇಳನಕ್ಕೆ ಹೋಗಲಿರುವರೆಂದು ತಿಳಿಯುತ್ತದೆ.

ಬಳ್ಳಾರಿ

ಶ್ರೀ ರಾಘವೇಂದ್ರ ಸ್ವಾಮಿಗಳ ಮಠಾಧೀಶರಾದ ಶ್ರೀ ಸುಧೀಂದ್ರ ತೀರ್ಥ ಶ್ರೀ ಪಾದಂಗಳವರು ಬಳ್ಳಾರಿಯ ಹತ್ತರ ಇರುವ ಅಲ್ಲೀಪುರಕ್ಕೆ ದಯ ಮಾಡಿಸಿರುವರು. ಇಲ್ಲಿ ಶ್ರೀ ಸುಶೀಲೇಂದ್ರ ತೀರ್ಥ ಶ್ರೀ ಪಾದಂಗಳವರ ವೃಂದಾವನವಿದೆ. ಮಂತ್ರಾಲಯದ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದ ರಕ್ಷಣೆಗಾಗಿ ಪೋಲೀಸರು ಕಾವಲು ಮಾಡುತ್ತಿರುವರು.

ನಾರಾಯಣದೇವರ ಕೆರೆ ಪೋಲೀಸರು ಕುರುದಗಡ್ಡಿ ಎಂಬ ದ್ವೀಪ (ತುಂಗಭದ್ರಾ ನದಿಯಲ್ಲಿ) ದ ಹಳ್ಳಿಯಲ್ಲಿ ಬೇಲೂರ ಮುದುಕಪ್ಪನ ಮನೆಯಲ್ಲಿ ೩೧ ಗಜ ಧ್ವಜ (ಅತ್ರಿ) ೮ ಸಣ್ಣ ತುಂಡುಗಳು ೨ ಡೈನಾಮೆಟ ಕೋಟೆಗಳನ್ನು ಶೋಧಿಸಿ ವಶಪಡಿಸಿಕೊಂಡರು. ಮುದುಕಪ್ಪನನ್ನು ಸೆರೆಹಿಡಿಯಲಾಗಿದೆ. ಮುದುಕಪ್ಪನ ಮನೆಯ ಒಬ್ಬ ಹೆಂಗಸು ದಿನವೂ ರಾತ್ರಿ ನಿಜಾಂ ಗಡಿಯಿಂದ ಬರುವ ಪಠಾಣರ ಸ್ನೇಹ ಮಾಡಿದ ಸಂಶಯದಿಂದ ಅವನ ಮನೆ ತಪಾಸ ಮಾಡಲಾಯಿತಂತೆ. ಇನ್ನು ನಾಲ್ಕು ಜನ ಹೆಂಗಸರು ಈ ರೀತಿ ಪಠಾಣರಿಗೆ ಸುದ್ದಿ ತಿಳಿಸುತ್ತಾರೆಂಬ ಸಂಶಯವಿದೆ.

ಹಾಂಗನೂರಿನಿಂದ ಬಂದ ಪ್ಲೇಗು ಕೇಸು ಬಳ್ಳಾರಿಯಲ್ಲಿ ಆದ್ದರಿಂದ ಮುನಿಸಿಪಾಲಿಟಿಯವರು ಯೋಗ್ಯ ಕ್ರಮತೆಗೆದುಕೊಳ್ಳುತ್ತಿರುವರು. ಉಷ್ಣತಾಮಾನವು ೧೦೩ ಡಿಗ್ರಿ ವರೆಗೆ ಏರಿದೆ.

ಖಾಕಿ ಸಮವಸ್ತ್ರ ಧರಿಸಿ ಸುಮಾರು ೨೫ ರಜಕಾರರು ಹೊಸಪೇಟೆ ತಾಲೂಕಿನ ವಲ್ಲಭಪುರಂ ಎಂಬ ಹಳ್ಳಿಯ ಮೇಲೆ ದಾಳಿ ಮಾಡಲುಯತ್ನಿಸಿದಾಗ ಅಲ್ಲಿಯ ಜನರು ಸಂಘಟಿತ ರೀತಿಯಿಂದ ಅವರನ್ನು ಎದುರಿಸಿ ಓಡಿಸಿದರು. ಈಗ ಪೋಲೀಸರು ಆ ಹಳ್ಳಿಯನ್ನು ರಕ್ಷಿಸುತ್ತಿದ್ದು ಕಲೆಕ್ಟರರು ಅದನ್ನು ಸಂದರ್ಶಿಸಿ ಹೋದರು.

ಉತ್ತರ ಕನ್ನಡ

ಮುಂಬಯಿ ಪ್ರಾಂತದ ಸರ್ಟಿಫಾಯಿಡ್ ಸ್ಕೂಲುಗಳ ಚೀಫ ಇನಸ್ಪೆಕ್ಟರ ಆದ ಶ್ರೀ ಇಂದಿರಾಬಾಯಿ ಇಡಗುಂಜಿಯವರು ಕಾರವಾರದಲ್ಲಿಯ ರಿಮಾಂಡ ಹೋಮನ್ನು ಸಂದರ್ಶಿಸಲು ಆಮಂತ್ರಣದ ಮೇರೆಗೆ ಆಗಮಿಸಿದ್ದರು. ಅವರು ೨೫ ನೆಯ ತಾರೀಕಿನ ದಿನ ಮಿತ್ರಸಮಾಜದಲ್ಲಿ ಸೇರಿದ್ದ ಸಭೆಯಲ್ಲಿ ಭಾಷಣ ಮಾಡುತ್ತ ಬಾಲಕರ ಕಾಯಿದೆ ಮತ್ತು ಕಾರ್ಯಪದ್ಧತಿ ಕುರಿತು ಮಾತಾಡಿದರು. ಮಹಾರಾಷ್ಟ್ರ ಗುಜರಾಥಗಳಿಗಿಂತ ಕರ್ನಾಟಕದಲ್ಲಿ ಈ ಕಾರ್ಯ ಹೆಚ್ಚು ಚೆನ್ನಾಗಿ ನಡೆಯುದಕ್ಕಾಗಿ ಸಂತೋಷವನ್ನು ವ್ಯಕ್ತಪಡಿಸಿದರು.

ಉತ್ತರ ಕನ್ನಡ ಜಿಲ್ಲಾ ಕಾಂಗ್ರೆಸ ಕಾರ್ಯಸಮಿತಿಯ ಸಭೆ ಸೇರಿ ಆಹಾರ ಪರಿಸ್ಥಿತಿಯ ಸಂಬಂಧದಲ್ಲಿ ವಿಚಾರ ಮಾಡಲಾಯಿತು. ಸಮುದ್ರ ಮಾರ್ಗದಿಂದ ಅಕ್ಕಿ ರಫ್ತು ಮಾಡಬಾರದೆಂದು ನಿಧಿಸಿದ್ದಕ್ಕೆ ಸಮಾಧಾನ ವ್ಯಕ್ತಪಡಿಸಲಾಯಿತು. ಇನ್ನು ಹೆಚ್ಚು ಪ್ರಯೋಜನವಾಗುವಂತೆ ಉಪಾಯ ಸೂಚಿಸಲು ಶ್ರೀ ಎಸ್. ಎಂ. ಮುಸೂರಕರ ಇವರಿಗೆ ಅಧಿಕಾರ ಕೊಡಲಾಯಿತು. ಆಯಾ ತಾಲೂಕಿನವರು ತಮ್ಮ ಹದ್ದಿನಲ್ಲಿ ಈ ಬಗ್ಗೆ ಯೋಗ್ಯ ಉಪಾಯ ಕೈಕೊಳ್ಳಬೇಕೆಂದೂ ಕೇಳಿಕೊಳ್ಳಲಾಯಿತು.

ಉತ್ತರ ಕನ್ನಡ ಜಿಲ್ಲಾ ಉಗ್ರಾಣಿಗಳು ಶಿರಸಿಯಲ್ಲಿ ಶ್ರೀ ಗಂಗೊಳ್ಳಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ತಮಗಾಗುತ್ತಿರುವ ಅನಾನುಕೂಲತೆಗಳ ಬಗೆಗೆ ಕೆಲ ಗೊತ್ತುವಳಿ ಮಾಡಿದರು. ಮಹಾತ್ಮರ ಸ್ಮಾರಕನಿಧಿ ಕೂಡಿಸಲೂ ನಿರ್ಣಯಿಸಲಾಯಿತು.

ಯುದ್ಧೋತ್ತರ ಪುನಾರಚನೆಯ ಯೋಜನೆಯ ಮೇರೆಗೆ ಉತ್ತರ ಕನ್ನಡ ಜಿಲ್ಲೆಯಲ್ಲಿ ನಾಲ್ಕು ದೊಡ್ಡ ಸೇತುವೆಗಳನ್ನು ಕಟ್ಟುವ ಕಾರ್ಯಕ್ಕೆ ೪೮-೪೯ ರಲ್ಲಿ ಪ್ರಾಮುಖ್ಯವನ್ನು ಕೊಡಲಾಗುವದು. ಅವಶ್ಯವಿದ್ದರೆ ಸರಕಾರದವರು ಸಾರ್ವಜನಿಕರಿಂದ ಸಾಲವನ್ನು ಪಡೆಯಬೇಕೆಂದು ಜಿಲ್ಲಾ ಗ್ರಾಮ ಸುಧಾರಣಾ ಸಮಿತಿ ಸರ್ವಾನುಮತದಿಂದ ನಿರ್ಣಯ ಮಾಡಿದೆ.

ಕನ್ನಡ ಸಂಸ್ಥಾನಗಳು

ಕೊಲ್ಹಾಪುರ ಸಂಸ್ಥಾನದ ಹಿಂದಿನ ೨೭ ಗಳಾದ ಶ್ರೀ ಬಿ. ಎಸ್. ಪಾಂಡೇಕರ ಮತ್ತು ಶ್ರೀ ಎಸ್. ಟಿ. ಸರನಾಯಕ ಇವರನ್ನು ಕೊಲ್ಹಾಪುರ ಸಂರಕ್ಷಿತ ಕಾಯದೆಯನ್ವಯ ೩೦ ನೆಯ ತಾರೀಕು ಸೆರೆ ಹಿಡಿಯಲಾಗಿದೆ. ಸರ ಸಾಯಕರ ಮನೆಯ ಝಡತಿಯೂ ಆಯಿತು. ಗಲಭೆಯ ವಿಚಾರಣೆಯನ್ನು ಪೋಲೀಸರು ಜೋರಿನಿಂದ ನಡೆಸಿದ್ದು ಈ ವರೆಗೆ ೨೦೦ ಕ್ಕಿಂತ ಹೆಚ್ಚು ಜನರನ್ನು ಸೆರೆ ಹಿಡಿಯಲಾಗಿದೆ.

ಇಚಲಕರಂಜಿ ಜಾಗೀರದಾರರನ್ನು ಕೆತ್ತು ಪಾಕಿ ಆ ಜಾಗೀರಿಯನ್ನು ಸರಕಾರದವರು ತಮ್ಮ ನಿಯಮಿತ ಅಧಿಕಾರಿಯ ವಶಕ್ಕೆ ಕೊಡಬೇಕೆಂದು ತಿಳಿಯುತ್ತದೆ. ಜಾಗೀರದಾರರು ಜಾಗೀರಿಯ ಆಂಗವು ಅಸ್ತಿಯನ್ನು ಅಪರಾಧಕ್ಕಾಗಿ ಮಾಡಿದ್ದೇ ಇದಕ್ಕೆ ಕಾರಣವಂತೆ.

ಕೊಲ್ಹಾಪುರ ಹಿಂದಿನ ಮಂತ್ರಿಗಳಾದ ಶ್ರೀ ಮಾಧವರಾವ ಬಾಗಲರು ಸರಕಾರದವರು ಅಡಳಿತಾಧಿಕಾರಿಯನ್ನು ನಿಯಮಿಸಿದ್ದರ ಸಂಬಂಧದಲ್ಲಿ ದಿಲ್ಲಿಗೆ ಶಿಷ್ಟಮಂಡಳ ಒಯ್ಯುವುದು ಕೊರಟಿದ್ದರಷ್ಟೆ. ಅವರು ಮುಂಬಯಿಯಿಂದಲೆ ಹಿಂದಿರುಗಿದ್ದು ಈಗ ಸಂಸ್ಥಾನದ ಜನರಿಗೆ ಏನಾದರೂ ಬಗೆಯ ಆಂದೋಲನಕ್ಕೆ ಕೈಹಾಕದೆ ಅಡಳಿತಗಾರರಿಗೆ ಸಂಪೂರ್ಣ ಸಹಾಯ ನೀಡಬೇಕೆಂದು ಹೇಳಿರುವರು. ಸಂಸ್ಥಾನದಲ್ಲಿ ಮುಂದಿನ ರಾಜ್ಯ ಪಡೆಗಳ ಬಗ್ಗೆ ಸಿದ್ಧರಾಗಬೇಕೆಂದೂ ಜನರಿಗೆ ಹೇಳುತ್ತಿರುವರು.

ಸೊಂಡೂರ ಸಂಸ್ಥಾನ ಪ್ರಸಿದ್ಧ ಕಾಂಗ್ರೆಸ ಪ್ರಕಟನೆಯೊಂದನ್ನು ಹೊರಡಿಸಿ ಸಂಸ್ಥಾನ ದೇಶಿ ಮದ್ರಾಸು ಪ್ರಾಂತದಲ್ಲಿ ಲೀನವಾಗುವದೆಂದು ಹೋಟೆ ಸುದ್ದಿ ನಿರಾಧಾರವೆಂದು ಸಾರಿದ್ದಾರೆ.

ಕೊಲ್ಹಾಪುರ ಪೋಲೀಸರು ಅಕ್ರಮ ಸಂಸ್ಥೆಯೆಂದು ಸಾರಲ್ಪಟ್ಟ ತಾಲೀಮ ಸಂಘವನ್ನು ಶೋಧಿಸಿ ಕೆಲ ಕಾಗದಪತ್ರಗಳನ್ನು ಮತ್ತು ಸಂಘದ ವಾರಪತ್ರಿಕೆಯನ್ನು ವಶಪಡಿಸಿಕೊಂಡರು. ಸಾಯಂಕಾಲ ಪ್ರಜಾಪರಿಷತ್ತಿನ ಕಾರ್ಯಾಲಯವನ್ನೂ ಶೋಧಿಸಿದರು.

ಕಲಬುರ್ಗಿಯಲ್ಲಿ ಶ್ರೀ ಬಳವಂತ ಎಂಬ ವಿದ್ಯಾರ್ಥಿ ಕಾರ್ಯಕರ್ತರನ್ನು ಬಂಧಿಸಿ ೬ ತಿಂಗಳ ಶಿಕ್ಷೆ ವಿಧಿಸಲಾಗಿದೆ. ಸ್ಥಳೀಯ ಹಿಂದು ವಕೀಲರೆಲ್ಲ ಕಳೆದ ೧೫ ನೆಯ ತಾರೀಕಿನಿಂದ ಕೋರ್ಟು ಕಚೇರಿಗಳಿಗೆ ಬಹಿಷ್ಕಾರ ಹಾಕಿದ್ದಾರೆ.

ನಾರಾಯಣಪೇಟದಲ್ಲಿ ಬಂಧಿಸಿದ ವಿದ್ಯಾರ್ಥಿಗಳನ್ನು ಉಪವಾಸ ಇಟ್ಟು ಮಹಾಬೂಬ ನಗರಕ್ಕೆ ಕಳಿಸಿರುವರು. ಮುಟಮುರಿ ಜಿಲ್ಲಾದಲ್ಲಿ ಬಂಧಿಸಲಾದ ಶ್ರೀ ಪಂಗಣ್ಣನವರನ್ನು ಎರಡಿನಗಳ ಒಯ್ದು ಉಪವಾಸವಿಟ್ಟು ಬಿಡಲಾಯಿತು. ಇನ್ನುಟದಲ್ಲಿ ಹಾಗು ಕನಕಪ್ಪಾಹಳ್ಳಿಗಳಿಗೆ ರಜಕಾರರು ಹಾಗು ಪೋಲೀಸರು ಬೆಂಕಿ ಹಚ್ಚಿ ೨೦ ಜನರನ್ನು ಜೀವಂತ ಸುಟ್ಟಿರುವರು.

ಗೋಮಾಂತಕದಲ್ಲಿ ಅಕ್ಕಿಯ ಹೋಳಿ

ಗೋಮಾಂತಕದಲ್ಲಿ ವ್ಯಾಪಾರಿ ಕೇಂದ್ರವಾದ ಮಡಗಾಂವದಲ್ಲಿ ಆರುತಿಂಗಳಿಗೂ ಮೂರುತಿಂಗಳಿಗೂ ಒಮ್ಮೆ ಅಕ್ಕಿಯ ರೇಶನಿಂಗು ದೊರೆಯುತ್ತದೆ. ಉಳಿದ ಸ್ಥಳಗಳಲ್ಲಿಯೇನೋ ಸರಿಯಾಗಿ ದೊರೆಯುತ್ತದೆ. ಮಡಗಾಂವದಲ್ಲಿ ಅಕ್ಕಿ ದೊರೆಯದಿದ್ದುದಕ್ಕೆ ಕಳ್ಳಪೇಟೆಯೇ ಕಾರಣವೆಂದು ಹೇಳಬಹುದು. ಕಳ್ಳಪೇಟೆ ಮಾಡುವುದಕ್ಕಾಗಿಯೆಂದು ಮಡಗಾಂವ ಬಜಾರದಲ್ಲಿ ಸಿಲ್ಕು ಇದ್ದ ೯೦೦ ಚೀಲ ಅಕ್ಕಿಯನ್ನು ಕಳೆದ ವಾರ ನಾಶ ಮಾಡಲಾಯಿತು. ೨೫೦ ಚೀಲ ಅಕ್ಕಿಯನ್ನು ಸಮುದ್ರದ ಒತ್ತಿನಲ್ಲಿ ಸುರುವಲಾಯಿತು. ಉಳಿದ ೬೫೦ ಚೀಲ ಅಕ್ಕಿ ಹೋಳಿ ಮಾಡಲಾಯಿತು. ಎಂದು ಮುಂಚಾಗಿ ವಿಶ್ವಸನೀಯವಾಗಿ ತಿಳಿಯುತ್ತದೆ. ಬೇರೆ ಅಕ್ಕಿ ನಾಶವಿಲ್ಲದೆ ಸಿಕ್ಕದಿದ್ದಾಗ ಮಡಗಾವದಲ್ಲಿ ಈರೀತಿ ಅಕ್ಕಿ ನಾಶವಾಗುತ್ತಿರುವದನ್ನು ನೋಡಿದರೆ ಯಾರಿಗಾದರೂ ವಿಷಾದವಾಗದಿರದು.

ಹಿಂದುಸ್ಥಾನಕ್ಕೆ ಅನೇಕ ವರ್ಷಗಳಿಂದ ಬೇಕಾಗಿರುವ ಟೆಲಿಫೋನಿನ ಸಾಧನ ಸಾಮಗ್ರಿಗಳನ್ನು ಕೊಳ್ಳಲು ಅಂಚೆ ತಂತಿ ಖಾತೆಯ ಡಾಯರೆಕ್ಟರರಾದ ಶ್ರೀ ಕೃಷ್ಣಪ್ರಸಾದರು ತಾ. ೨೯ ರಂದು ಮುಂಬಯಿಯಿಂದ ಬಲ್ಜಿಯಂಕ್ಕೆ ಉತ್ಕ್ರಾಮಣ ಮಾಡಿದರು. ಸಂಪರ್ಕ ಖಾತೆಯ ಕಾರ್ಯದರ್ಶಿ ಮಾನ್ ಹಾಗು ಮುಂಬಯಿ ಟೆಲಿಫೋನ ಕಚೇರಿಯ ನಟರಾಜನ್ನರು ಅವರೊಡನೆ ಹೊರಟರು. ಅದೇ ವಿಮಾನದಲ್ಲಿ ಹಿಂದೀ ಸೇನಾಧಿಕಾರಿ ವಿದ್ಯಾರ್ಥಿಗಳ ಗುಂಪೊಂದು ಹೆಚ್ಚಿನ ಶಿಕ್ಷಣಕ್ಕಾಗಿ ಲಂಡನ್ನಿಗೆ ಪ್ರಯಾಣ ಬೆಳೆಸಿತು.

ಇಂಗ್ಲೆಂಡಿನಲ್ಲಿ ಔದ್ಯೋಗಿಕ ಪ್ರಜಾಸತ್ತೆ

ಮುಂದಿನ ಚುನಾವಣೆ ಬರುವವರೆಗೆ ಬ್ರಿಟನ್ನಿನ ನಾಗರಿಕರು ಔದ್ಯೋಗಿಕ ಪ್ರಜಾಸತ್ತೆಯ ಬಗ್ಗೆ ಅರಿವು ಪಡೆದುಕೊಂಡು ನಿಶ್ಚಿತಾಭಿಪ್ರಾಯಕ್ಕೆ ಬರಬೇಕೆಂದು ಕೂಲಿಕಾರ ಪಕ್ಷವು ನಿಮಂತ್ರಿಸಿದೆ. ಈ ಆಂದೋಲನದ ನೇತೃತ್ವವು ಅಳವಡಿಸುತ್ತಿರುವ ಧೋರಣದ ಪರಿಣಾಮಪ್ರಕಾರಗಳನ್ನು ಚರ್ಚಿಸಿ ನಿರ್ಣಯಕ್ಕೆ ಬರಲು ಅದು ರಾಜಕೀಯ ಮತ್ತು ಮಜೂರ ಸಂಘಟನೆಗಳಿಗೆ ಬಿನ್ನವಿಸಿಕೊಂಡಿದೆ ಎಂದು ಮಜೂರ ಒಕ್ಕೂಟ ಸಂಘದ ಸದಸ್ಯರಾದ ಹರ್ಬರ್ಟ್ ಟ್ರೇಸಿಯವರು ಬರೆಯುತ್ತಾರೆ.

ಕೂಲಿಕಾರರ ಸಹಕಾರ

ಕೂಲಿಕಾರ ಪಕ್ಷವು ಅಧಿಕಾರ ವಹಿಸಿ ತನ್ನ ರಾಷ್ಟ್ರೀಕರಣ ಕಾರ್ಯಕ್ರಮವನ್ನು ಕಾಯಿದೆಗೆ ಪರಿವರ್ತಿಸುವ ನೊದಲು ಮಜೂರ ಒಕ್ಕೂಟ ಮತ್ತು ಕೂಲಿಕಾರ ಪಕ್ಷಗಳಲ್ಲಿ ಉದ್ದಿಮೆಗಳ ನಿಯಂತ್ರಣದಲ್ಲಿ ಕೂಲಿಕಾರರು ಭಾಗವಹಿಸುವ ಪರಿ ನಿರ್ದಿಷ್ಟ ವ್ಯಾಪ್ತಿಯ ಮೇಲೆ ದೊಡ್ಡದಾದ ವಿವಾದವೇ ನಡೆದಿತ್ತು. ಮಜೂರ ಒಕ್ಕೂಟಗಳು ರಾಷ್ಟ್ರೀಕೃತ ಉದ್ಯೋಗಗಳ ವ್ಯವಸ್ಥಾಪಕ ಮಂಡಲದ ಪ್ರತಿನಿಧಿಗಳನ್ನು ಕಳಿಸಬೇಕೋ ಅಥವಾ ತಮ್ಮ ಸದಸ್ಯರನ್ನು ಪ್ರಾತಿನಿಧ್ಯವಿಲ್ಲದೆ ಕೇವಲ ವೈಯಕ್ತಿಕ ಸ್ಥಾನದ ಮೇಲೆ ಕಳುಹಬೇಕೋ ಎಂಬುದೇ ವಿವಾದಾಸ್ಪದ ವಿಷಯವಾಗಿತ್ತು.

ಮಜೂರ ಒಕ್ಕೂಟ ಸಂಘದವರು, ರಾಷ್ಟ್ರೀಕೃತ ಉದ್ದಿಮೆಗಳ ನಿಯಂತ್ರಣ ಮಂಡಲದ ಸದಸ್ಯರನ್ನು ಸರಕಾರವೇ ನಿಯಮಿಸಬೇಕೆಂಬರು. ಅವರನ್ನು ಯೋಗ್ಯತೆಯ ಮೇರೆಗೆ ಆರಿಸಿಕೊಳ್ಳತಕ್ಕದ್ದು; ಆ ಬಗ್ಗೆ ವ್ಯಾಪಾರ ಪ್ರಪಂಚದಿಂದ ಯಾರನ್ನು ಬೇಕಾದರೂ ತೆಗೆದುಕೊಳ್ಳಬಹುದು. ಮಜೂರ ಒಕ್ಕೂಟಗಳಿಂದ ಆರಿಸಿಕೊಳ್ಳಬಹುದು, ಹಣಕಾಸಿನ ಪ್ರಪಂಚದಿಂದ ಇಲ್ಲವೆ ಆಡಳಿತ ಶಾಖೆಯಿಂದ ಬೇಕಾದರೂ ತೆಗೆದುಕೊಳ್ಳಬಹುದು. ಆದರೆ ಆಯಾ ಪಕ್ಷೀಯ ಪ್ರತಿನಿಧಿಗಳೆಂದು ಮಾತ್ರ ಅವರನ್ನು ತೆಗೆದುಕೊಳ್ಳಬಾರದು ಎಂದು ಅಭಿಪ್ರಾಯ ಪಡುತ್ತದೆ.

ಹಾಗಲ್ಲದೆ ಕೂಲಿಕಾರ ಪಕ್ಷವು, ತನ್ನ ಪ್ರತಿವರ್ಷದ ಪರಿಷತ್ತಿನಲ್ಲಿ ಮಜೂರ ಒಕ್ಕೂಟಗಳಿಗೆ ರಾಷ್ಟ್ರೀಕೃತ ಉದ್ದಿಮೆಗಳಲ್ಲಿ ಕಾಯಿದೆ ಬದ್ಧವಾಗಿ ಪ್ರಾತಿನಿಧ್ಯವಿರಬೇಕು ಎನ್ನುತ್ತ ಸಾಗಿತು. ಆದರೆ ಮಜೂರ ಒಕ್ಕೂಟದ ಸದಸ್ಯರು ಆ ವ್ಯವಸ್ಥಾಪಕ ಮಂಡಲದಲ್ಲಿ ನಿಯಮಿಸಲ್ಪಟ್ಟಲ್ಲಿ ತಮಗೆ ಮೊದಲಿದ್ದ ಸ್ಥಾನವನ್ನು ಬಿಟ್ಟುಕೊಡಬೇಕು ಅಥವಾ ತಮ್ಮ ಒಕ್ಕೂಟಕ್ಕಿರುವ ಜವಾಬುದಾರಿಯನ್ನು ಅದಕ್ಕೇ ತಿರುಗಿಕೊಟ್ಟು ಸುಮ್ಮಗೆ ಕುಳಿತುಕೊಳ್ಳಬೇಕು ಎಂದರು.

ವಿಶಿಷ್ಟ ಬಾಧ್ಯತೆ

ಪಕ್ಷದ ದಸ್ತರಗಳು ತೋರಿಸಿಕೊಡುವಂತೆ ಉದ್ಯೋಗಗಳಲ್ಲಿಯ ಆಡಳಿತಗಳು ಅವುಗಳ ದಿಗ್ದರ್ಶನ ಮತ್ತು ವ್ಯವಸ್ಥಾಪನೆಗಳನ್ನು ಹೊತ್ತಾಗಿ ವಿಶಿಷ್ಟ ಬಾಧ್ಯತೆಯುಳ್ಳವುಗಳನ್ನಾಗಿ ಪರಿವರ್ತಿಸಿದವು; ಈ ಬಾಧ್ಯತೆಯನ್ನು ಹೊರಲು ವಿಶೇಷ ತರಬೇತು ಹೊಂದಿದ ಸ್ತ್ರೀ ಪುರುಷರು ಅಗತ್ಯ; ಅವರಲ್ಲಿ ಪ್ರತಿಯೊಬ್ಬನೂ (ಳೂ) ಆ ಇಡಿ ಸಂಸ್ಥೆಗೆ ಜವಾಬುದಾರರೊಂದು ವಿಧದಿಂದ ತನ್ನ ಜ್ಞಾನ ಇಲ್ಲವೆ ಬುದ್ಧಿವಂತಿಕೆಯನ್ನು ಧಾರೆಯೆರೆಯಬೇಕು. ಎಲ್ಲರಿಗೂ ಅಂಥ ತರಬೇತಿಗೆ ಅವಕಾಶಬೇಕೆಂದು ಕೂಲಿಕಾರ ಪಕ್ಷವು ಇಂದು ಕೇಳುತ್ತಿದೆ.

ಕೂಲಿಕಾರರು ಉದ್ಯಮ ನಿಯಂತ್ರಣದಲ್ಲಿ ಭಾಗವಹಿಸುವಂತೆ ಮಾಡಲು ಸರಕಾರವು ಒಂದೊಂದೇ ಹೆಜ್ಜೆಯನ್ನಿಡಿಸಿ ಮುನ್ನಡೆಸಬೇಕಾಗಿದೆ. ಆ ಹಂತಗಳಲ್ಲಿ ಇಂದಿನ ಸರಕಾರವು ಈ ಗುರಿಯನ್ನು ಸಾಧಿಸ ಹೊರಟಿದೆ.

(೧) ರಾಷ್ಟ್ರೀಯ ಉದ್ಯಮ ಸಮಿತಿಯೊಂದನ್ನು ಸ್ಥಾಪಿಸಲಾಗಿದೆ;

(೨) ರಾಷ್ಟ್ರೀಯ ಉದ್ದಿಮೆಗಳ ವ್ಯವಸ್ಥಾಪಕ ಮಂಡಲದಲ್ಲಿ ಮಜೂರ ಒಕ್ಕೂಟಕ್ಕೆ ಪ್ರಾತಿನಿಧ್ಯ ಸಿಕ್ಕಿದೆ.

(೩) ರಾಷ್ಟ್ರೀಕೃತ ಉದ್ಯೋಗಗಳಲ್ಲಿ ಧೋರಣದ ಸಂಬಂಧದಲ್ಲಿ ಅಭಿಪ್ರಾಯ ವಿನಿಮಯ ಮಾಡಲು ಒಂದು ಸಮಿತಿಯನ್ನೇರ್ಪಡಿಸಲಾಗಿದೆ.

(೪) ಮಜೂರ ಒಕ್ಕೂಟಗಳ ಮತ್ತು ನಿರ್ದಿಷ್ಟ ಉದ್ಯಮಗಳಿಗೆ ಸಂಬಂಧಿಸಿದ ವಿವಿಧ ಸಲಹೆಗಾರ ಸಮಿತಿಗಳ ಪ್ರಾತಿನಿಧ್ಯಾನುಸಾರವಾಗಿ ವರ್ಧನ ಸಮಿತಿಯೊಂದನ್ನು ಏರ್ಪಡಿಸಿ, ತನ್ಮೂಲಕ ರಾಷ್ಟ್ರೀಕೃತವಾಗದಿರುವ ಉದ್ಯಮಗಳಲ್ಲಿ ಮಜೂರ ಸಂಘಗಳು ಭಾಗವಹಿಸಲು ಅವಕಾಶ ಮಾಡಿಕೊಡಲಾಗಿದೆ.

(೫) ಖಾಸಗಿ ಮತ್ತು ರಾಷ್ಟ್ರೀಕೃತ ಉದ್ಯೋಗಗಳೆರಡರಲ್ಲಿಯೂ ಸಂಯುಕ್ತ ಉತ್ಪಾದನ ಸಂಘ ಮುಂತಾದವುಗಳ ಮೂಲಕ ವರ್ತಮಾನ ಮಟ್ಟದ ವಿಚಾರವಿನಿಮಯಕ್ಕೆ ಅವಕಾಶ ಒದಗಿಸಿ ಕೊಡಲಾಗಿದೆ.

ಉತ್ಪಾದನ ಸಮಿತಿಗಳು

ಎಲ್ಲ ಉದ್ಯೋಗಗಳ ವಿಷಯವಾಗಿಯೂ ಸಂಪೂರ್ಣವಾಗಿ ವಿಚಾರ ವಿನಿಮಯ ಮಾಡುವುದು ಬ್ರಿಟನ್ನಿನ ಔದ್ಯೋಗಿಕ ಪ್ರಜಾಸತ್ತೆಯ ಆಧುನಿಕ ಲಕ್ಷಣವೆನಿಸಿದೆ. ಅದರ ಪ್ರಕಾರ ಕೂಲಿಕಾರ ಪಕ್ಷದ ದಪ್ತರಗಳು ಒತ್ತಿ ಹೇಳುವಂತೆ ಸಂಯುಕ್ತ ಉತ್ಪಾದನೆ ಸಮಿತಿಗಳನ್ನು ಕಾರಖಾನೆ, ಗಣಿ, ವರ್ತಕಾದಿಗಳಲ್ಲಿ ಅಂತಹ ಇತರ ಸಂಸ್ಥೆಗಳನ್ನು ವಿಸ್ತರಿಸಲಾಗಿದೆ. ಇದರ ಜೊತೆಗೆ ಪಕ್ಷ ಬಿನ್ನವಿಸಿಕೊಳ್ಳುವಂತೆ ಎಲ್ಲ ವರ್ಗದ ಕೆಲಸಗಾರರಲ್ಲಿಯೂ ಸಂಯುಕ್ತ ವಿಚಾರವಿನಿಮಯಕ್ಕೆ ಅವಕಾಶ ಮಾಡಿಕೊಡಬೇಕು ಎಂಬುದು ಕೂಡಿಕೊಂಡಿದೆ. ಇದನ್ನು ಉತ್ಪಾದನಕ್ಕೆ ಸಂಬಂಧಿಸಿದ ಎಲ್ಲ ಪ್ರಶ್ನೆಗಳಿಗೂ ಅನ್ವಯಿಸಬೇಕಲ್ಲದೆ ಕೆಲವೇ ಮುಖ್ಯ ವಿಷಯಗಳಿಗೆ ಮಾತ್ರ ಎಂದು ನಿರ್ಬಂಧಿಸಕೂಡದೆಂದು ಕೂಲಿಕಾರ ಪಕ್ಷದ ದಪ್ತರಗಳು ಎತ್ತಿ ಹೇಳುತ್ತವೆ.

ಸಂಯುಕ್ತವಾಗಿ ವಿಚಾರವಿನಿಮಯ ಮಾಡುವುದು ಖಾಸಗಿ ಉದ್ಯೋಗಗಳಿಗಿಂತ ರಾಷ್ಟ್ರೀಕೃತ ಉದ್ಯೋಗಗಳಲ್ಲೇ ಹೆಚ್ಚು ಯಶಸ್ವಿಯಾಗುವುದೆಂದು ಎಲ್ಲರೂ ಒಪ್ಪುತ್ತಾರೆ. ಅನೇಕ ವೇಳೆ ಕಾರಖಾನೆ ಗಿರಣಿ ಮುಂತಾದವುಗಳ ವ್ಯವಸ್ಥಾಪಕತ್ವವು ತಮ್ಮ ವಿಶೇಷ ಹಕ್ಕೆಂದು ತಿಳಿಯುವ ಖಾಸಗಿ ಉದ್ದಿಮೆದಾರರನ್ನು ಅವರ ಕೆಲಸಗಾರರೊಡನೆ ವಿಚಾರ ವಿನಿಮಯ ಮಾಡಲು ಒತ್ತಾಯಿಸಲು ಸರಕಾರಕ್ಕೆ ಕಷ್ಟವೆನಿಸುವುದು. ರಾಷ್ಟ್ರೀಕೃತ ಉದ್ಯೋಗವಾವುದರಲ್ಲೇ ಆಗಲಿ ಮಜೂರ ಸಂಘಗಳು ಭಾಗವಹಿಸಲು ಅವಕಾಶ ಮಾಡಿಕೊಡುವುದು ಸರಕಾರಕ್ಕೆ ಸುಲಭವಾದ ಕೆಲಸ.

ಒತ್ತಾಯವಿಲ್ಲ

ಇದನ್ನು ಮುಖ್ಯವಾದ ರಾಷ್ಟ್ರೀಕರಣ ಕಾಯಿದೆಗಳಿಂದಲೇ ಸಾಧಿಸಲಾಗಿದೆ. ಅವು ವಿಚಾರವಿನಿಮಯದ ಸಂಘ ಸಮಿತಿಗಳನ್ನು ನಿಯಮಿಸಲು ಅವಕಾಶ ಕಲ್ಪಿಸಿಕೊಡುತ್ತವೆ. ಕಲ್ಲಿದ್ದಲು ಉದ್ಯಮದ ರಾಷ್ಟ್ರೀಕರಣದ ಕಾಯಿದೆಯನ್ವಯ ರಾಷ್ಟ್ರೀಯ ಕಲ್ಲಿದ್ದಲು ಸಮಿತಿಯ ಮೇಲೆ ಒಂದು ತರಿಗೆಯನ್ನು ಹೇರಲಾಗಿದೆ. ತನ್ಮೂಲಕ ಸುರಕ್ಷಿತತೆ ಆರೋಗ್ಯ, ಕ್ಷೇಮ, ಗಣಿಗೆಲಸಿಗರ ಸಂಘಟನೆ, ಸಡತೆ, ಸಮಿತಿ ಮತ್ತು ಕೆಲಸಿಗರ ನಡುವಣ ಇತರ ಪ್ರಶ್ನೆಗಳು ಈ ಎಲ್ಲ ವಿಷಯಗಳ ಬಗ್ಗೆ ವಿಚಾರವಿನಿಮಯ ಸಂಸ್ಥೆಯೊಂದನ್ನು ಸ್ಥಾಪಿಸಲಾಗಿದೆ. ಇದೇ ವೇಳೆಗೆ ಇತರ ರಾಷ್ಟ್ರೀಕೃತ ಉದ್ಯೋಗಗಳಿಗೂ ವ್ಯವಸ್ಥೆ ಮಾಡಲಾಗಿದೆ.

ಪರೀಕ್ಷಾರ್ಥವಾಗಿ ಖಾಸಗಿ ಉದ್ಯೋಗಗಳಲ್ಲೂ ವಿಚಾರವಿನಿಮಯ ತತ್ವವನ್ನು ಜಾರಿಗೆ ತರಲಾಗುತ್ತಿದೆ. ಅದು ಕೇವಲ ಸ್ವಯಂಪ್ರೇರಿತ ಮತ್ತು ಸೂಚಕ ಧರ್ಮ ಬದ್ಧ ಎನಿಸಿದೆ. ಎಲ್ಲ ಉದ್ಯೋಗಗಳಲ್ಲೂ ಸಂಯುಕ್ತ ವಿಚಾರವಿನಿಮಯ ತತ್ವವನ್ನು ಒತ್ತಾಯದಿಂದ ಹೇರಬೇಕೆಂದು ಎಲ್ಲ ಮಜೂರ ಸಂಘಗಳೂ (Trade Unions) ಅಭಿಪ್ರಾಯ ಪಡುವುದಿಲ್ಲ. ಹೀಗೆ ಒತ್ತಾಯದಿಂದ ಹೇರ ಹೋದರೆ ಕಂಪನಿ ಒಕ್ಕೂಟ ತತ್ವಕ್ಕೆ ದಾರಿ ಮಾಡಿಕೊಟ್ಟಂತಾಗಿ ಮಜೂರ ಸಂಘಗಳ ವಿರುದ್ಧ ವಿಸಿಪ ಬಂಡವಾಳಿಗರು ಅವು ದುರ್ಬಲವಿದ್ದ ಸ್ಥಳದಲ್ಲಿ ಅಥವಾ ಅವುಗಳಿಲ್ಲದಲ್ಲಿ ಅವುಗಳಿಗೆ ಬದಲಾಗಿ ಸಂಯುಕ್ತ ಉತ್ಪಾದನ ಸಮಿತಿಗಳನ್ನು ಸ್ಥಾಪಿಸಿದರೂ ಸ್ಥಾಪಿಸಬಹುದು ಎಂದು ಕೆಲವು ಅನುಭವಿಕರಾದ (ಮಜೂರ ಒಕ್ಕೂಟಗಳ) ಮುಖಂಡರು ಅಭಿಪ್ರಾಯಪಡುತ್ತಾರೆ.

ಮೇಲಿನ ಬರಹದಿಂದ ಪ್ರಜಾಸತ್ತೆಯ ಮುಖ್ಯ ತತ್ವವಾದ ಘಟನಾತ್ಮಕ ಪದ್ಧತಿಯನ್ನು ಇಂಗ್ಲೆಂಡಿನಲ್ಲಿ ವಿವಾದಗಳನ್ನು ಬಗೆಹರಿಸಲು ಹೇಗೆ ಪ್ರಯೋಗಿಸಲಾಗುತ್ತಿದೆ ಎಂಬುದರ ಅರಿವಾಗುತ್ತದೆ. ವಿಚಾರವಿನಿಮಯ ತತ್ವವನ್ನು ಸರಕಾರ ಹೇಗೆ ಜನಪ್ರಿಯವನ್ನಾಗಿ ಮಾಡಿದೆ ಎಂಬ ಅಂಶವೂ ಮನನಾರ್ಹವಾಗಿದೆ. ಬಂಡವಾಳಿಗರು ಮತ್ತು ಕೂಲಿಕಾರರ ನಡುವಣ ಪ್ರಶ್ನೆಗಳನ್ನು ಬಗೆಹರಿಸುವುದರಲ್ಲಿ ಇಂತಹ ಉಪಾಯವು ಸರ್ವೋತ್ತಮವೆಂದು ಧಾರಾಳವಾಗಿ ಹೇಳಬಹುದು. ಬಂಡವಾಳ ಪದ್ಧತಿ ಮತ್ತು ಸಾಮ್ಯವಾದಗಳನ್ನು ಹಗ್ಗ-ಜಗ್ಗಕ್ಕೆ ಎಳೆದು ಕಲಹ ಈ ಸಂಪ್ರದಾಯವು ಭಾರತದಂತಹ ನಾಡಿಗೆ ಒಳ್ಳೆಯ ಮಾದರಿಯಾಗಬಹುದಾಗಿದೆ. ಎಲ್ಲ ವರ್ಗದ ಜನರನ್ನೂ ತೃಪ್ತರಾಗಿಡುವುದರಲ್ಲೇ ಸರಕಾರದೊಂದರ ಜಾಣತನವಿದೆ. ಸುದೀರ್ಘಕಾಲ ಹಿಡಿದರೂ ರಕ್ತರಹಿತ ಕ್ರಾಂತಿಗೆ ಅನ್ಯಮಾರ್ಗವಿಲ್ಲ. ಹಿಂದೀ ಸರಕಾರದಿಂದು ರಾಷ್ಟ್ರೀಕರಣ ಕೈಕೊಳ್ಳುತ್ತಿರುವಾಗ ಬಂಡವಾಲಶಾಹಿಯ ಮೂಲಾಶ್ರಯವಾದ ಇಂಗ್ಲೆಂಡು ಧೈರ್ಯವಾಗಿ ಅನೇಕ ಉದ್ಯೋಗಗಳನ್ನು ರಾಷ್ಟ್ರೀಕರಿಸುತ್ತಿರುವುದನ್ನು ನಮ್ಮ ರಾಜಕಾರಣಿಗಳೂ ಅಧಿಕಾರಾರೂಢರೂ ಗಮನಿಸುವದು ಕರ್ತವ್ಯಬೋಧಕವಾಗಿ ಪರಿಣಮಿಸದೇ?

— 'ಅಭ್ಯಾಸ'

ಭಾರತದ ವಿದೇಶ ಧೋರಣೆ

(ಲೇಖಕ :—ಸುದಾ)

ಭಾರತವು ಸ್ವತಂತ್ರವಾದಂದಿನಿಂದ ಪರರಾಷ್ಟ್ರಗಳಲ್ಲಿ ಅದರ ವರ್ಚಸ್ಸು ಕಡಿಮೆಯಾಗಿರುವದೆಂಬದನ್ನು ಎಲ್ಲರೂ ಒಪ್ಪಿದ ಮಾತಾಗಿದೆ. ಅಥವಾ ಇದನ್ನೇ ಇನ್ನೊಂದು ರೀತಿಯಿಂದ ಹೇಳಬೇಕಾದರೆ, ಸ್ವತಂತ್ರ ಭಾರತವು ಜಾಗತಿಕ ರಾಜಕಾರಣದಲ್ಲಿ ನಿರೀಕ್ಷಿಸಿದ ಪರಿಣಾಮವನ್ನುಂಟುಮಾಡಲಿಲ್ಲ. ಭದ್ರತಾ ಮಂಡಳದಲ್ಲಿ ಭಾರತಕ್ಕುಂಟಾದ ಸೋಲು ಇದರ ಪ್ರತೀಕವಲ್ಲದೆ ಮತ್ತೇನು?

ಯುಕ್ತ ರಾಷ್ಟ್ರ ಸಭೆಯಲ್ಲಿ ದಕ್ಷಿಣ ಆಫ್ರಿಕೆಯಲ್ಲಿಯ ಹಿಂದೀಯರ ಪ್ರಶ್ನೆಯನ್ನೆತ್ತಿದಾಗಲೇ ಭಾರತದ ವಿದೇಶ ಧೋರಣೆಯ ಬಲಾಬಲಗಳ ಪ್ರದರ್ಶನ ಪ್ರಾರಂಭವಾಯಿತೆನ್ನಬಹುದು. ಭಾರತದ ಸ್ವಾತಂತ್ರ್ಯ ಸಂಗ್ರಾಮದ ತಪಸ್ಸಿನ ಫಲದಿಂದಲೋ, ಅಥವಾ ಪ್ರಥಮ ಪ್ರಯತ್ನದ ಸಾಮರ್ಥ್ಯದಿಂದಲೋ, ಅದರಲ್ಲಿ ಪ್ರಥಮ ಬಾರಿಗೆ ಯಶಸ್ಸು ದೊರೆಯಿತು. ವರ್ಣ ದ್ವೇಷದ ನಿರ್ಮೂಲನದ ಬಗ್ಗೆ ಭಾರತ ಆಫ್ರಿಕೆಗಳೆರಡೂ ಒಂದು ವರುಷದಲ್ಲಿ ವರದಿ ಮಾಡಬೇಕೆಂದು ಯು. ರಾ. ಸಭೆಯು ಒಪ್ಪಿತು ಆದರೆ ಮರುವರುಷ ತಿರುಗುವಷ್ಟರಲ್ಲಿಯೇ ಜಾಗತಿಕ ನ್ಯಾಯಾನ್ಯಾಯಗಳ ತಕ್ಕಡಿಯ ತೂಕವು ತಪ್ಪಿತು. ಸ್ಮಟ್ಸರು ಬಹಿರಂಗವಾಗಿಯೇ ಯು. ರಾ. ಸಭೆಯ ನಿರ್ಣಯವನ್ನು ಧಿಕ್ಕರಿಸಿದರೂ ಯಾರೂ ಗಮನಿಸಲಿಲ್ಲ. ಶ್ರೀಮತಿ ವಿಜಯ ಲಕ್ಷ್ಮಿ ಪಂಡಿತರು ಅದೇ ಪ್ರಶ್ನೆಯನ್ನು ಯು. ರಾ. ಸಭೆಯಲ್ಲಿ ಎತ್ತಿದಾಗ ಭಾರತಕ್ಕೆ ತಕ್ಕ ಬಹುಮತ ದೊರೆಯದೆ ಆ ಗೊತ್ತುವಳಿ ಬಿದ್ದು ಹೋಯಿತು.

ಭದ್ರತಾ ಮಂಡಳದ ಚುನಾವಣೆಯಲ್ಲಿ ಭಾರತಕ್ಕುಂಟಾದ ಸೋಲು ಭಾರತದ ವಿದೇಶ ಧೋರಣೆಯಲ್ಲಿಯ ಇನ್ನೊಂದು ಆಘಾತ. ೧೧ ಸಲ ಚುನಾವಣೆ ನಡೆದರೂ ತಕ್ಕ ಬಹುಮತವನ್ನು ಪಡೆಯದೆ ಕೊನೆಗೆ ಭಾರತವು ಯುಕ್ರೇನಕ್ಕೆ ಸ್ಥಳವನ್ನು ಬಿಟ್ಟುಕೊಟ್ಟಿತು.

ಇದರಂತೆಯೇ ಮೂರನೆಯ ದೊಡ್ಡ ಸೋಲೆಂದರೆ ಕಾಶ್ಮೀರ ಚರ್ಚೆಯ ಪ್ರಥಮ ಘಟ್ಟದಲ್ಲುಂಟಾದ ಸೋಲು. ಇವು ಮೂರೂ ಸೋಲುಗಳು ಭಾರತದ ವಿದೇಶ ಧೋರಣೆಯಲ್ಲಿದ್ದ ಯಾವದೋ ಒಂದು ಕುಂದನ್ನು ಸೂಚಿಸುತ್ತವೆ ಎಂದು ಧಾರಾಳವಾಗಿ ಹೇಳಬಹುದು. ಎಂದೇ ಭಾರತದ ಪರರಾಷ್ಟ್ರ ಧೋರಣೆಯು ಬದಲಾಗಬೇಕೆಂಬ ಕೂಗಿಗೆ ಅವಕಾಶ ಸಿಕ್ಕಿದೆ. ಇದರದೇ ಪರಿಣಾಮವಾಗಿ ಮೊನ್ನೆ ಹಿರಿಯೋಲಗದಲ್ಲಿ ಕೆಲ ಸದಸ್ಯರು ಭಾರತದ ವಿದೇಶ ಧೋರಣೆಯನ್ನು ಚರ್ಚೆಗೆಳೆದರು. ಭಾರತದ ಮುಖ್ಯ ಮಂತ್ರಿಗಳೂ, ವಿದೇಶ ಮಂತ್ರಿಗಳೂ ಆದ ಪಂ. ಜವಹರಲಾಲರು ಅವುಗಳಿಗೆ ಉತ್ತರವನ್ನೂ ಕೊಟ್ಟರು. ಆದರೆ ಅವೆಲ್ಲವೂ ಸಮರ್ಪಕವಾಗಿರಲಿಲ್ಲವೆಂದು ಹೇಳಿದರೆ ಸಾರಾಸಾರ ವಿಚಾರ ಬುದ್ಧಿಯ ಯಾವನೂ ನಿರಾಕರಿಸಲಾರನು. 'ಸುಸ್ಪಷ್ಟ ಪರರಾಷ್ಟ್ರೀಯ ಧೋರಣೆ ಕಠಿಣ''ವೆಂದು ಮುಖ್ಯ ಮಂತ್ರಿಗಳು ಹೇಳಿದ್ದು ಬುದ್ಧಿ ಒಪ್ಪದ ಮಾತೇ. ನಾವೆಲ್ಲಿಂದ ಹೊರಟಿದ್ದೇವೆ? ಎಲ್ಲಿಗೆ ತಲುಪಬೇಕೆನ್ನುತ್ತೇವೆ? ಯಾವ ದಾರಿ ಯಾವ ಮಾರ್ಗ ಅನುಸರಿದ್ದೇವೆ? ಅದು ಸರಿಯೋ ತಪ್ಪೋ? ಎಂಬುದೆಲ್ಲವೂ ನಮಗೆ ಸ್ಪಷ್ಟವಾಗಿರಬೇಕು. ಇಲ್ಲವಾದರೆ ಗುರಿ ತಪ್ಪುವ ಸಂಭವ ಖಂಡಿತ. ಅಸ್ಪಷ್ಟ ಧೋರಣೆಯು ನಮ್ಮ ನಿಶ್ಚಿತ ಧ್ಯೇಯವನ್ನು ಸಾಧಿಸಿ ಕೊಡಲಾರದು. ಆದ್ದರಿಂದ ನಮ್ಮ ವಿದೇಶ ಧೋರಣೆ ಅಸ್ಪಷ್ಟವಾದುದ್ದೇಕೆ? ಅದರಲ್ಲಿಯ ತಪ್ಪು ತೊಡಕುಗಳಾವವು? ತಪ್ಪಿದ್ದೆಲ್ಲಿ? ತಿದ್ದಿಕೊಳ್ಳುವದೆಂತು? ಮುಂತಾದವುಗಳನ್ನು ಸ್ವಲ್ಪದರಲ್ಲಿ ವಿಚಾರಿಸುವಾ.

ಜಗವು ಇಕ್ಕೊಳದ ಬಾಯಾಗಿ ಕೂತಿದೆ

ಸಧ್ಯದ ಜಾಗತಿಕ ರಾಜಕಾರಣದ ತೂಗಾಟದಲ್ಲಿ ಬೀಳದೆ, ಯಾವ ರಾಷ್ಟ್ರದೊಡನೆಯೂ ವೈರತ್ವ ಬೆಳೆಸಿಕೊಳ್ಳದೆ, ಎಲ್ಲ ರಾಷ್ಟ್ರಗಳೊಡನೆ ಶಾಂತಿ ಸ್ನೇಹದಿಂದೊಡಗೂಡಿದ್ದು ಭಾರತದ ಶ್ರೇಯೋಭಿವೃದ್ಧಿಯನ್ನು ಸಾಧಿಸಿ ಜಾಗತಿಕ ಶಾಂತಿಗೆ ಪೂರಕನಾಗುವದೇ ಸ್ವತಂತ್ರ ಹಿಂದುಸ್ಥಾನದ ಪರರಾಷ್ಟ್ರ ಧೋರಣೆಯ ಸೂತ್ರವೆಂದು ಪಂ. ಜವಹರಲಾಲರು ಘೋಷಿಸಿದ್ದಾರೆ. ಜಗತ್ತಿನ ಯಾವದೇ ರಾಷ್ಟ್ರಕ್ಕಿರಬಹುದಾದ ಆದರ್ಶ ಪರರಾಷ್ಟ್ರ ಧೋರಣೆಯೆಂದರೆ ಇದೊಂದೇಯೆಂದು ಹೇಳಬಹುದು. ಪ್ರತಿಯೊಂದು ರಾಷ್ಟ್ರವೂ ಇದೇ ಧೋರಣೆಯನ್ನಿಟ್ಟುಕೊಂಡು ಇದಕ್ಕಾಗಿಯೇ ನಿಜವಾಗಿಯೂ ಹೆಣಗಾಡಿದಲ್ಲಿ ಜಗತ್ತಿನಲ್ಲಿ ಕಲಹ ಕೋಲಾಹಲಗಳೇ ಏಳುತ್ತಿರಲಿಲ್ಲ.

ಆದರೆ ಜಗತ್ತು ಈಗ ಆ್ಯಂಗ್ಲೋ ಅಮೇರಿಕನ್ ಮತ್ತು ರಶಿಯನ್ ಎಂಬ ಮುಖ್ಯ ಎರಡು ಭಾಗಗಳಾಗಿ ಹೋಗಿದೆ. ಜಾಗತಿಕ ರಾಜಕಾರಣವೆಂದರೆ ಈ ಎರಡು ಪಕ್ಷಗಳ ಅಧಿಕಾರ ಲಾಲಸೆಯ ಚದುರಂಗದಾಟ. ಭಾರತದಂತಹ ಅಪಾರ ಜನಶಕ್ತಿಯುಳ್ಳ ರಾಷ್ಟ್ರವು ಜಾಗತಿಕ ರಂಗವನ್ನು ಪ್ರವೇಶಿಸಿದ ಕೂಡಲೇ ಈ ಎರಡೂ ಬಣಗಳು ಮುಂದೆ ಬಿದ್ದು ಭಾರತವನ್ನು ತಮ್ಮೆಡೆಗೆ ಸೆಳೆದುಕೊಳ್ಳಲು ಆಶೆ ಪಟ್ಟವು. ಇದನ್ನು ಮುಂಗಂಡಿದ್ದ ಭಾರತವು ಎರಡೂ ಪಕ್ಷಗಳಿಗೆ ಸೇರದೆ ತನ್ನ ವ್ಯಕ್ತಿತ್ವವನ್ನು ಕಾಯ್ದುಕೊಳ್ಳುವ ಬಗ್ಗೆ ಎಚ್ಚರ ವಹಿಸಿತು.

ಹಿಂದುಸ್ಥಾನವನ್ನು ಆ್ಯಂಗ್ಲೋ ಅಮೇರಿಕನ್ನರ ಬಲೆಯಲ್ಲಿ ಸಿಕ್ಕಿಸಿಕೊಂಡು ರಶಿಯದ ವಿರುದ್ಧವಾಗಿ ಭಾರತದಲ್ಲಿ ಬಂದು ಭದ್ರವಾದ ಕೋಟೆಯನ್ನು ನಿರ್ಮಿಸಬೇಕೆಂದು ಹಾಕಿದ ಬಲೆಗಳು, ಭಾರತವು ಹೇಳ ತೊಡಗಿದ ರಶಿಯನ್-ಪರ ಘೋಷಣೆಗಳಿಂದ, ಬರಿಕನಸು ಮಾತ್ರವೆಂದು ಇಂಗ್ಲಂಡ ಅಮೇರಿಕೆಗಳು ಮನವರಿಕೆ ಮಾಡಿಕೊಂಡವು. ತತ್ಪರಿಣಾಮವಾಗಿ ಭಾರತವು ಸ್ಮಟ್ಸರ ವಿರುದ್ಧ ತಂದ ಗೊತ್ತುವಳಿಯು ಬೆಂಬಲಿಗರು ಸಿಗದೆ ಬಿದ್ದು ಹೋಯಿತು.

ಭಾರತದಲ್ಲಿ ಕಮ್ಯುನಿಸ್ಟರನ್ನು ಹತ್ತಿಕ್ಕುತ್ತ ವಿದೇಶಗಳಲ್ಲಿ ಇಂಗ್ಲಂಡ ಅಮೇರಿಕೆಗಳೊಡನೆ ಸಲಿಗೆ ನಡೆಸಿದ್ದ ಭಾರತವು ತನ್ನೆಡೆಗೆ ಬರುವದು ಅಸಾಧ್ಯವೆಂದು ಕಂಡುಕೊಂಡ ರಶಿಯವು ಭಾರತದ ವಿರುದ್ಧ ನಿಲ್ಲಿಸಿದ ಯುಕ್ರೇನದ ಉಮೇದುವಾರಿಕೆಯನ್ನು ಹಿಂತೆಗೆದು ಕೊಳ್ಳಲು ಸಿದ್ಧವಾಗಲಿಲ್ಲ. ಅಮೇರಿಕೆಯ ವಿರುದ್ಧ ಮತ ಕೊಡಲು ಪಣ ತೊಟ್ಟಿದ್ದ ಲ್ಯಾಟಿನ್ ಅಮೇರಿಕೆಯ ಗುಂಪನ್ನು ಭಾರತವು ತನ್ನೆಡೆಗೆ ಸೆಳೆದುಕೊಳ್ಳಲು ಸಮರ್ಥವಾಗಲಿಲ್ಲ. ಕೊನೆಗೆ ಭಾರತವು ಚುನಾವಣೆಯ ಕಣದಿಂದಲೇ ಹಿಂದೆಗೆಯಬೇಕಾಯಿತು.

ಸದ್ಭಾವನೆ ವೈರ ತಂದಿತು

ಈ ಘಟನೆಗಳಲ್ಲಿ ಭಾರತವು ತನ್ನ ವ್ಯಕ್ತಿತ್ವವನ್ನು ಕಾಯ್ದು ಕೊಂಡಿದೆಯೆಂದು ಕಂಡು ಬಂದರೂ ಅದು ತನ್ನ ಬಲಾಬಲಗಳ ಅರಿವಿಲ್ಲದೆ ಮುನ್ನುಗ್ಗುವದೆಂಬ ಇನ್ನೊಂದು ಮಾತು ವ್ಯಕ್ತವಾಗುತ್ತದೆ. ಅಣುಬಾಂಬು, ಕಾಸ್ಮಿಕ ಕಿರಣಗಳ ಸ್ಪರ್ಧೆಯಲ್ಲಿ ಕಾದಾಡುತ್ತಿರುವ ಅಮೇರಿಕೆ ರಶಿಯಗಳೊಡನೆ ಸರಿಸಮ ಶಕ್ತಿಯಲ್ಲಿ ಹೋರಾಡುವ ಸಾಮರ್ಥ್ಯವು ಹಿಂದುಸ್ಥಾನಕ್ಕಿಲ್ಲವೆಂಬದನ್ನು ಯಾವ ವ್ಯಾವಹಾರಿಕ ಜ್ಞಾನಿಯೂ ಒಪ್ಪುವನು. ಇಂತಹ ಸಮಯದಲ್ಲಿ ಅವುಗಳೊಡನೆ ಸ್ಪರ್ಧಿಸಿ ಕಣಕ್ಕಿಳಿದು ಸೋಲಿನ ಕುಂದನು ಮೋರೆಗೆ ಬಡಿದುಕೊಳ್ಳುವದಕ್ಕಿಂತ ಸುಮ್ಮನೆ ಪ್ರೇಕ್ಷಕನಾಗಿ ಉಳಿಯುವದರಲ್ಲಿಯೇ ವ್ಯಕ್ತಿತ್ವವು ಉಳಿಯುತ್ತದೆ. ಅಂದರೆ ಜಾಗತಿಕ ರಾಜಕಾರಣವೆಲ್ಲ ಈ ಎರಡು ಪಕ್ಷಗಳ ಕೈಯಾಟವೇ ಆಗಿರುವಾಗ ಅವರೆಡೆಗೆ ತಟಸ್ಥ ಪ್ರೇಕ್ಷಕ ವೃತ್ತಿಯನ್ನು ತಳೆಯುವದೇ ಮೇಲು. ಇದರಿಂದ ಯಾರೊಡನೆ ವೈರವೂ ಬೆಳೆಯುವದಿಲ್ಲ; ಸ್ನೇಹವೂ ಮುರಿಯುವದಿಲ್ಲ. ಆದರೆ ಭಾರತವು ಹಾಗೆ ಮಾಡಲಿಲ್ಲವೆಂಬದು ಜಾಗತಿಕ ಘಟನೆಗಳ ಮೇಲಿಂದ ಕಂಡುಬರುತ್ತದೆ.

ಮುಸ್ಲಿಂ ರಾಷ್ಟ್ರಗಳ ಸೌಹಾರ್ದವನ್ನು ಗೆಲ್ಲುವ ಆಶೆಯಿಂದ ಪಾಲಿಸ್ತಾನ ವಿಭಜನೆಯ ವಿರುದ್ಧ ಮತಕೊಟ್ಟಿತು. ಇದರಿಂದ ಆ್ಯಂಗ್ಲೋ ಅಮೇರಿಕನ್ನರ ದ್ವೇಷವು ಸ್ವಾಭಾವಿಕವಾಗಿಯೇ ಸಾಧಿಸಿತು. ಮುಂದೆ ಅಮೇರಿಕನ್ನರ ಕೈಗೊಂಬೆಯಾದ ಕೊರಿಯಾ ಸಮಿತಿಯ ಅಧ್ಯಕ್ಷ ಪದವನ್ನು ವಹಿಸಿತು. ಇದರಿಂದ ರಶಿಯವು ಭಾರತದ ಮೇಲೆ ಕೋಪ ಗೊಂಡಿತು.

ಭಾರತವು ಪಶ್ಚಿಮ ರಾಷ್ಟ್ರಗಳ ಕೈವಾರಿಯಾಗದೆ?

ಇವೆಲ್ಲ ಕಾರಣಗಳೊಡನೆ ಪಾಕಿಸ್ತಾನವು ಅಮೇರಿಕೆಯ ಆರ್ಥಿಕ ಸಹಾಯದ ಆವಶ್ಯಕತೆಯಲ್ಲಿರುವದೆಂಬದೊಂದು ಕಾರಣ ಕೂಡ

— ೧೬ನೆಯ ಪುಟಕ್ಕೆ

ಛಾಯಾ ಮನುಷ್ಯ!

ಶ್ರೀ ಸೇವ ನಮಿರಾಜ ಮಲ್ಲ

★ ★

ನಮ್ಮ ಜಗಳ ಬಹಳ ಸೂಕ್ಷ್ಮ ಜಗಳ. ಮಹತ್ವದ ಕಾರಣಗಳಿದ್ದಿಲ್ಲ. ಆ ವರೆಗೆ ನಾವಿಬ್ಬರೂ ಜೀವದ ಗೆಳೆಯರಾಗಿದ್ದೆವು. ಒಬ್ಬನಿಲ್ಲದಿದ್ದರೆ ಇನ್ನೊಬ್ಬನಿಗೆ ವ್ಯಾಕುಲ. ಊಟಕ್ಕೆ ಹೋಗುವಾಗ ಒಟ್ಟಿಗೆ ಹೋಗಬೇಕು. ಮನೋರಂಜನೆಗಳಲ್ಲಿ ಸಮಯ ಕಳೆಯುವುದಾದರೆ ಜೊತೆಯಲ್ಲೇ ಆಗಬೇಕು. ಏನಾದರೂ ಕ್ರಿಯೆಗೆ ಕೈಹಾಕಬೇಕಾದರೂ ಇಬ್ಬರೂ ಒಟ್ಟಿಗಿರಬೇಕು. ತಿರುಗಾಡ ಹೋಗುವಾಗಲಂತೂ ಒಬ್ಬರನ್ನೊಬ್ಬರು ಬಿಡಲಿಕ್ಕಿಲ್ಲ. ವಿದ್ಯಾರ್ಥಿ ಜೀವನಕ್ಕೆ ಸಹಜವಾದ ಅದಕ್ಕೆ ಮಾತ್ರ ಅನುಕೂಲವಾದ ಜೀವನ ಅದು.

ಅಲ್ಲದೆ ನಮ್ಮ ಸಂಭಾಷಣೆಗಳೇನಾದರೂ ಒಂದು ನಿರ್ದಿಷ್ಟ ವಿಷಯವನ್ನು ಮಾತ್ರ ಒಳಗೊಂಡಿರಲಿಲ್ಲ. ಮೇಲಾಗಿ ವಿಷಯಗಳ ಕುರಿತು ಯಾವ ಮೇರೆಯೂ ಇರಲಿಲ್ಲ. ಅದು ಪರಸ್ಪರ ಸಂಬಂಧಿಕರ ಮನೆಯ ವಿಷಯಗಳಿಂದ ಹಿಡಿದು ರಾಜಕೀಯ, ಚಲಚಿತ್ರ ಇತ್ಯಾದಿಗಳ ವರೆಗೂ ವಿಸ್ತರಿಸುತ್ತಿತ್ತು. ಹಾಸ್ಯ, ನಗು ಎಲ್ಲ ಮಾತುಕತೆಗಳಲ್ಲಿ ಪ್ರಧಾನ. ತುಂಟತನ, ಕುಚೇಷ್ಟೆ ಇವುಗಳೆಲ್ಲ ನಿಮಿಷ ನಿಮಿಷಕ್ಕೂ ಬೆನ್ನು ಬಿಡದೆ ಇರುವುವುಗಳು.

ಹೀಗೆ ನಮ್ಮಿಬ್ಬರ ಜೀವನ ರೂಪುಗೊಂಡಿತ್ತು. ಅದಕ್ಕಿಂತ ಹೆಚ್ಚಿನ ತಿಳುವಳಿಕೆ ಇಲ್ಲ; ಭಾವನೆ ಇಲ್ಲ.

ನಾನು ಹಾಗಾಗಬಹುದೆಂದು ನೆನೆಸಿರಲಿಲ್ಲ. ಅಬ್ಬ! ಅದನ್ನು ನೆನೆಯುವಾಗ ಈಗಲೂ ನನ್ನ ಹೃದಯ ನಾಲಿಗೆಗೆ ಬರುವುದು. ಬೆನ್ನುಹುರಿಯಲ್ಲಿ ವಿದ್ಯುತ್ ಸಂಚಾರವಾಗುವುದು. ಕಣ್ಣುಗಳಲ್ಲಿ ನೀರು ಉಕ್ಕಿ ಹರಿಯುವುದು.

ಸ್ವಭಾವತಃ ಮನುಷ್ಯ ಪ್ರೇಮದಲ್ಲಿ ನಂಟುಗೆ ಇಲ್ಲದವ ನಾನು. ಯಾರೊಡನಾದರೂ ನನಗೆ ಸ್ನೇಹ ಬೆಳೆಯುವುದೇ ಅಪರೂಪ. ಇದಕ್ಕೆ ಕಾರಣ ನಾನು ಬಾಲ್ಯದಲ್ಲಿ ಕಳೆದ ವಾತಾವರಣ. ಮರುಭೂಮಿಯಲ್ಲಿ ಬೆಳೆದ ಸಸಿಯ ಹಾಗೆ ನಾನು ಬೆಳೆದೆನು. ಎಲ್ಲಿದೆಯಿಂದಲೂ ಕಹಿ—ಉರಿ. ನನ್ನವರು ತನ್ನವರು ಎಂದು ಹೇಳಿಕೊಳ್ಳಬಹುದಾದವರು ತೀರ ವಿರಳ. ಹಾಗೆಂದ ಮೇಲೆ ನನ್ನ ತಲೆಯ ಮೇಲೆ ನನ್ನ ಕೈಯಿಟ್ಟುಕೊಂಡು ಹೋಗಲು ಆಸ್ಪದವುಳ್ಳ ಧಿಕಾರಿಯೂ ಆಗಿರಲಿಲ್ಲ. ಯಾರ ಯಾರ ದಯೆ—ಧರ್ಮ—ದಾನಗಳ ಸೆರೆಯಾಗಿ ಸೊಳ್ಳೆಯಂತೆ ಬಾಳಿದವ ನಾನು. ಹೀಗಾಗಿ ಕಟುತ್ವ ನನ್ನ ಅಂತರಾಳದಲ್ಲಿ ಬೇರು ಬಿಟ್ಟಿತ್ತು. ಯಾರನ್ನು ಕಂಡರೂ ನನ್ನ ಮನಸ್ಸಿನಲ್ಲಿ ಸಮಾಧಾನವಿಲ್ಲ. ಅಸೂಯೆಯೂ ಇಲ್ಲ. ಅವರ ಪರಿಚಯ ಮಾಡಿ ಕೊಳ್ಳಬೇಕೆಂಬ ಆತುರತೆಯೂ ಇಲ್ಲ. ಮತ್ತೆ ಒಂದು ವೇಳೆ ಪರಿಚಯವಾದರೂ ಪರಿಚಯಕ್ಕಿಂತಲೂ ಆಳ ಬೇರು ಇಳಿಸಿದ ಸ್ನೇಹ ಸಂಬಂಧಗಳು ಬೆರಳಿನಲ್ಲಿ ಲೆಕ್ಕ ಮಾಡುವಷ್ಟು. ಅವುಗಳ ದೃಢತೆಯನ್ನು ನಂಬುವುದು ಕಷ್ಟ. ಕೆಲವೊಮ್ಮೆ ನಿರಾಶೆಗಳು ಮನವನ್ನಿದೀ ಕವಿದು ಯಾರ ಸ್ನೇಹವೂ ಬೇಡವೆಂದು ತೋರುತ್ತಿತ್ತು.

ಇಷ್ಟೆಲ್ಲ ಅಡೆ-ತಡೆಗಳನ್ನು ಸೀಳಿ, ನಮ್ಮ ಸ್ನೇಹ ದಾರಿ ಮಾಡಿತ್ತು. ಅದನ್ನು ನನ್ನ ಈ ಮನೋಯಜ್ಞದ ಹವಿಸ್ಸನ್ನು ನಾನು ಸ್ವೀಕರಿಸಿ ರುಚಿಸಬೇಕಿತ್ತು; ಹೃದಯವನ್ನು ತಣಿಸಬೇಕಿತ್ತು. ಅದು ಆಗಲಿಲ್ಲ. ನಾನು ಇಚ್ಛಿಸಿದ ಬಯಕೆ ನೆರವೇರಲಿಲ್ಲ. ಪುನಃ ಮನುಷ್ಯ ಸ್ನೇಹವೆಂಬುದು ಬಿಸಿಲುಗುದುರೆಯೆಂಬ ಭಾವನೆಗೆ ಗೊಬ್ಬರ ಸಿಕ್ಕಿತು.

"ತಿರುಗಾಡಲು ಮತ್ತೆ ಹೋಗುವ"

"ಹುಂ"

ಇಬ್ಬರೂ ಸುಮ್ಮನಾದೆವು. ಮನಸ್ಸೆಲ್ಲ ಪುಸ್ತಕದೊಳಗೆ ಹರಿಯಿತು. ಒಬ್ಬನ ಇರವು ಇನ್ನೊಬ್ಬನಿಗೆ ಗೊತ್ತಿಲ್ಲ.

ಯಾರೋ ಕರೆದರು ಹೊರಗಿನಿಂದ ನಾನು ಬರುವುದಿಲ್ಲ, ಈಗ ಸಮಯವಿಲ್ಲ ಎಂದೆ. ಮರಗಳ ನೆರಳು ಉದ್ದುದ್ದ ಕಿಡಿಕಿಯಿಂದ ಕಾಣುತ್ತಿತ್ತು. ಸಂಜೆಯಾಗುತ್ತ ಬರುತ್ತಿದೆ.

ಇನ್ನು ಎಂಟು ಪುಟ ಓದಲು ಇದೆ. ಆ ಮೇಲೆ ಸ್ವಲ್ಪ ವಿಶ್ರಾಂತಿ ತೆಗೆದುಕೊಳ್ಳಬೇಕು.

ಹುಹ್ಹು ಯಾರದೋ ಒಬ್ಬರ ಕರೆ ಬಂತು; ಅದು ಸನಗಲ್ಲ ಅವನಿಗೆ. ಅವನು ಹೋಗಲಾರನೆಂಬುದು ನನಗೆ ಖಂಡಿತವಾಗಿತ್ತು. ನಾನು ಹಾಗೆ ಅವನಿಗೆ ಬಾಯಿ ಬಿಟ್ಟು ಹೇಳದಿದ್ದರೂ ಹಾಗೆ ಅವನು ಹೋದರೂ ನಾನು ಬರಲಾರೆನೆಂಬುದು ಅವನಿಗೆ ಸ್ಪಷ್ಟಗೊತ್ತಿತ್ತು.

ಏನೋ, ಅವನು ಎದ್ದ. ಅಂಗಿ ಹಾಕಿದ. ಮುಖತೊಳೆದು ಬಂದು ತಲೆಬಾಚಿದ. ನನಗಿನ್ನು ನಾಲ್ಕೈದು ಪುಟ ಮುಗಿಯಬೇಕು. ಪೆಟ್ಟಿಗೆಯಿಂದ ಹಣ ಕೂಡ ತೆಗೆದ.

"ಹೋಗುವ ಬಾ" ಕಡೆಗೆ ನನ್ನನ್ನುದ್ದೇಶಿಸಿ ಹೇಳಿದ. ಹೊರಗಿನಿಂದ ಕರೆದವರು ಕಾಯುತ್ತಿದ್ದರು.

"ಉಹುಂ" ಅಂದೆ ಪುಸ್ತಕದಿಂದ ದೃಷ್ಟಿಯನ್ನೆತ್ತದೆ.

"ಅಂದರೆ?"

"ಉಹುಂ"

"ಯಾಕೆ ಬರುವುದಿಲ್ಲ? ಹೋಗುವ ಎಂದು ಹೇಳಿದ್ದಿಯಲ್ಲ?"

"ಯಾಕೆ ಬರುವುದಿಲ್ಲ?" ಕಣ್ಣರಳಿಸಿ ಪುನರುಚ್ಚರಿಸಿದೆ "ನನ್ನ ಇಚ್ಛೆ ನೀನು ಹೋಗಬಹುದು"

ಮತ್ತೆ ಅವನು ಅಲ್ಲಿ ನಿಲ್ಲಲಿಲ್ಲ. ಹೊರಟು ಹೋದನೇ ಹೋದ.

ನನ್ನ ಮುಖದಲ್ಲಿ ಬೆವರಿಳಿಯ ತೊಡಗಿತು. ಛೆ! ಏನು ಧಿಕ್ಕಾರ! ನನ್ನ ಮೂರ್ಖತನವನ್ನು ನಾನು ಹಳಿಯ ಬೇಕಾಯಿತು. ಒಂದೆಡೆಯಿಂದ ಮನಸ್ಸು, ನನಗೆ ಬುದ್ಧಿ ಹೇಳುವ ಮನಸ್ಸು ನನ್ನನ್ನು ನೋಡಿ ನಗುತಿದ್ದಂತೆ ಭಾಸವಾಯಿತು. ಅದರ ನಿರ್ದೇಶವನ್ನು ವಿರೋಧಿಸಿದ್ದಕ್ಕೆ ಸಿಕ್ಕಿದ ಪ್ರತಿಫಲವೆಂದು ಅದು ನನ್ನನ್ನು ಮೂದಲಿಸುತ್ತಿದೆಯೋ ಎಂದು ನನಗೆ ಹೊಳೆಯಿತು. ಕೈಯಲ್ಲಿದ್ದ ಪುಸ್ತಕ ತಂತಾನೇ ಮುಚ್ಚಿತು. ತಲೆ ಕೆಳಗೆ ಜೋಲುತ್ತ ಬರುತ್ತಿತ್ತು.

ನೆನೆನೆನೆಯುತ್ತ ಬೆಚ್ಚಿ ಬಿದ್ದೆ. ಥಕ್ಕನೆ ಎದೆಯನ್ನು ಮುಟ್ಟಿ ನೋಡಿದೆ ಅದು ಪ್ರಶಾಂತವಾಗಿತ್ತು.

ನನ್ನ ಕಣ್ಣೆದುರು ಚಿತ್ರಗಳು ಬರುತಿದ್ದವು. ಅವನು ಬೇರೆಯವರೊಡನೆ ನಲಿಯುತ್ತ ಹೋಗುತ್ತಿರುವುದು ನನ್ನನ್ನು ನೆನೆಸದೆ! ಅವರೊಡನೆ ತಂಪಾದ ಗಾಳಿಯನ್ನು ಸೇವಿಸುತ್ತಿರುವುದು; ನಗೆಯಾಡುತ್ತಿರುವುದು. ಇಷ್ಟಾದರೂ ನನ್ನ ಗೊಡವೆಯಿಲ್ಲ! ನಾನು ಇಲ್ಲಿ ಅವನ ಕುರಿತಾಗಿ ಯೋಚಿಸುತ್ತಿರುವವನ ಗೊಡವೆಯಿಲ್ಲ!

ಬಿಸಿಲು ಜಾರುತ್ತಿತ್ತು. ಕುರ್ಚಿಯಿಂದೆದ್ದೆ ತೂಗಾಡಿಸಿದ್ದ ಅಂಗಿಯನ್ನು ಸಿಕ್ಕಿಸಿಕೊಂಡು ಹೊರಟೆ ಒಬ್ಬನೇ. ಎಂದಿನಂತೆ ನಡುವೆ ಸಿಕ್ಕಿದವರನ್ನು ಆದಷ್ಟು ತಪ್ಪಿಸಿ ತಪ್ಪಿಸಿಕೊಂಡು ಒಂದು ಪ್ರಶಾಂತವಾದ ಬಯಲಿಗೆ ಹೋಗಿ ಕಲ್ಲಿನ ಮೇಲೆ ಕುಳಿತುಕೊಂಡೆ. ಚಂದ್ರನು ಆಗತಾನೇ ಮೂಡುತಿದ್ದನು. ನನ್ನೆದುರಿನ ಮರಗಳ ಎಲೆಗಳೆಲ್ಲ ತಿಂಗಳ ಬೆಳಕಿಗೆ ಹೊಳೆಯುತಿದ್ದುವು. ಅದು ಹಳ್ಳಿಗೆ ಹೋಗುವ ದಾರಿಯಾದುದರಿಂದ ಆಗೊಮ್ಮೆ ಈಗೊಮ್ಮೆ ಜನರು ಹೋಗುತ್ತಿದ್ದರು ಎಲ್ಲಕ್ಕಿಂತ ಹೆಚ್ಚು ತಂಗಾಳಿ ಬೀಸುವ ರಭಸ ನನ್ನನ್ನು ಮೇಲಕ್ಕೆತ್ತಿಕೊಂಡು ಹೋಗುವುದೋ ಎಂದು ಭಾಸವಾಗುತಿತ್ತು. ಒಟ್ಟಿನಲ್ಲಿ ಅದು ಏಕಾಂತ ಯೋಚಿಸಲು ಯೋಗ್ಯವಾದ ಅನುಕೂಲವಾದ ಸ್ಥಳ.

ಆಗ ಬಂದ-ಬರುತಿದ್ದ ಭಾವನೆಗಳನ್ನು ಬರೆದಿಡಲು ಸಾಧ್ಯವಿಲ್ಲ. ಆಗ ಮನಸ್ಸೊಂದು ಭಾವನೆಗಳನ್ನು ಹೊರಕಾರುವ ಕಾರಂಜಿಯೇ ಆಗಿ ಹೋಗಿತ್ತು. ಎಲ್ಲಿನೋಡಿದರೂ ಭಾವನೆಗಳೇ! ಚಂದ್ರನ ಬೆಳಕು, ಛೆ! ಏನು ರಮಣೀಯ! ಭೂಮಿಗೆ, ಪ್ರಕೃತಿ ರಾಶಿಗೆ ಅದೊಂದು ತೊಡಿಗೆಯ ಉಡುಗರೆ! ಮುಟ್ಟಿದ್ದೆಲ್ಲ ಬೆಳ್ಳಗೆ. ಹಾಲು ಮೆಲ್ಲ ಮೆಲ್ಲನೆ ತೇಲಾಡುತ್ತ ಅವನು ಮೇಲೇರುತ್ತಿರುವನು. ಮಧುರ ಸಾಮರಸ್ಯವಿದೆ ಆ ನಡಿಗೆಯಲ್ಲಿ. ನೋಡಿ ನೋಡಿ ನನ್ನ ಕಣ್ಣುಗಳು ಆಯಾಸಗೊಳ್ಳಲಿಲ್ಲ. ಸಮಯ ಹಾಳಾಗುತ್ತದೆಂದು ಮನಸ್ಸು ಕಾತರಗೊಳ್ಳಲಿಲ್ಲ. ಎಷ್ಟು ಶುಭ್ರ, ಬಿಳಿಯ ಚಂದ್ರ!

ಆಗೊಂದು ಕಪ್ಪು ಮೋಡ ಅವನಿಗೆ ಅಡ್ಡ ಬಂತು. ತಿಂಗಳ ಬೆಳಕು ಮಾಯವಾಯಿತು.

ನನ್ನ ಎದೆ ಧಸಕ್ಕೆಂದಿತು. ಹಾಯ್ ಚಂದ್ರನಿಲ್ಲ! ಕತ್ತಲು, ಎಲ್ಲೆಲ್ಲೂ ಕತ್ತಲು! ಕೇಂದ್ರೀಕೃತವಾಗಿದ್ದ ಮನಸ್ಸು ಈಗ ಪುನಃ ನಿರಾಶಗೊಂಡಿತು ಭಾವನೆಗಳ ವಿಪ್ಲವ ಶುರುವಾಯಿತು!

ಬುದ್ಧಿ ಮರಳಿ ಮೂದಲಿಸುತ್ತ ನಗುತಿತ್ತು.

ಯೋಚನೆಗಳೆಲ್ಲ ಮುಂದೆ ಬಂದುವು. ವೈರಾಗ್ಯವಾಗಿ ಮಾರ್ಪಾಟುಗೊಳ್ಳಲು ನನಗೆ ಆಗ ಉತ್ತಮ ಸಂಧಿ. ಚಂದ್ರನಿಗೆ ಕವಿದ ಕಾರ್ಮೋಡದೊಡನೆ ನನ್ನ ಹೃದಯಕ್ಕೆ ನಿರಾಶೆ ಕವಿಯಿತು. ಇಬ್ಬರ ಪ್ರೇಮ ಯಾವಾಗಲೂ ಸಮತೂಕವಾಗಿರದು. ಒಂದು ಹಗುರ ಒಂದು ಭಾರವಾಗಿರಲೇಬೇಕು. ಹೀಗಿರುವಾಗ ಎರಡೂ ಕೆಟ್ಟಿದ್ದೇ. ನನ್ನದು ಭಾರ ಪ್ರೇಮವಾಯಿತು. ಅದಕ್ಕೆ ಪ್ರತಿಯಾಗಿ ಅವನದು ಹಗುರ ಸ್ನೇಹ.

ಹೌದು ನನ್ನೊಡನೆ ಮನಸ್ಸನ್ನು ತೂಕ ಮಾಡುವ ತಕ್ಕಡಿಯಿಲ್ಲ. ಈ ವಗೆರೆ ಯಾರಾದರೂ ಸಂಶೋಧಿಸುವ ಯತ್ನವನ್ನು ಮಾಡಿಲ್ಲ.

ಆದರೂ ನನಗೆ ತೂಕ ತಿಳಿಯಿತು.

ಅವನು ನನ್ನ ಗೆಳೆತನವನ್ನು ಬಿಟ್ಟಿರಬೇಕು. ಅವನೊಡನೆ ಇದ್ದ ನನ್ನ ಪ್ರತಿಯೊಂದು ಕಿರು ಪದ ಅಣು ಕಣಗಳೂ ಬೇತಾಳದಂತೆ ನನ್ನ ಕಣ್ಮುಂದೆ ನಿಂತಿದ್ದುವು. ಮರಳಿ ನನ್ನ ಯಥಾಪ್ರಕಾರದ ಯೋಚನೆಗಳು ಮೊದಲಾದುವು.

ಸ್ನೇಹವೊಂದನ್ನು ಬಿಟ್ಟರೆ ಅವನು ನನ್ನನ್ನು ಗಣ್ಯಮಾಡುವ ಅವಶ್ಯವಿಲ್ಲ. ನಾನೂ ಹಾಗೆಯೇ ನನಗೆ ಬಹಳ ಕಷ್ಟದಿಂದ ದಿನ ಸಾಗುತಿದ್ದರೂ ಅವನ ಹಂಗು ಸ್ವಲ್ಪವೂ ಇಲ್ಲ. ಅಲ್ಲದೆ ಅವನನ್ನು ಮೆಚ್ಚಿಸುವಂತಹ ಏನಾದರೂ ಅಮೂಲ್ಯ ಗುಣಗಳೂ ನನ್ನಲ್ಲಿಲ್ಲ. ಬಹುಶಃ ಅವನಿಗೆ ನಾನು ಬೇಡ. ಅವನು ನನ್ನ ಮೇಲೆ ತ್ರಾಸಗೊಂಡಿರಬೇಕು.

ಕೊನೆಯ ನಿರ್ಧಾರ ಅವನ ದಾರಿ ಅವನಿಗೆ; ನನ್ನದು ನನಗೆ.

ಇನ್ನು ಹೊಸ ಸ್ನೇಹ ಬೆಳೆಸಿದರೆ? ಅದರ ಗತಿಯೂ ಹೀಗೆಯೇ. ನನ್ನ ಮನಸ್ಸು ಬಹಳ ಮೃದು; ಬಹಳ ಸೂಕ್ಷ್ಮಗ್ರಾಹಿ. ಅದು ಯಾವ ಕಡೆಯಲ್ಲಿಯೂ ಅಡ್ಡ ನಿಲ್ಲಬಹುದು.

ಹಾಗಾದರೆ ನನ್ನ ಯಥಾರ್ಥ ಸ್ನೇಹ ಜೀವನ ಇಲ್ಲಿ ಅಂತ್ಯವಾಗಬೇಕು. ಇನ್ನು ಮುಂದರಿಯಬಾರದು. ಯಾರ ಆದರವನ್ನು ಉಳಿಸಿಕೊಳ್ಳುವ ಯೋಗ್ಯತೆ ನನ್ನಲ್ಲಿಲ್ಲ. ನಾನು ನಾನಾಗಿಯೇ ಇರಬೇಕು—ಏಕಾಕಿಯಾಗಿ. ಮತ್ತೆ ಲೋಕದಲ್ಲಿ ತಿರುಗಾಡುವ ಪಾತ್ರವಹಿಸಿದರಾಯಿತು. ಸ್ನೇಹದ ಭೂಮಿಕೆ ಅಷ್ಟೆ.

ಮರಳುವಾಗ ನನ್ನ ತಲೆ ಭಾರವಾಗಿತ್ತು. ದೃಷ್ಟಿ ಆಕಾಶದಲ್ಲಿತ್ತು. ಬದಿಯಲ್ಲಿದ್ದ ರಸ್ತೆಯ ದೀಪಗಳು ಥಳಥಳನೆ ಹೊಳೆಯುತಿದ್ದುವು. ನಾನು ಮುಖತಿರುಗಿಸಿ ನಡೆದೆ. ಯಾರೂ ಕಣ್ಣಿಗೆ ಬೀಳಲಿಲ್ಲ.

ಅಂದು ರಾತ್ರಿ ಮೌನ. ಅವನು ನನ್ನೆದುರು ಕುಳಿತಿದ್ದಾನೆ. ನಾನು ನನ್ನ ಪಕ್ಕಕ್ಕೆ ಇದ್ದೇನೆ. ಅವನಾಗಿ ಸುದ್ದಿ ತೆಗೆಯಲಿಲ್ಲ. ನಾನಾಗಿ ಮಾತನಾಡುವ ಗೋಜಿಗೆ ಹೋಗಲಿಲ್ಲ. ಆದರೆ ಈಗ ಮನಸ್ಸು ನನ್ನದು ಕಣದಿತ್ತು. ಬಹಳ ವೇಗದಿಂದ ಮನಸ್ಸಿಟ್ಟು ಓದುತಿದ್ದೆ. ಗಂಟೆ ಎಂಟು ಒಂಭತ್ತು, ಹತ್ತು ಹನ್ನೊಂದು......

ಅವನು ಮಲಗಲು ಹೋದ.

ಗಂಟೆ ಹನ್ನೆರಡು. ನನ್ನ ಸ್ಫೂರ್ತಿ ಇನ್ನೂ ಕುಂದಿರಲಿಲ್ಲ. ಓದಲು ಬೇಕಾದಷ್ಟು ಸಾಮರ್ಥ್ಯ ಇನ್ನೂ ಉಳಿದಿತ್ತು. ಏನು ಸಾಹಸ!

ಮರುದಿನ ಬೆಳಿಗ್ಗೆ ನಾನು ಸಮಯ ವಾದೊಡನೆ ಎದ್ದು ಊಟಕ್ಕೆ ಹೋದೆ. ಎಂದಿನಂತೆ ಅವನ್ನು ರೀತಿಗೆ ಕರೆಯಲಿಲ್ಲ. ನನ್ನ ಮನಸ್ಸು ಈ ಮಾರ್ಗಕ್ಕೆ ಸಿದ್ಧವಾಗಿದೆ ಅನ್ನುತ್ತಿತ್ತು. ಸಿದ್ಧವಿದ್ದ ಆಗಾಧ ಆತ್ಮಶಕ್ತಿಯ ಅಭಿಮಾನವು ಆಗ ತಾನೇ ನನಗೆ. ಅವಶ್ಯವಾದರೆ ಎಂಥ ತ್ಯಾಗಕ್ಕೂ ಹಿಂಜರಿಯುವವನಲ್ಲ ನಾನು!

ಮತ್ತೆ ಕೇಳಿದ ಅವನು, ನನಗೆ ಕೋಪವಾಗಿದೆಯೋ ಎಂದು. ನಾನು ತಿರಸ್ಕಾರ ದೃಷ್ಟಿಯಿಂದ "ಹೂ ಹೂಂ" ಎಂದೆ.

"ಅಲ್ಲ, ನನ್ನೊಡನೆ ಈಗ ಮಾತನಾಡುತ್ತಿಲ್ಲ?"

ಇದಕ್ಕುತ್ತರವಾಗಿ ನಾನು ಅಲ್ಲಿ ನಿಲ್ಲಲಿಲ್ಲ. ಛೆ! ಅವನಿಗೆ ನಾನು ಏಲ್ಲ ಹೇಳಬೇಕು! ಬೇಡ, ಬೇಡ, ಅವನಿಗೆ ನಾನು ತಿಳಿಯುವುದೆ. ಅವನು ಈ ಒಳಗೇ ನನ್ನನ್ನು ತಿಳಿಯಬೇಕಿತ್ತು. ಹಾಗೆ ಆಗಲಿಲ್ಲ. ನಮ್ಮ ನಡುವಿನಲ್ಲಿದ್ದ ಸಿರು ತೆಗ್ಗುಗಳೆಲ್ಲ ವಿಶಾಲ ಸ್ವರೂಪ ತಾಳಿದುವು.

ಮುಂಬರುವ ದಿನ ಅವನು ಅಷ್ಟು ಸ್ನೇಹಮಯನಾಗಿ ಕಂಡ ಅವನು ನನಗೆ ಇಂದು ಗರ್ವದ, ಸಿರಿವಂತಿಕೆಯ ಮುದ್ದೆಯಾಗಿ ಕಂಡ.

ನಿದ್ದೆ ಬಂದವನನ್ನು ಹಾಸಿಗೆಗೆ ದೂಡುವವನಾಗಿರಬಹುದು ಅವನಿಗೆ. ಮತ್ತೆ ಅವನು ಮಾತನಾಡಿಸುವ ಪ್ರಯತ್ನ ಮಾಡಲಿಲ್ಲ. ನಾನು ಅವನೊಡನೆ ಮಾತನಾಡದಿದ್ದುದು ಏನೂ ಪರಿಣಾಮವನ್ನು ಉಂಟು ಮಾಡಲಿಲ್ಲ. ಅವನು ಎಂದಿನಂತೆ, ನಗುತ್ತ ನಲಿಯುತ್ತ ಇದ್ದ. ಬದಲಾದುದು ನನ್ನ ದಾರಿ ಮಾತ್ರ.

ದಾರಿ ಮಾತ್ರವಲ್ಲ, ದೃಷ್ಟಿ ಕೂಡ ಬದಲಿತು.

ನನ್ನಿಂದ ಈಗ ಅವನು ಸ್ವತಂತ್ರನಾದ. ನಾನು ಮಾತ್ರ ಎಲ್ಲರಿಂದ, ಲೋಕದಿಂದ ಸ್ವತಂತ್ರನಾದೆ. ನನ್ನ ಹೃದಯ ಇನ್ನು ಅಭೇದ್ಯ.

ನನ್ನನ್ನು ನಾನು ತಿಳಿದೆ: ಇನ್ನು ಸಾಯುವ ವರೆಗೆ ರಮಣೀಯವಾದ ಪ್ರೇಮಜೀವನ ನನ್ನದು. ಅದರಲ್ಲಿ ಅಸೂಯೆಯಿಲ್ಲ, ಜಗಳವಿಲ್ಲ, ಸುಖದುಃಖಗಳೆಲ್ಲ ಸಮಪಾಲು. ನನ್ನ ತೃಪ್ತಿಗಾಗಿ ಇನ್ನೊಬ್ಬ ನನ್ನನ್ನು ಹಾರೈಸಿ ಇರಬೇಕಿಲ್ಲ. ನನ್ನೊಳಗೆ ನಾನೇ ನಗಬಲ್ಲೆ; ಕುಣಿಯಬಲ್ಲೆ. ನಾನೊಬ್ಬನೇ ತಿರುಗಾಡಬಲ್ಲೆ. ಈಗ ನನಗೆ ಗೆಳೆಯರು ಬೇಡ. ಅವರನ್ನು ನಾನು ಸಹಿಸಲಾರೆ. ಅವರ ವರ್ತನೆಯ ಚೊಕ್ಕತನ ನನ್ನ ಕಣ್ಣೆದುರು ಮಾಸದ ದೃಶ್ಯವಾಗಿದೆ.

ಬೆಳಗಿನ ಹಕ್ಕಿಗಳ ಚಿಲಿಪಿಲಿ, ಬಾಲಸೂರ್ಯನ ಉದಯ, ಚೇತನಗೊಂಡು ನಲಿಯುತ್ತಿರುವ ಹಸಿರೆಲೆಗಳು, ಎಡೆಬಿಡದೆ ಅಪ್ಪುತ್ತಿರುವ ತಂಗಾಳಿ ಇವೆಲ್ಲ ನನ್ನ ನೂತನ ಜೀವನದ ಚಿಹ್ನೆಗಳು; ಕುರುಹುಗಳು.

ಇನ್ನು ಹಾಗೆ ಬಾಳುವೆ. ಆ ಬಾಳು ನಾನು ಇಚ್ಛಿಸಿದ ಆದರ್ಶ ಬಾಳಿಗಿಂತ ಯಾವ ರೀತಿಯಲ್ಲಿ ಕೀಳಾಗಿರದೆಂದು ಖಂಡಿತವಿದೆ. ಇನ್ನು ಮನುಷ್ಯ, ಅವನ ಕುಟಿಲತೆ ಅವನ ಅಶ್ರದ್ಧೆ, ಅವನ ನಟನೆ, ಅವನ ಅಸೂಯೆ—ಯಾವುವೂ ನನ್ನ ಮುಂದೆ ನನ್ನ ನವಸೃಷ್ಟಿಯ ಮುಂದೆ ಸತ್ವವಿಲ್ಲದ ಛಾಯೆಗಳು; ಬರಿಯ ಛಾಯೆಗಳು.

ಇದಕ್ಕೆ ವಿಪರೀತವಾದ ಕಲ್ಪನೆಗಳೂ ಮನದಲ್ಲಿ ತೂರಿಬಂದು ನನ್ನನ್ನು ಹುಚ್ಚು ಮಾಡುತ್ತವೆ. ಮೊದಮೊದಲು ನನ್ನ ಗೆಳೆಯನೇ ನನ್ನ ಛಾಯೆಯೆಂದು ಭಾವಿಸಿದ್ದೆ. ಆದರೆ ಆ ನನ್ನ ನೆರಳನ್ನು ಕಿತ್ತು ನಾನೇ ಇಂದು ಛಾಯೆಯಾಗಿಹೋಗಿರುವೆ. ಎಲ್ಲರ ಬಾಳಿಗೂ ಅಸ್ತಿತ್ವವನ್ನು ತಂದುಕೊಡುವಂತಹದು ಈ ಲೋಕದ ಮಾಯೆ. ಅದೇ ಇಲ್ಲವಾದರೆ ಉಳಿದುದೆಲ್ಲ ಛಾಯೆಯೇ. ಸರಿ ಹಾಗಾದರೆ ಆ ನೇಹದ ಮಾಯೆ ಕಳಚಿ ಈ ಜಗದಲ್ಲಿ ಛಾಯೆಯಾಗಿ ಸುಳಿವ ಛಾಯಾ ಮನುಷ್ಯನೇ ನಾನು?



ಎಪ್ರಿಲ ೫ ರಿಂದ ೧೧ ರ ವರೆಗೆ

ಜ್ಯೋತಿಷಿ— ಕೃಷ್ಣಶಾಸ್ತ್ರಿ ಛತೆ ಭವಿಷ್ಯ ಕಥನ ಆಫೀಸ ಖಡೇಬಜಾರ ಬೆಳಗಾವಿ.

ಮೇಷ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಮೊದಲಿಗಿಂತ ಅನುಕೂಲ. ಆದರೆ ಮಕ್ಕಳು ಮತ್ತು ನೌಕರಚಾಕರರಿಗೆ ಕಾಹಿಲೆ. ಪ್ರಾಪಂಚಿಕ ಸುಖ ಅನುಕೂಲ. ಪ್ರಿಯ ಜನರ ಸಹವಾಸ. ಉದ್ಯೋಗದಲ್ಲಿ ಪ್ರಗತಿ ಅನುಕೂಲ. ಆದರೆ ಪ್ರತಿಷ್ಠೆ ಮತ್ತು ಲಾಭ ಬಹಳ ಕಡಿಮೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಿಗೆ ಅಷ್ಟೇ ಹಾನಿ. ಮಿತ್ರರು ಬೇಕೆಂತಲೆ ಛಿದ್ರಗಳನ್ನು ತೆಗೆದು ಚುಚ್ಚುವ ಪ್ರಯತ್ನ. ವಾಹನದಲ್ಲಿ ಹರಕು ಮುರಕು ಮತ್ತು ಸ್ಥಾವರದಲ್ಲಿ ಬೆಂಕಿಯ ಮತ್ತು ಕಳವಿನ ಅಂಜಿಕೆ. ಯೋಜಿಸಲ್ಪಟ್ಟ ಕೆಲಸಗಳನ್ನು ಬದಿಗೆ ಸರಿಸಿ ನಡುವೆ ಉದ್ಭವಿಸಿದ ಕೆಲಸಗಳನ್ನು ಮೊದಲು ಕೈಕೊಳ್ಳಬೇಕಾಗುವದು ಭೆಟ್ಟಿ ಮತ್ತು ಪತ್ರವ್ಯವಹಾರಕ್ಕಿಂತ ಪ್ರವಾಸ ಅನುಕೂಲ. ಅಶ್ವಿನಿಯ ಕೊನೆಯ ೨ ಮತ್ತು ಭರಣಿಯ ಮೊದಲನೆ ೨ ಚರಣಗಳಿಗೆ ತೊಂದರೆ ಕಡಿಮೆ. ತಾ ೫-೬-೧೦ ಅನುಕೂಲ.

ವೃಷಭ

ನಿಮ್ಮ ಮತ್ತು ಮಕ್ಕಳ ಪ್ರಕೃತಿ ಉತ್ತಮ ಆದರೆ ಹೆಂಡತಿಯದು ಸ್ವಲ್ಪ ಕೆಡುವದು. ಉಭಯತರಲ್ಲಿ ಪ್ರೇಮ ಮತ್ತು ಐಕ್ಯ ಉತ್ತಮ. ಸ್ಥಾವರದಲ್ಲಿ ಭಾವೀ ಲಾಭಕ್ಕೆ ಪೋಷಕವಾದ ಕೆಲವೊಂದು ಘಟನೆಗಳು ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಸ್ವಲ್ಪ ದಗದಗಿಯಿಂದ. ಆದರೆ ಮನಸ್ಸಿನಂತೆ. ಅವಚಿತ ಲಾಭದ ಸಂಭವ ಬಹಳ. ಮಿತ್ರಸುಖ ಸಾಮಾನ್ಯ. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರ ವ್ಯವಹಾರವೂ ಅನುಕೂಲ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೆಯ ಯಶಸ್ಸು. ಕೃತ್ತಿಕೆಯ ಕೊನೆಯ ೩ ಮತ್ತು ರೋಹಿಣಿಯ ಮೊದಲನೆ ೨ ಚರಣಗಳಿಗೆ ಹೆಚ್ಚು ಅನುಕೂಲ. ತಾ. ೫-೬-೭-೮ ಅನುಕೂಲ.

ಮಿಥುನ

ನಿಮ್ಮ ಮತ್ತು ಹೆಂಡತಿಯ ಪ್ರಕೃತಿ ಅನುಕೂಲ ಆದರೆ ಮಕ್ಕಳಿಗೆ ಮತ್ತು ಕೆಲ ದಿನಗಳ ವರೆಗೆ ಇರಲು ಬಂದ ಅತಿಥಿಗಳಿಗೆ ಕಾಹಿಲೆಯ ಸಂಭವ. ಪ್ರಾಪಂಚಿಕ ಸಮಾಧಾನ ಕಡಮೆ. ಉದ್ಯೋಗದಲ್ಲಿ ಪ್ರಗತಿ ಸಾಧಾರಣವೆ ಆದರೆ ಪ್ರತಿಷ್ಠೆ ಮತ್ತು ಲಾಭವು ಬಹಳ. ಚೈನಿಯಲ್ಲಿ ಇಲ್ಲವೆ ದೊಡ್ಡಸ್ತನಕ್ಕೆ ಬಿದ್ದು ವೆಚ್ಚವೂ ವಿಪರೀತ. ಮಿತ್ರತ್ವದಲ್ಲಿ ವಿರೋಧ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಯಶಸ್ಸು. ಆದರೆ ಶತ್ರುಗಳ ಜೋರು ಪುನಃ ಹೆಚ್ಚೀ. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರ ಅನುಕೂಲ. ಆರಿದ್ರೆಯ ಕೊನೆಯ ೨ ಮತ್ತು ಪುನರ್ವಸುವಿನ ಮೊದಲನೆ ೨ ಚರಣಗಳಿಗೆ ತೊಂದರೆ ಕಡಮೆ. ತಾ ೬-೮-೯-೧೦ ಅನುಕೂಲ.

ಕರ್ಕ

ಪ್ರಕೃತಿಗೆ ಶಾರೀರಕ ಕ್ಲೇಶ ಕಡಿಮೆ ಆದರೆ ಮಾನಸಿಕ ಕ್ಲೇಶ ಹೆಚ್ಚು. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಸಾಧಾರಣ ಅನುಕೂಲ ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಮಧ್ಯಮ ಆದರೆ ಲಾಭ ಉತ್ತಮ. ನೌಕರರಿಗೆ ಹೆಚ್ಚು ಅನುಕೂಲ ಮಿತ್ರಸುಖ ಉತ್ತಮ. ಸ್ತ್ರೀಯರಲ್ಲಿ ಆದರದ ವಿಶೇಷ ಪ್ರಸಂಗ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಮೊದಲು ನಿಮ್ಮದು ಜೋರು. ಆದರೆ ನಂತರ ಶತ್ರುಗಳದೇ ಹೆಚ್ಚು ಜೋರು. ಭೆಟ್ಟಿಯ ಕೆಲಸದಲ್ಲಿ ವಾಗ್ವಾದ ಮತ್ತು ಮನಭಂಗ. ಪ್ರವಾಸ ಮತ್ತು ಪತ್ರವ್ಯವಹಾರ ಮಧ್ಯಮ. ಪುಷ್ಯದ ಕೊನೆಯ ೨ ಮತ್ತು ಆಶ್ಲೇಷಾದ ಮೊದಲನೆ ೨ ಚರಣಗಳಿಗೆ ತೊಂದರೆ ಕಡಮೆ. ತಾ. ೮—೯—೧೦—೧೧ ಅನುಕೂಲ.

ಸಿಂಹ

ಪ್ರಕೃತಿಗೆ ಬಹಳ ಕ್ಲೇಶ ಹೆಂಡತಿ ಗೂಡ ನೋಲಿಂದ ಮೇಲೆ ಬಡಿದಾಟ ವಾಗ್ವಾದ ಪ್ರಾಪಂಚಿಕ ಸುಖ ದಗದಗಿಯದು ಆದರೆ ಮಕ್ಕಳಿಂದ ಬ್ರ ಸುಖ. ಉದ್ಯೋಗದಲ್ಲಿ ಸ್ವಲ್ಪ ಪ್ರಗತಿ. ಪ್ರತಿಷ್ಠೆ ಅನುಕೂಲ ಆದರೆ ಲಾಭ ಬಹಳ ಕುಂದುತ್ತ ಹೋಗುವದು. ಕೆಲ ಧರ್ಮ ಕೃತ್ಯಗಳು ಆದರೆ ಅವನ್ನು ಪೂರ್ಣಗೊಳಿಸಲು ಹದಿನೆಂಟು ಅಡಚಣಿಗಳು. ಸ್ವಲ್ಪ ಅವಚಿತ ಲಾಭ ಆದರೆ ಕೆಲವೊಂದು ವ್ಯವಹಾರದಲ್ಲಿ ಆಕಸ್ಮಿಕ ಹಾನಿಯ ಸಂಭವವೂ ಉಂಟು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಶತ್ರುಗಳು ಮಾನವಕ್ಕೆ ನಾಚಿಕೆ ಬರುವಂತಹ ಪ್ರಸಂಗಗಳಿಂದ ಛಲಿಸುವರು. ಪ್ರವಾಸ ಮತ್ತು ಪತ್ರ ವ್ಯವಹಾರಕ್ಕಿಂತ ಭೆಟ್ಟಿ ಅನುಕೂಲ. ಮಘಾದ ಕೊನೆಯ ೨ ಮತ್ತು ಪುಷ್ಯದ ಮೊದಲನೆ ೨ ಚರಣಗಳಿಗೆ ತೊಂದರೆ ಕಡಮೆ. ತಾ. ೫—೬—೧೧ ಅನುಕೂಲ.

ಕನ್ಯಾ

ಪ್ರಕೃತಿ ಮತ್ತು ಸ್ತ್ರೀ ಸುಖ ಅನುಕೂಲ ಆದರೆ ಮಕ್ಕಳು ಸ್ವೇಚ್ಛಾವೃತ್ತಿಗಳವರಲ್ಲದರಿಂದ ಮನಸ್ಸಿನಲ್ಲಿ ವಿಷಾದ ಮತ್ತು ಉಳಿದ ವಿಷಯಗಳಲ್ಲಿಯೂ ಪ್ರಾಪಂಚಿಕ ಸುಖ ಕಡಮೆಯೆ. ಮಿತ್ರರು ಸೇಡು ತೀರಿಸಿಕೊಳ್ಳುವ ಬುದ್ಧಿಯಿಂದ ವಿಪರೀತ ಕೆಲಸಗಳಲ್ಲಿ ಬಿದ್ದು ದುರ್ಲೌಕಿಕವನ್ನುಂಟು ಮಾಡುವ ಹೊಂಚು. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಅನುಕೂಲ ಆದರೆ ಲಾಭದ ಸಮಯಕ್ಕೆ ಗೊಂದಲವೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನಸ್ಥಿತಿ ಪ್ರವಾಸ ಸುಖ, ಮತ್ತು ಅದರ ತರುವಾಯದಲ್ಲಿ ಭೆಟ್ಟಿ ಮತ್ತು ಪತ್ರವ್ಯವಹಾರ ಅನುಕೂಲ. ಉತ್ತರಾದ ಕೊನೆಯ ೨ ಮತ್ತು ಹಸ್ತಾದ ಮೊದಲನೆ ೨ ಚರಣಗಳಿಗೆ ಅನುಕೂಲ. ತಾ. ೮-೯- ಅನುಕೂಲ.

ತುಲಾ

ಸ್ವತಃಕ್ಕೆ ಹೆಂಡತಿಗೆ ಮತ್ತು ಮಕ್ಕಳಿಗೆ ಬಹಳ ಕಾಹಿಲೆ. ಆದರೆ ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಕೆಲ ಮಟ್ಟಿಗೆ ಅನುಕೂಲ. ಬಂಧುವರ್ಗದವರಿಂದ ಸಹಾಯ ಮತ್ತು ಪ್ರೇಮದ ವರ್ತನೆ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಬಹಳ ಕಡಮೆ ಆದರೆ ವೆಚ್ಚ ಮಾತ್ರ ಅವಾಸ್ತವ. ಮಿತ್ರರಿಂದ ಬುದ್ಧಿಭೇದ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳು ಅಷ್ಟೇ. ಖೊಟ್ಟಿ ಕೆಲಸಗಳನ್ನು ಮಾಡಿದ ಬಗ್ಗೆ ನ್ಯಾಯ ಕರ್ತರ ಆರೋಪ ಮಹತ್ವದ ಸಂಗತಿಗಳಲ್ಲಿ ವಿಸ್ಮರಣ ಬೀಳುವದರಿಂದ ಬಹಳ ಗೊಂದಲ. ಪ್ರವಾಸಾದಿ ಕೆಲಸ ತೊಂದರೆಯದು ಸ್ವಾತಿಯ ಕೊನೆಯ ೨ ಮತ್ತು ವಿಶಾಖದ ಮೊದಲನೆ ೨ ಚರಣಗಳಿಗೆ ತೊಂದರೆ ಕಡಮೆ. ತಾ, ೫-೬-೧೦ ಅನುಕೂಲ.

ವೃಶ್ಚಿಕ

ಪ್ರಕೃತಿ ಸ್ತ್ರೀ ಮತ್ತು ಪ್ರಾಪಂಚಿಕ ಸುಖವೂ ಉತ್ತಮ. ಮಕ್ಕಳಲ್ಲಿ ಒಬ್ಬರ ವಿಶೇಷ ಉನ್ನತಿ. ಬುದ್ಧಿವಿಷಯಕ ಕೆಲಸಗಳಲ್ಲಿ ಬಹಳ ವಿಜಯ. ಉದ್ಯೋಗದಲ್ಲಿ ಲಾಭ ಉತ್ತಮ. ಆದರೆ ಪ್ರಗತಿ ಮತ್ತು ಪ್ರತಿಷ್ಠೆಯ ವಿಷಯಗಳಲ್ಲಿ ಮೊದಲು ಬಹಳ ಅಡಚಣಿಗಳಿಗೆ ಒಳಗಾಗುವ ಪ್ರಸಂಗ. ಮಹತ್ವದ ವಿಷಯಗಳಲ್ಲಿ ಮಿತ್ರರಿಂದ ಬಹಳ ಸಹಾಯ. ಆದರೆ ಅವರ ಮಾತುಗಳಲ್ಲಿ ಕೊಂಕು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಅನುಕೂಲ. ಅಲ್ಲದೆ ಶತ್ರುಗಳು ಪರ ಭಾರೆ ಹಾನಿಗೊಳಗಾಗುವರು. ಪ್ರವಾಸ ಮತ್ತು ಭೆಟ್ಟಿಗಿಂತ ಪತ್ರವ್ಯವಹಾರ ಅನುಕೂಲ. ಅನುರಾಧದ ಕೊನೆಯ ೨ ಮತ್ತು ಜ್ಯೇಷ್ಠಾದ ಮೊದಲನೆ ೨ ಚರಣಗಳಿಗೆ ಹೆಚ್ಚು ಅನುಕೂಲ. ತಾ. ೮, ೯, ಉತ್ತಮ.

ಧನು

ಪ್ರಕೃತಿ ಉತ್ತಮ. ಹೆಂಡತಿಯದೂ ಅನುಕೂಲ. ಆದರೆ ವಿಷಯ ಸುಖದಲ್ಲಿ ವಿರಸ. ಮಕ್ಕಳು ಅವಿಚಾರದ ಕೃತ್ಯಗಳನ್ನೆಸಗುವರು. ಎಲ್ಲ ವಿಷಯಗಳಲ್ಲಿ ಪ್ರಾಪಂಚಿಕ ಸಮಾಧಾನ ಕಡಮೆಯೆ. ಬಂಧುವರ್ಗದವರಲ್ಲಿ ಕ್ಲೇಶ ಇಲ್ಲವೆ ವಿಯೋಗದ ಸಂಭವ. ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆಯೂ ಸಾಧಾರಣ ಅನುಕೂಲ. ಆದರೆ ಲಾಭದ ಮನೆಯಲ್ಲಿ ಮಾತ್ರ ಪೂಜಿ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಉಭಯ ಪಕ್ಷಗಳಲ್ಲಿ ಸಮಾನ ಸ್ಥಿತಿ. ಕೆಲ ಸ್ತ್ರೀಯರಿಂದ ಬಹಳ ದ್ವೇಷ. ಮಿತ್ರರು ಮೋಸಗೊಳಿಸುವ ಹೊಂಚು. ಪ್ರವಾಸಕ್ಕಿಂತ ಭೆಟ್ಟಿ ಮತ್ತು ಪತ್ರವ್ಯವಹಾರವೂ ಅನುಕೂಲ. ಮೂಲಾದ ಕೊನೆಯ ೨ ಮತ್ತು ಪೂರ್ವಾಷಾಢಾದ ಮೊದಲನೆ ೨ ಚರಣಗಳಿಗೆ ತೊಂದರೆ ಕಡಮೆ. ತಾ. ೫, ೬, ೧೦ ಅನುಕೂಲ.

ಮಕರ

ನಿಮ್ಮ ಮತ್ತು ಹೆಂಡತಿಯ ಬಗ್ಗೆ ಪ್ರಕೃತಿಯ ಅಳಬುರುಕತನ ನಡೆದೆ ಇದೆ. ದುಷ್ಟ ಆಪ್ತರು ಇಲ್ಲವೆ ನೆರೆಯವರು ಕೆಲ ವಿಪರೀತ ಖೊಟ್ಟಿ ಮಾತುಗಳನ್ನು ಹೇಳುವದರಿಂದ ಮನಸ್ಸು ಅಸ್ವಸ್ಥ. ಪ್ರಾಪಂಚಿಕ ಸುಖ ಸಾಮಾನ್ಯ. ಉದ್ಯೋಗದಲ್ಲಿ ಪ್ರಗತಿ ಪ್ರತಿಷ್ಠೆ ಮತ್ತು ಲಾಭ ಸಾಧಾರಣ ಅನುಕೂಲ. ಆದರೆ ಕೆಲ ಸಂಗತಿಗಳಲ್ಲಿ ಮನಸ್ಸಿನ ವಿರುದ್ಧ ವರ್ತಿಸುವ ಇಲ್ಲವೆ ವೆಚ್ಚದ ಪ್ರಸಂಗ. ವಾದದಲ್ಲಿ ಸ್ಪರ್ಧೆಯಲ್ಲಿ ಬಹಳ ಅನುಕೂಲತೆ. ಮಿತ್ರರಲ್ಲಿ ಕ್ಲೇಶ. ಭೆಟ್ಟಿಗಿಂತ ಪ್ರವಾಸ ಮತ್ತು ಪತ್ರವ್ಯವಹಾರ ಅನುಕೂಲ. ಉತ್ತರಾಷಾಢಾದ ಕೊನೆಯ ೨ ಮತ್ತು ಶ್ರವಣಾದ ಮೊದಲನೆ ೨ ಚರಣಗಳಿಗೆ ತೊಂದರೆ ಕಡಮೆ. ತಾ. ೫, ೬, ೭, ೮ ಅನುಕೂಲ.

ಕುಂಭ

ಪ್ರಕೃತಿ ಸಾಧಾರಣ ಆದರೆ ಹೆಂಡತಿ ಮಕ್ಕಳ ಮತ್ತು ಪ್ರಾಪಂಚಿಕ ಸುಖ ಉತ್ತಮ. ಕೆಲವೊಂದು ಮುಖ್ಯ ಯಶಸ್ಸಿನ ಸಂಗತಿ ಸಂಭವಿಸುವ ಯೋಗ ಉದ್ಯೋಗದಲ್ಲಿ ಪ್ರಗತಿ ಮತ್ತು ಪ್ರತಿಷ್ಠೆ ಬಹಳ ಆದರೆ ಲಾಭ ವಿಶೇಷ ಹೆಚ್ಚು. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಬಹಳ ಅನುಕೂಲತೆ. ಮಿತ್ರ ಸುಖ ಉತ್ತಮ. ವಾಹನ ಆಂತಿ ಮಕ್ಕಳಲ್ಲಿ ಹೊಸ ಹೊಸ ಯೋಜನೆಗಳು ಪ್ರವಾಸ ಮತ್ತು ಪತ್ರವ್ಯವಹಾರ ಭೆಟ್ಟಿಗಿಂತ ಹೆಚ್ಚು ಅನುಕೂಲ. ಶತತಾರಕೆಯ ಕೊನೆಯ ೨ ಮತ್ತು ಪೂರ್ವಾಭಾದ್ರಪದದ ಮೊದಲನೆ ೨ ಚರಣಗಳಿಗೆ ಹೆಚ್ಚು ಅನುಕೂಲ. ತಾ. ೭, ೮, ೯, ೧೦ ಅನುಕೂಲ.

ಮೀನ

ಪ್ರಕೃತಿ ಮತ್ತು ಸ್ತ್ರೀ ಸುಖ ಉತ್ತಮ. ಆದರೆ ಮಕ್ಕಳಿಗೆ ಸ್ವಲ್ಪ ಕ್ಲೇಶ. ಉಳಿದ ವಿಷಯಗಳಲ್ಲಿ ಪ್ರಾಪಂಚಿಕ ಸುಖ ಸಾಮಾನ್ಯ. ಉದ್ಯೋಗದಲ್ಲಿ ಪ್ರಗತಿ ಮತ್ತು ಲಾಭ ಅಂದಾಜಿನಷ್ಟು. ಆದರೆ ಪ್ರತಿಷ್ಠೆ ಬಹಳ. ಮಿತ್ರರಲ್ಲಿ ಕೆಲ ಜನರಿಂದ ಬಹಳ ಸಹಾಯ. ಆದರೆ ಕೆಲವರಿಂದ ಬಹಳ ತೊಂದರೆ. ವಾದದಲ್ಲಿ ಮತ್ತು ಸ್ಪರ್ಧೆಯಲ್ಲಿ ಒಳ್ಳೇ ಅನುಕೂಲತೆ. ಪ್ರವಾಸ ತೊಂದರೆಯದು. ಆದರೆ ಭೆಟ್ಟಿ ಮತ್ತು ಪತ್ರವ್ಯವಹಾರ ಉತ್ತಮ. ಉತ್ತರಾಭಾದ್ರಪದದ ಕೊನೆಯ ೨ ಮತ್ತು ರೇವತಿಯ ಮೊದಲನೆ ೨ ಚರಣಗಳಿಗೆ ಹೆಚ್ಚಿಗೆ ಅನುಕೂಲ. ತಾ. ೮, ೯, ೧೦, ೧೧ ಅನುಕೂಲ.

ಭಾರತದ ವಿದೇಶ ಧೋರಣೆ

(೮ ನೇ ಪುಟದಿಂದ)

ಆ್ಯಂಗ್ಲೋ ಅಮೇರಿಕನ್ನ ಪಕ್ಷಗಳು ಕಾಶ್ಮೀರ ಚರ್ಚೆಯಲ್ಲಿ ಭಾರತದ ವಿರುದ್ಧ ಸೆಡ್ಡು ಹೊಡೆದು ನಿಂತವು ಈ ಬಲವನ್ನು ಕಂಡೇ ರಶಿಯವು ಭಾರತಕ್ಕೆ ಬೆಂಬಲಕೊಡಲು ಇದೀಗ ಸಿದ್ಧವಾಗಿದೆ. ಇವೆಲ್ಲ ಘಟನೆಗಳನ್ನು ನೋಡಿದರೆ ಭಾರತಕ್ಕೆ ಜಾಗತಿಕ ರಾಜಕಾರಣದಲ್ಲಿ ಎರಡೇ ಎರಡು ಮಾರ್ಗಗಳು ತೆರೆದಿದ್ದವು ಅವೆಂದರೆ: ಜಾಗತಿಕ ರಾಜ ಕಾರಣದಲ್ಲಿ ಕೈಹಾಕದೇ ಸುಮ್ಮನೇ ಪ್ರೇಕ್ಷಕ ಪಾತ್ರವನ್ನು ವಹಿಸಬೇಕು; ಇಲ್ಲವೇ ಜಗತ್ತನ್ನೇ ಇಬ್ಭಾಗವಾಗಿಸಿದ ಈ ಎರಡು ಪಂಗಡಗಳಲ್ಲೊಂದನ್ನು ಸೇರಿ ತನ್ನ ಕೇವಲ ಸ್ವಾರ್ಥವನ್ನು ಸಾಧಿಸಿಕೊಳ್ಳಬೇಕು. ಭಾರತವು ಎರಡನೇ ದಾರಿಯನ್ನು ನಿರಾಕರಿಸಿದ್ದು ಸ್ವಾಗತಾರ್ಹ ಆದರೆ ಮೊದಲನೇ ದಾರಿಯನ್ನು ತುಳಿದಿಲ್ಲವೆಂಬದು ನಿಷಾದಕರ.

ಅಲ್ಲದೆ ಭಾರತದ ವಿದೇಶ ಧೋರಣಕ್ಕೆ ಇನ್ನೂ ಒಂದು ಮಾರ್ಗವಿದೆ. ಸ್ಥಾನಮಾನ ಬಲದಿಂದಲೂ ಪರಂಪರೆ ಸಾಮರ್ಥ್ಯಗಳ ಬಲದಿಂದಲೂ ಏಶಿಯಾ ರಾಷ್ಟ್ರಗಳ ಧುರೀಣತ್ವವು ಹಿಂದುಸ್ತಾನಕ್ಕೆ ಕಾದು ಕುಳಿತಿದೆ. ಇದರ ಸದುಪಯೋಗವನ್ನು ಭಾರತವು ತೆಗೆದುಕೊಳ್ಳಬೇಕು. ಕಳೆದ ಮಾರ್ಚದಲ್ಲಿ ಪಂ. ನೆಹ್ರುರವರು ನೆರೆಸಿದ ಏಶಿಯಾ ರಾಷ್ಟ್ರಗಳ ಪರಿಷತ್ತಿನ ಲಾಭ ಪಡೆದುಕೊಂಡು ಜಾಗತಿಕ ರಾಜ ಕಾರಣದಲ್ಲಿ ಏಶಿಯಾ ರಾಷ್ಟ್ರಗಳ ಒಂದು ಗುಂಪನ್ನು ನಿರ್ಮಿಸಬೇಕು. ಪಲಿತ ರಾಷ್ಟ್ರಗಳ ಕೈವಾರಿಯಾಗಿ ಭಾರತವು ಜಗತ್ತಿನ ರಾಜಕಾರಣದಲ್ಲಿ ಪ್ರಮುಖ ಮತ್ತು ಮಹತ್ವದ ಭಾಗವಹಿಸಬಲ್ಲದು. ಇಂಡೋನೇಶಿಯದ ಡಾ. ಸುತನ ಶಾರೀರರು ಅಮೇರಿಕೆಯಿಂದ ಸ್ವದೇಶಕ್ಕೆ ಹಿಂತಿರುಗುವಾಗ ದಿಲ್ಲಿಯಲ್ಲಿ ಇದೇ ಆಶಯ ಒಂದು ಭಾಷಣವನ್ನು ಮಾಡಿ ಏಶಿಯಾದ ರಾಷ್ಟ್ರಗಳ ಮುಖಂಡತ್ವ ವಹಿಸಲು ಹಿಂದುಸ್ತಾನಕ್ಕೆ ಬೇಡಿಕೊಂಡರು ಈಗ ಏಶಿಯಾದ ಎಲ್ಲ ರಾಷ್ಟ್ರಗಳಿಗೂ ಪಶ್ಚಿಮಾತ್ಯ ರಾಷ್ಟ್ರಗಳಿಂದ ಅನ್ಯಾಯ ಸಂಭವಿಸಿದೆ. ಪಶ್ಚಿಮಾತ್ಯ ರಾಷ್ಟ್ರಗಳ ವಿರುದ್ಧ ಅವು ಒಂದು ಗೂಡಲು ಒಂದು ಕಾಲಮೇಲೆ ಸಿದ್ಧವಿವೆ. ಇಂತಹ ಸಂದರ್ಭದಲ್ಲಿ ಏಶಿಯಾ ರಾಷ್ಟ್ರಗಳ ಗುಂಪನ್ನು ರಚಿಸಿ ಅವುಗಳ ಬಲದ ಮೇಲೆ ನ್ಯಾಯ ಸಾಧನೆಗೆ ಹೋರಾಡುವ ಮಾರ್ಗವೊಂದು ಭಾರತಕ್ಕೆ ಸದಾ ತೆರೆದಿದೆ. ಭಾರತದ ವಿದೇಶ ಧೋರಣೆಯಲ್ಲಿ ಇದೂ ಒಂದು ಆಶಾದಾಯಕ ಧೋರಣೆಯಿದೆಯೆಂದು ಹೇಳಬಹುದು

ಈ ಪತ್ರಿಕೆಯು ಹುಬ್ಬಳ್ಳಿಯ ಸಂಯುಕ್ತ ಕರ್ನಾಟಕ ಮುದ್ರಣಾಲಯದಲ್ಲಿ "ಲೋಕ ಶಿಕ್ಷಣ ಟ್ರಸ್ಟಿನ" ಪರವಾಗಿ ಹ. ರಾ. ಮೊಹರೆಯವರಿಂದ ಮುದ್ರಿಸಿ ಪ್ರಕಟವಾಯಿತು.